ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಏಪ್ರಿಲ್ 25 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 10 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಯನಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

#6, 3ನೇ ಮುಖ್ಯ ರಸ್ತೆ, ನೇತಾಜಿ ವೃತ್ತದ ಹತ್ತಿರ, ದಟ್ಟಗಳ್ಳಿ, ರಾಜರಾಜೇಶ್ವರಿ ನಗರ, ಮೈಸೂರು

CGHS ಹಾಗೂ NABH ಮಾನ್ಯತೆ ಪಡೆದಿದೆ

ಈ ಮೂರು ವರ್ಷದಲ್ಲಿ 4,500ಕ್ಕೂ ಅಧಿಕ ಶಸ್ತ್ರ ಚಿಕಿತ್ಸೆ, 55,000ಕ್ಕೂ ಹೆಚ್ಚು ಮಂದಿಗೆ ಯಶಸ್ವಿ ಚಿಕಿತ್ಸೆ ದಾಖಲೆ









"ಕರುನಾಡಿನ ನಟಸೌರ್ವಭೌಮ, ಕನ್ನಡದ ಕಟ್ಟಾಳು, ವರನಟ ಡಾ|| ರಾಜ್‌ಕುಮಾರ್ ಅವರ ಸ್ಫೂರ್ತಿಯೇ ನಮ್ಮ ಸೇವಾ ಮಾರ್ಗ. ಅವರ 97ನೇ ಹುಟ್ಟುಹಬ್ಬವನ್ನು ಶುಕ್ರವಾರ ಮೈಸೂರು ವಿಜಯನಗರ ಮೊದಲ ಹಂತದ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಶ್ರೀಭಾಷ್ಯಂ ಸ್ವಾಮೀಜಿಯವರ ಸಾನಿಧ್ಯ, ಆಡಳಿತಾಧಿಕಾರಿ ಶ್ರೀನಿವಾಸನ್ ರ ಉಪಸ್ಥಿತಿ, ಚಾಮುಂಡೇಶ್ವರಿ ಕ್ಷೇತ್ರದ ಹಿರಿಯ ಶಾಸಕರಾದ ಶ್ರೀ ಜಿ.ಟಿ ದೇವೇಗೌಡರ ನೇತೃತ್ವದಲ್ಲಿ ಆಸ್ಪತ್ರೆ ಸಿಬ್ಬಂದಿ ವರ್ಗದವರು ಸಂಭ್ರಮದಿಂದ ಆಚರಿಸಿ, ಡಾ|| ರಾಜ್‌ರ ಗುಣಗಾನ ಮಾಡಲಾಯಿತು."



ಗ್ರಾಮೀಣ ಪ್ರದೇಶದ ಬಡ ಕೃಷಿ ಕುಟುಂಬದಿಂದ ಬಂದ **ಕೆ.ಬಿ.ಕುಮಾರ್** ಅವರ ನಿಸ್ವಾರ್ಥ ಸೇವೆಗೆ ಸಾಕ್ಷಿ...

ಸಾರ್ವಜನಿಕರಿಗೆ, ಅದರಲ್ಲೂ ಮಧ್ಯಮ ವರ್ಗದವರು ಬಡವರು ಸೇರಿದಂತೆ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ ದೊರಕಬೇಕೆಂಬ ಸೇವಾ ಮನೋಭಾವದಿಂದ ಆಸ್ಪತ್ರೆಯನ್ನು ಪ್ರಾರಂಭಿಸಿದ್ದೇವೆ. ಬರೀ ಲಾಭದ ನಿರೀಕ್ಷೆ ನಮ್ಮದಲ್ಲ. ನಾಲ್ಕು ವರ್ಷದಿಂದ ಯಶಸ್ವಿಯಾಗಿ ಆರೋಗ್ಯ ಸೇವೆ ಕಲ್ಪಿಸುತ್ತಿರುವ ನಮ್ಮೊಂದಿಗೆ ನಡೆದುಬಂದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇವೆ. ಸಾರ್ವಜನಿಕ ಆರೋಗ್ಯ ಸೇವೆ ಉದ್ದೇಶದಿಂದಲೇ ನಿರ್ಮಿಸಿರುವ ಆಸ್ಪತ್ರೆಯು ಸದಾ ಜನಪರ, ಬಡವರ ಪರ ಸೇವೆಗೆ ಮುಡಿಪಾಗಿದೆ.

ಗಂಭೀರ ಸ್ವರೂಪದ ರೋಗಬಾಧೆಯಿಂದ ದಾಖಲಾದವರು ಯಶಸ್ವಿ ಚಿಕಿತ್ಸೆಯಿಂದ ಶೀಘ್ರ ಗುಣಮುಖರಾಗಿ ಮನೆಗೆ ಮರಳಿದ್ದಾರೆ.

ಆಸ್ಪತ್ರೆಯಲ್ಲಿನ ಸೌಕರ್ಯಗಳು

- General Medicine
- Trauma & Emergency Care
- Cardilogy
- Medical Gastroenterolgy
- Surgical Gastroenterolgy
- General Surgery & ENT
- Obstetrics and Gynecology
- Ophthalmology
- Pediatrics
- Plastic Surgery
- Thoracic Surgery
- Urology
- Physiotherapy
- Oncology
- Nephrology
- Neurology
- Dermatology
- Anesthesiology
- Radiology -X-Ray & CT
- Laboratory
- Skin disease STD and Venereal disease

ನಮ್ಮಲ್ಲಿ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಸೌಲಭ್ಯ, ಇಎಸ್‌ಐ ಸೌಲಭ್ಯ, ಸಿಜಿಹೆಚ್‌ಎಸ್ ಸೇವೆಗಳು ಹಾಗೂ ಎಲ್ಲಾ ರೀತಿಯ ಸರ್ಕಾರಿ ಮತ್ತು ಖಾಸಗಿ ವಿಮಾ ಸೌಲಭ್ಯಗಳು ದೊರೆಯುತ್ತವೆ. 4500ಕ್ಕೂ ಹೆಚ್ಚು ಯಶಸ್ವಿ ಶಸ್ತ್ರ ಚಿಕಿತ್ಸೆಗಳು ಜರುಗಿದ್ದು, ರೋಗಿಗಳು ಸಂಪೂರ್ಣ ಗುಣಮುಖರಾಗಿದ್ದಾರೆ. ಉನ್ನತ ಗುಣ ಮಟ್ಟದ ಚಿಕಿತ್ಸೆಯನ್ನು ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ನೀಡಲಾಗುತ್ತಿದೆ. ಇದಲ್ಲದೆ ನುರಿತ ವೈದ್ಯಕೀಯ ಸಿಬ್ಬಂದಿ ಒಳಗೊಂಡಿದ್ದು, ಜೊತೆಗೆ ಸುಸಜ್ಜಿತ ಅತ್ಯಾಧುನಿಕ ವೈದ್ಯಕೀಯ ಉಪಕರಣ ಗಳನ್ನು ಹೊಂದಿದೆ, ಯಾವುದೇ ದುಬಾರಿ ಚಿಕಿತ್ಸೆಗಳು ಕಡಿಮೆ ದರದಲ್ಲಿ ಒದಗಿಸುತ್ತಿರುವುದರಿಂದ ಬಹಳ ಮಂದಿ ಇದರ ಸದುಪಯೋಗವನ್ನು ಈಗಾಗಲೇ ಪಡೆದುಕೊಂಡಿದ್ದಾರೆ.

FACILITY

24 x 7 Trauma and Emergency Day Care Services | 24 x 7 Pharmacy
24 x 7 Laboratory | 24 x 7 Radiology 128 Slice CT Scan | Computerized Radiography System
Ultrasound | Doppler Studies | 2D Echo | Corporate and family health packages
SICU | HDU | NICU | MICU State of the art Modular Operation Theaters
Advanced CSSD | Major TPA Empanelments Dialysis Centre | Endoscopy
Colonoscopy | Nutrition and Dietetics Round the clock Patient Support Department

95133-10100 | 95133-10102 | 95133-10103 | 95133-10104 | 95133-10109

For Ambulance Service 0821-2371000 | Email: info@nkhospitals.com

ಮೇ ಮೊದಲ ಇಲ್ಲ ಎರಡನೇ ವಾರ ನಾಯಕತ್ವ ನಿರ್ಧಾರ!?

- ಆಪ್ತರ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸ್ತಾಪ
- ಎಲ್ಲವೂ ರಾಹುಲ್ ಗಾಂಧಿಯದ್ದೇ ತೀರ್ಮಾನ


ಸಿದ್ದರಾಮಯ್ಯ


ಡಿ.ಕೆ.ಶಿವಕುಮಾರ್

ಬೆಂಗಳೂರು, ಏ.24(ಕೆಎಂಶಿ)– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಧಿಕಾರ ಬಿಡುವಂತೆ ಸಲಹೆ ಮಾಡಿದರೆ ಒಂದು ನಿಮಿಷವೂ ಕುರ್ಚಿಯಲ್ಲಿ ಇರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತ ಬಳಗದ ಮುಂದೆ ಹೇಳಿಕೊಂಡಿದ್ದಾರೆ.

ಮೇ ತಿಂಗಳ ಮೊದಲ ಅಥವಾ ಎರಡನೇ ವಾರದಲ್ಲಿ ರಾಜ್ಯ ಕಾಂಗ್ರೆಸ್ ನಾಯಕತ್ವದ ಬಗ್ಗೆ ರಾಹುಲ್ ಗಾಂಧಿ ತೀರ್ಮಾನ ಕೈಗೊಳ್ಳುತ್ತಾರೆ.

ಅವರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ ಎಂದು ಗುರುವಾರ ರಾತ್ರಿ ತಮ್ಮ ಆಪ್ತ ಸಚಿವರ ನಿವಾಸದಲ್ಲಿ ಸೇರಿದ್ದ ಮುಖಂಡರ ಸಭೆಯಲ್ಲಿ ಮುಂದಿನ ರಾಜಕೀಯ ಬೆಳವಣಿಗೆ ಕುರಿತು ಮಾಹಿತಿ ನೀಡಿದ್ದಾರೆ.

ಬೈರತಿ ಸುರೇಶ್ ಆಯೋಜಿಸಿದ್ದ ಸಭೆಯಲ್ಲಿ ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಮಾಜಿ ಸಚಿವ ಕೆ.ಎನ್.ರಾಜಣ್ಣ ಉಪಸ್ಥಿತರಿದ್ದರು.

ಸಭೆ ನಂತರ ತಮ್ಮ ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಚಿವರೊಬ್ಬರು, ಮೇನಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಮಹತ್ತರ ಬದಲಾವಣೆ ಆಗಲಿದೆ ಎಂಬ ಸುಳಿವನ್ನು ಮುಖ್ಯಮಂತ್ರಿ ಅವರೇ ನೀಡಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆದರೂ ಅಥವಾ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದರೂ, ಹಾಲಿ ಮಂತ್ರಿಮಂಡಲದಲ್ಲಿನ 15 ರಿಂದ 17 ಸಚಿವರನ್ನು ಕೈಬಿಡಲು ಎಐಸಿಸಿ ನಿರ್ಧರಿಸಿದೆ.

ಸಚಿವರಾಗಿ ಮುಂದುವರೆಯಲು ಇಚ್ಛಿಸುವವರು ತಮ್ಮ ಶಕ್ತಿ ಮತ್ತು ಪ್ರಭಾವ ಬಳಸಿಕೊಳ್ಳಿ ಎಂದು ಸಭೆಯಲ್ಲಿ ಮುಖ್ಯಮಂತ್ರಿ ನಮಗೆ ಸ್ಪಷ್ಟ ನಿರ್ದೇಶನ ನೀಡಿದರು.

ಈ ಮಧ್ಯೆ ಶಿವಕುಮಾರ್, ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿ ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರ ಕುರಿತಂತೆ ಸ್ಪಷ್ಟ ನಿಲುವು ತಿಳಿಸಿ ಎಂದು ಹೈಕಮಾಂಡ್ ಮುಂದೆ ಪಟ್ಟು ಹಿಡಿದಿದ್ದಾರೆ.

ಕಳೆದ ರಾತ್ರಿ ವರಿಷ್ಠ ನಾಯಕರಾದ ಮುಕುಲ್ ವಾಸ್ನಿಕ್, ಸಚಿನ್ ಪೈಲೆಟ್, ರಣದೀಪ್ ಸಿಂಗ್ ಸುರ್ಜೇವಾಲ, ಜೈರಾಮ್ ರಮೇಶ್, ಜಿತೇಂದ್ರ ಸಿಂಗ್ ಸೇರಿದಂತೆ ಹಲವು ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಕಾಂಗ್ರೆಸ್ ಆಡಳಿತಾವಧಿಯಲ್ಲಿ ಹಿಂದೂಗಳ ನಂಬಿಕೆಗೆ ಬೆಲೆ ಇಲ್ಲ...!

ಪರೀಕ್ಷೆಗಳಲ್ಲಿ ಜನಿವಾರ ತೆಗೆಸುವುದು; ಮಾಂಗಲ್ಯ ಬಿಚ್ಚಿಸುವ ಈ ಸರ್ಕಾರ ಹಿಂದೂ ವಿರೋಧಿ



ಬೆಂಗಳೂರು, ಏ.24(ಕೆಎಂಶಿ)– ವೃತ್ತಿಪರ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ ಮಾಂಗಲ್ಯ, ಜನಿವಾರ ತೆಗೆಸುವ ಮೂಲಕ ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ಹಿಂದೂ ಆಚಾರ–ವಿಚಾರಗಳ ವಿರೋಧಿ ಎಂಬುದನ್ನು ಸಾಬೀತುಪಡಿಸಿದೆ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಕಳೆದ ವರ್ಷ ಸಿಇಟಿ, ನೀಟ್ ಪರೀಕ್ಷೆಗಳ ವೇಳೆ ಅಭ್ಯರ್ಥಿಗಳ ಜನಿವಾರ ಕತ್ತರಿಸಿ, ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಮಾಂಗಲ್ಯ ತೆಗೆದು ಪರೀಕ್ಷೆ ಬರೆಯುವಂತೆ ಹೇಳಿದ್ದ ಕಾಂಗ್ರೆಸ್ ಸರ್ಕಾರ ಈ ವರ್ಷವೂ ತನ್ನ ಹಳೆ ಚಾಳಿ ಮುಂದುವರಿಸಿದೆ.

ನಗರದ ಸಿಇಟಿ ಪರೀಕ್ಷಾ ಕೇಂದ್ರವೊಂದರಲ್ಲಿ ವಿದ್ಯಾರ್ಥಿಯೊಬ್ಬನಿಗೆ ಜನಿವಾರ ತೆಗೆದು ಪರೀಕ್ಷೆ ಬರೆಯುವಂತೆ ಒತ್ತಾಯಿಸುವ ಮೂಲಕ ಮತ್ತೊಮ್ಮೆ ಹಿಂದೂ ಸಮಾಜದ ಧಾರ್ಮಿಕ ನಂಬಿಕೆಗಳಿಗೆ ರಾಜ್ಯ ಸರ್ಕಾರ ಧಕ್ಕೆ ತಂದಿದೆ ಎಂದಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಆಡಳಿತದಲ್ಲಿ ಒಂದೆಡೆ ಹಿಂದೂಗಳಿಗೆ ರಕ್ಷಣೆಯಿಲ್ಲ, ಇನ್ನೊಂದೆಡೆ ಹಿಂದೂಗಳ ನಂಬಿಕೆ, ಆಚಾರ ಗಳ ಮೇಲೆ ದಾಳಿ ಮಾಡುವ ಕೆಟ್ಟ ರಾಜಕಾರಣ ನಡೆಯುತ್ತಿದೆ ಎಂದಿದ್ದಾರೆ.

ಪರೀಕ್ಷೆಯ ಹಾಲ್ ಟಿಕೆಟ್‌ನಲ್ಲಾಗಲಿ, ಇತರ ಯಾವುದೇ ಮಾರ್ಗಸೂಚಿಯಲ್ಲಾಗಲಿ ಜನಿವಾರ ಧರಿಸಬಾರದು ಎಂಬುದಾಗಿ ಎಲ್ಲಿಯೂ ಉಲ್ಲೇಖ ಇಲ್ಲ, ಹೀಗಿದ್ದೂ ಜನಿವಾರ ತೆಗೆಯುವಂತೆ ಬಲವಂತ ಮಾಡುವ ಅನ್ಯಾಯ, ದೌರ್ಜನ್ಯಕ್ಕೆ ಯಾರು ಹೊಣೆ ಹೊರುತ್ತಾರೆ ಎಂದು ಪ್ರಶ್ನಿಸಿದ್ದಾರೆ.

ಜಾತಿಗಣತಿ ಹೆಸರಲ್ಲಿ ಹಿಂದೂ ಸಮಾಜ ವಿಭಜಿಸುವುದು, ಹಿಂದೂ ಸಂಪ್ರದಾಯ ಮೂಢನಂಬಿಕೆ ಹೆಸರಲ್ಲಿ ಅವಹೇಳನ ಮಾಡುವುದು, ಹಿಂದೂ ಆಚರಣೆ, ಸಂಪ್ರದಾಯಗಳಿಗೆ ನಿರ್ಬಂಧ ಹೇರುವುದು, ಹಿಂದೂ ಧರ್ಮದ ಅವಹೇಳನ ಮಾಡುವವರಿಗೆ ಪ್ರಶಸ್ತಿ ನೀಡಿ ಗೌರವಿಸುವುದು ಕಾಂಗ್ರೆಸ್‌ನ ಚಾಳಿಯಾಗಿದ್ದು, ಮುಂದಿನ ದಿನಗಳಲ್ಲಿ ಸಂಘಟಿತ ಹಿಂದೂ ಸಮಾಜ ಉತ್ತರ ನೀಡಲಿದೆ ಎಂದು ಅಶೋಕ್ ಎಚ್ಚರಿಸಿದ್ದಾರೆ.

ಕಾವೇರಿ ಆರೋಗ್ಯ ವಿಜ್ಞಾನ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣೆ



ಮೈಸೂರು, ಏ.24– ಮೈಸೂರಿನ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಅಂಗಸಂಸ್ಥೆಯಾದ ಕಾವೇರಿ ಆರೋಗ್ಯ ವಿಜ್ಞಾನ ಸಂಸ್ಥೆ ವತಿಯಿಂದ ಶುಕ್ರವಾರ ನಂಜನಗೂಡು ತಾಲೂಕು ಆಲತ್ತೂರು ಗ್ರಾಮದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾವೇರಿ ವಿದ್ಯಾಸಂಸ್ಥೆಯ ಲ್ಯಾಬ್ ಟೆಕ್ನಾಲಜಿ ಮತ್ತು ಆಪ್ಟೋಮೆಟ್ರಿ ಕೋರ್ಸ್ ವ್ಯಾಸಂಗ ಮಾಡುತ್ತಿರುವ 30 ವಿದ್ಯಾರ್ಥಿಗಳು ಹಾಗೂ ಸಂಸ್ಥೆಯ ಪ್ರಾಂಶುಪಾಲರು, ವೈದ್ಯರು, ಅಧ್ಯಾಪಕರು ಹಾಗೂ ಸಿಬ್ಬಂದಿ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ಕಣ್ಣಿನ ತಪಾಸಣೆಗೆ ಡಾ.ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ಸಹಯೋಗ ನೀಡಿತ್ತು. ಶಿಬಿರದಲ್ಲಿ ಆಲತ್ತೂರು ಹಾಗೂ ಸುತ್ತಮುತ್ತಲ ಗ್ರಾಮದ 150ಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನ ಪಡೆದರು.

ಇಂದು ಹೊಗೆ ಮುಕ್ತ ಮೈಸೂರು–ಆರೋಗ್ಯಕರ ಮೈಸೂರು ಕಾರ್ಯಕ್ರಮ

ಮೈಸೂರು, ಏ.24– ಮೈಸೂರಿನ ಹೆಬ್ಬಾಳ್‌ನಲ್ಲಿರುವ ಭಾರತ್ ಹಾಸ್ಪಿಟಲ್ ಮತ್ತು ಇನ್ಸ್‌ಟಿಟ್ಯೂಟ್ ಆಫ್ ಆಂಕಾಲಜಿ ವತಿಯಿಂದ 'ಹೊಗೆ ಮುಕ್ತ ಮೈಸೂರು–ಆರೋಗ್ಯಕರ ಮೈಸೂರು' ಕಾರ್ಯಕ್ರಮವನ್ನು ಏ.25 ರಂದು ಭಾರತ್ ಹಾಸ್ಪಿಟಲ್ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9606827904 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಿಧನ


ಮಲ್ಲೇಂಗಡ ರೋಹಿಣಿ



ಮೈಸೂರು, ಏ.24– ಮೈಸೂರಿನ ಗೋಕುಲಂ 3ನೇ ಹಂತ, ಜಯದೇವ ಆಸ್ಪತ್ರೆ ಹಿಂಭಾಗದ ರಸ್ತೆ, 7ನೇ ಕ್ರಾಸ್, ನಂದ ಗೋಕುಲ, ತ್ರಿನೇತ್ರ ಸರ್ಕಲ್ ಬಳಿಯ ನಿವಾಸಿ ಮಲ್ಲೇಂಗಡ ಎಂ.ರೋಹಿಣಿ (ರೇಖಾ–ಕಾಳಮಾಡ, ಕುಟ್ಟ) ಶುಕ್ರವಾರ ಬೆಳಗ್ಗೆ ನಿಧನರಾದರು. ಅವರಿಗೆ 56 ವರ್ಷ ವಯಸ್ಸಾಗಿತ್ತು.

ಮೂಲತಃ ಕೊಡಗು ಜಿಲ್ಲೆ, ಪೊನ್ನಂಪೇಟೆ ತಾಲೂಕು ಬಡಗರಕೇರಿ ಗ್ರಾಮದವರಾದ ಇವರು, ಪತಿ ಮಲ್ಲೇಂಗಡ ವಿನು ಮುತ್ತಣ್ಣ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂನ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾಲೇಕಂಡ ಬೋಜಮ್ಮ ಮುತ್ತಣ್ಣ



ಮೈಸೂರು: ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಕೊಡವ ಸಮಾಜದ ಮಾಜಿ ಅಧ್ಯಕ್ಷ ದಿವಂಗತ ಪಾಲೇಕಂಡ ಪಿ.ಮುತ್ತಣ್ಣ ಅವರ ಪತ್ನಿ ಪಾಲೇಕಂಡ ಬೋಜಮ್ಮ ಮುತ್ತಣ್ಣ(91) ಅವರು ಅಮೆರಿಕಾದ ಆರಿಜೋನಾದಲ್ಲಿ ಏ.22ರಂದು ನಿಧನರಾದರು.

ಮೂಲತಃ ಕೊಡಗಿನ ಮಡಿಕೇರಿ ಪಟ್ಟಣದ ಬೋಜಮ್ಮ (ಪಾರುವಂಗಡ) ಅವರು ಪುತ್ರಿಯರಾದ ದೇಚು ಮುತ್ತಣ್ಣ, ಡಾ.ನೀಲಿ ಮುತ್ತಣ್ಣ, ಪುತ್ರ ಪೂಣಚ್ಚ ಮುತ್ತಣ್ಣ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಮೇರಿಕಾದ ಆರಿಜೋನಾ, ಸ್ಕಾಟ್ಸ್‌ಡೇಲ್‌ನ ಈಸ್ಟ್ ಶಿಯಾ ಬೌಲೇವಾರ್ಡ್, ಪ್ಯಾರಡೈಸ್ ಮೆಮೋರಿಯಲ್ ಗಾರ್ಡನ್ಸ್‌ನಲ್ಲಿ ಶುಕ್ರವಾರ (ಏ.24) ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅನಿಶ್ಚಿತತೆ ನಡುವೆ ಮಹತ್ವದ ಆಲೋಚನೆ ಅರಳುವ ಕಾಲ ಇದು

- ಕೇಂದ್ರದ ಮಾಜಿ ಮುಖ್ಯ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಕೆ.ವಿಜಯರಾಘವನ್ ಕಿವಿಮಾತು
- ಪ್ರೊ.ಕೆ.ಕೆಂಪರಾಜು, ಪ್ರೊ.ಕೆಸ್ತೂರು ಎಸ್.ಗಿರೀಶ್‌ರಿಗೆ 'ಭ್ರಮರ ಪ್ರಶಸ್ತಿ' ಪ್ರದಾನ


ಮೈಸೂರು ವಿವಿ ಹಿರಿಯ ಪ್ರಾಧ್ಯಾಪಕ ಪ್ರೊ.ಕೆ.ಕೆಂಪರಾಜು ಮತ್ತು ತುಮಕೂರು ವಿವಿ ಪ್ರಾಧ್ಯಾಪಕ ಪ್ರೊ.ಕೆಸ್ತೂರು ಎಸ್.ಗಿರೀಶ್ ಅವರನ್ನು ಮಾನವೀಯತೆಯುತ್ತ ಸಂಶೋಧನೆಗಾಗಿ 'ಭ್ರಮರ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು. ಈ ವೇಳೆ ಸುತ್ತೂರು ಶ್ರೀಗಳು, ಸಂಸದ ಯದುವೀರ್, ರಾಮಕೃಷ್ಣ ವಿದ್ಯಾ ಶಾಲೆಯ ಮುಖ್ಯಸ್ಥರಾದ ಯುಕ್ತೇಶಾನಂದ ಸ್ವಾಮೀಜಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬಯೋಕೆಮಿಸ್ಟ್ರಿ ವಿಭಾಗದ ಪ್ರೊ.ಪಿ.ಎನ್.ರಂಗರಾಜನ್, ಜೆಎಸ್‌ಎಸ್ ಫಾರ್ಮಸಿ ಆಫ್ ಕಾಲೇಜಿನ ಪ್ರಾಂಶುಪಾಲ ಪ್ರಮೋದ್ ಕುಮಾರ್, ಟ್ರಸ್ಟ್ ಅಧ್ಯಕ್ಷರಾದ ಮಾಧುರಿ ತಾತಾಚಾರಿ, ಟ್ರಸ್ಟಿ ಪ್ರೊ.ಆರ್.ಶ್ರೀನಿವಾಸನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಏ.24(ವಿವಿಹೆಚ್)– ಇಂದಿನ ಜಗತ್ತು ಅನೇಕ ಸವಾಲುಗಳಿಂದ ಕೂಡಿದ್ದು, ಕೃತಕ ಬುದ್ಧಿಮತ್ತೆ(ಎಐ) ಮಹಾಪ್ರವಾಹದಿಂದ ವಿಶ್ವದಾದ್ಯಂತ ಉದ್ಯೋಗಗಳನ್ನು ಕಳೆದುಕೊಳ್ಳುವ ಭೀತಿ ಸೃಷ್ಟಿಯಾಗಿದೆ. ಪರಿಣಾಮ ಜೈವಿಕ ತಂತ್ರಜ್ಞಾನದಲ್ಲೂ ದೊಡ್ಡ ಮಟ್ಟದ ಬದಲಾವಣೆಗಳಾಗುತ್ತಿವೆ ಎಂದು ಭಾರತ ಸರ್ಕಾರದ ಮಾಜಿ ಮುಖ್ಯ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಕೆ.ವಿಜಯರಾಘವನ್ ಕಳವಳ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಭ್ರಮರ ಟ್ರಸ್ಟ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಭ್ರಮರ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, 'ಎಐ'ನಿಂದಾಗಿ ಜೈವಿಕ ವಿಜ್ಞಾನ ಸೇರಿದಂತೆ ಇತರ ಕ್ಷೇತ್ರಗಳಲ್ಲೂ ಲೌಕಿಕತೆ ಕಡಿಮೆಯಾಗುತ್ತಿದೆ. ಯುದ್ಧಗಳಿಂದ ಜಾಗತಿಕ ಬಿಕ್ಕಟ್ಟು ಸೃಷ್ಟಿಯಾಗಿದೆ. ಒಟ್ಟಾರೆ ಯುವಜನತೆಗೆ ಇದರಿಂದ ಸವಾಲು ಮತ್ತು ಅನಿಶ್ಚಿತತೆ ಎದುರಾಗಿದೆ. ಆದರೂ ಇದು ಮಹತ್ವದ ಆಲೋಚನೆಗಳು ಅರಳುವ ಕಾಲ. ಏಕೆಂದರೆ ಸವಾಲುಗಳ ಸಮಯದಲ್ಲೇ ಜನರು ಹೊಸ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ ಎಂದು ಅಭಿಪ್ರಾಯಿಸಿದರು.

ಜೈವಿಕ ತಂತ್ರಜ್ಞಾನವೂ 30–40 ವರ್ಷಗಳ ಹಿಂದಿನಂತಿಲ್ಲ, ಅದು ಸಂಪೂರ್ಣವಾಗಿ ಬದಲಾಗಿದೆ. ಹೀಗಾಗಿ ಹೊಸ ಆಲೋಚನೆಗಳು ಬೆಳಕಿಗೆ ಬರಲು ವಿಶ್ವವಿದ್ಯಾನಿಲಯಗಳಲ್ಲಿ ಪೂರಕ ವಾತಾವರಣ ನಿರ್ಮಾಣ ಮಾಡಬೇಕು. ಈ ನಿಟ್ಟಿನಲ್ಲಿ ವಿವಿಗಳು ಹೊಸ ಆಲೋಚನೆಗಳನ್ನು ಪರಸ್ಪರ ಹಂಚಿಕೊಂಡು ಅವುಗಳನ್ನು ವಿಮರ್ಶಿಸಿ ವಿಶ್ಲೇಷಿಸಬೇಕು, ಅಗತ್ಯವಿದ್ದರೆ ತಿದ್ದುಪಡಿ ಮಾಡಬೇಕು. ಈ ರೀತಿಯ ಚರ್ಚೆ ಜೊತೆಗೆ ಮೌಲ್ಯಯುತ ಆಲೋಚನೆಗಳನ್ನು ಅಭಿವೃದ್ಧಿಪಡಿಸಬಹುದು. ಅವುಗಳನ್ನು ಪ್ರಯೋಗಾತ್ಮಕವಾಗಿ ಪರೀಕ್ಷಿಸಿ, ಹೊಸದನ್ನು ಸಾಧಿಸಬಹುದು ಎಂದರು.

ಮೈಕ್ರೋಬಯಾಲಜಿ ಆಧಾರಿತ ಜೈವಿಕ ತಂತ್ರಜ್ಞಾನದಲ್ಲಿ, ಮೊದಲು ಸಸ್ಯಗಳಿಂದ ಪಡೆಯುತ್ತಿದ್ದ ಕೆಲವು ಕಾಂಪೋನೆಂಟ್‌ಗಳನ್ನು ಈಗ ಪ್ರಯೋಗಾಲಯದಲ್ಲೇ ಯೀಸ್ಟ್‌ಗಳಂತಹ ಜೀವಿಗಳಲ್ಲಿ ತಯಾರಿಸಲಾಗುತ್ತಿದೆ. ಇದೇ ರೀತಿಯಾಗಿ, ಡಯಾಬಿಟಿಸ್ ಚಿಕಿತ್ಸೆಗೆ ಬಳಸುವ ಇನ್ಸುಲಿನ್ ಮುಂತಾದ ಔಷಧಿಗಳನ್ನೂ ಪ್ರಯೋಗಾಲಯದಲ್ಲಿ ಸುಲಭವಾಗಿ ಉತ್ಪಾದಿಸಲಾಗುತ್ತಿದೆ. ಹೀಗಾಗಿ ಈ ಪ್ರಕ್ರಿಯೆಗಳು ಹೆಚ್ಚು ಸ್ವಯಂಚಾಲಿತವಾಗುತ್ತಿವೆ. ಸ್ಥಳೀಯವಾಗಿ ಸುಲಭವಾಗಿ ನಿರ್ವಹಿಸಬಹುದಾಗಿರುವುದರಿಂದ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತಿವೆ. ಆದ್ದರಿಂದ, ನಾವು ಕೇವಲ ಅನುಕರಣೆಗಳನ್ನು ಮಾಡದೇ ನಾವೀನ್ಯತೆಯಿಂದ ಮುಂದುವರೆಯಬೇಕು. ಇದಕ್ಕೆ ಯುವ ಜನರ ಹೊಸ ಆಲೋಚನೆಗಳನ್ನು ಬಳಸಿಕೊಳ್ಳುವುದೇ ಸೂಕ್ತ ಪರಿಹಾರ ಕ್ರಮವಾಗಿದೆ ಎಂದು ಹೇಳಿದರು.

ಸಂಶೋಧನೆಗೆ ಸಂಸದರ ಶ್ಲಾಘನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಹಾವುಗಳ ಕಡಿತದಿಂದ ಮಾನವನ ಅಂಗಾಂಶಕ್ಕೆ ದೀರ್ಘಾವಧಿವರೆಗೆ ಉಂಟಾಗುತ್ತಿದ್ದ ಹಾನಿಗೆ ಸಂಶೋಧನೆ ಮೂಲಕ ಪರಿಹಾರ ಸಿಕ್ಕಿರುವುದು ನಿಜಕ್ಕೂ ಶ್ಲಾಘನೀಯ. ಈ ಕೆಲಸ ಮೈಸೂರು ಮತ್ತು ತುಮಕೂರು ವಿವಿ ಸಂಶೋಧಕರಿಂದ ನಡೆದಿರುವುದು ಹೆಮ್ಮೆಯ ಸಂಗತಿ. ದೇಶದ ವಿಷಪೂರಿತ ಹಾವುಗಳ ಕಡಿತಕ್ಕೆ ಅದರಲ್ಲೂ ವೈಪರ್ ಕಡಿತದಿಂದ ಉಂಟಾಗುವ ಸಮಸ್ಯೆಗಳಿಗೆ ಪರಿಹಾರ ಸಂಬಂಧ ನಡೆಸಲಾಗಿರುವ ಸಂಶೋಧನೆಗೆ ಯಶಸ್ಸು ಸಿಕ್ಕಿದೆ. ಇದು ದೀರ್ಘಕಾಲದ ಸಮಸ್ಯೆಗೆ ದೊರೆತಿರುವ ಪರಿಹಾರವಾಗಿ ಗುರುತಿಸಿಕೊಂಡಿದೆ ಎಂದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ನಾಗರ ಹಾವು ಕಡಿತದಿಂದ ಜೀವ ಉಳಿಸುವ ಮತ್ತು ವೈಪರ್ ಕಡಿತದಿಂದ ಉಂಟಾಗಬಹುದಾದ ಅಂಗಚ್ಛೇದನದಿಂದ ಪಾರು ಮಾಡುವ ವಿಧಾನಗಳನ್ನು ಅಭಿವೃದ್ಧಿಪಡಿಸಿದ ಮೈಸೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಕೆ.ಕೆಂಪರಾಜು ಮತ್ತು ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಕೆಸ್ತೂರು ಎಸ್.ಗಿರೀಶ್ ಅವರನ್ನು ಮಾನವೀಯತೆಗೆ ಸಹಕಾರಿ ಸಂಶೋಧನೆಗಾಗಿ ಭ್ರಮರ ಪ್ರತಿಷ್ಠಿತ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ರಾಮಕೃಷ್ಣ ವಿದ್ಯಾ ಶಾಲೆಯ ಮುಖ್ಯಸ್ಥರಾದ ಯುಕ್ತೇಶಾನಂದ ಸ್ವಾಮೀಜಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬಯೋಕೆಮಿಸ್ಟ್ರಿ ವಿಭಾಗದ ಪ್ರೊ.ಪಿ.ಎನ್.ರಂಗರಾಜನ್, ಜೆಎಸ್‌ಎಸ್ ಫಾರ್ಮಸಿ ಆಫ್ ಕಾಲೇಜಿನ ಪ್ರಾಂಶುಪಾಲ ಪ್ರಮೋದ್ ಕುಮಾರ್, ಟ್ರಸ್ಟ್ ಅಧ್ಯಕ್ಷರಾದ ಮಾಧುರಿ ತಾತಾಚಾರಿ, ಟ್ರಸ್ಟಿ ಪ್ರೊ.ಆರ್.ಶ್ರೀನಿವಾಸನ್ ಮತ್ತಿತರರು ಉಪಸ್ಥಿತರಿದ್ದರು.

> ಭೌತ, ರಾಸಾಯನ, ಜೀವಶಾಸ್ತ್ರ, ಗಣಿತ, ವೈದ್ಯಕೀಯ ಹೀಗೆ ಪ್ರಮುಖ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ಭ್ರಮರ ಟ್ರಸ್ಟ್ ವಿಜ್ಞಾನ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ. ವಿಜ್ಞಾನ ಸಾಮಾನ್ಯ ಜನಜೀವನದಿಂದ ದೂರವಾದ ವಿಷಯ ಎಂದು ಭಾವಿಸಲಾಗುತ್ತಿದೆ. ಆದರೆ ಈ ಇಬ್ಬರು ವಿಜ್ಞಾನಿಗಳು ಆ ಮಾತನ್ನು ಸುಳ್ಳಾಗಿಸಿದ್ದಾರೆ.
>
> –ಪ್ರೊ.ಪಿ.ಎನ್.ರಂಗರಾಜನ್, ಪ್ರಾಧ್ಯಾಪಕರು, ಐಐಎಸ್ ಬಯೋಕೆಮಿಸ್ಟ್ರಿ ವಿಭಾಗ.

> ಹಾವು ಕಡಿತ ಸಂಬಂಧ ಸಂಶೋಧನೆ ನಡೆಸಲು ಮೈಸೂರು ವಿವಿ ಬಹಳ ಸಹಕರಿಸಿದೆ. ಈ ಸಾಧನೆಯ ಹಿಂದೆ ಹಲವಾರು ಕಾಣದ ಕೈಗಳು ಸಹಕರಿಸಿದ್ದು, ಎಲ್ಲರಿಗೂ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ.
>
> –ಪ್ರೊ. ಕೆ.ಕೆಂಪರಾಜು, ಪ್ರಾಧ್ಯಾಪಕರು, ಮೈಸೂರು ವಿವಿ.

> ನಮ್ಮ ಕೆಲಸವನ್ನು ಗುರುತಿಸಿ ಈ ಪ್ರಶಸ್ತಿ ನೀಡಿದ ಭ್ರಮರ ಟ್ರಸ್ಟ್‌ಗೆ ಕೃತಜ್ಞತೆಗಳು. ಇಂದು ನಾನೇನೆ ಸಾಧನೆ ಮಾಡಿದ್ದರೂ ಅದರ ಶ್ರೇಯಸ್ಸು ನನ್ನ ಮೆಂಟರ್ ಕೆ.ಕೆಂಪರಾಜು ಅವರಿಗೆ ಸಲ್ಲುತ್ತದೆ. ಅವರ ಬೆಂಬಲ ಮತ್ತು ಸಹಾಯದಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು.
>
> –ಪ್ರೊ.ಕೆಸ್ತೂರು ಎಸ್.ಗಿರೀಶ್, ಪ್ರಾಧ್ಯಾಪಕರು, ತುಮಕೂರು ವಿವಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.4.2026 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಅಮೃತಾ ನಿತಿನ್ ಶಾಸ್ತ್ರಿ ಹಾಗೂ ಎನ್. ಹೇಮಾ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಮತ್ತು ಸಂಜೆ 5.30 – ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ – ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ರಾಜಲಕ್ಷ್ಮಿ –ವೀಣಾ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, ಮಕ್ಕಳ ಸಾಹಿತ್ಯರಂಗ –ಮಕ್ಕಳ ಪತ್ರಗಳನ್ನಾಧರಿಸಿದ ಸಾಹಿತ್ಯರಂಗ, ಪ್ರಸ್ತುತಿ–ಬಿ. ಜಿ. ಕವಿತಾ ಹಾಗೂ ಚಿನ್ಮಯಿ .ಕೆ.ಎಸ್, 4.00 ನಾಟಕ–ವೆಂಕಟರಾಯನ ಪಿಶಾಚ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿ, ಅಂತನಹಳ್ಳಿಯ ಕೃಷಿಕರಾದ ಎ.ಎಸ್. ಪ್ರಭುಸ್ವಾಮಿ ಹಾಗೂ ಕೆ. ದೇವರಾಜ್, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ರೈಸ್ ಖಾನ್ – ಸಿತಾರ್ ವಾದನ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣೆ, ಕುತ್ತಿಗೆ ನೋವು ಮತ್ತು ಭುಜದ ನೋವು, ಆರೋಗ್ಯ ತಪಾಸಣಾ ಶಿಬಿರ, ಕಾರ್ನಿಯಲ್ ಒಪೇಸಿಟಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಮೈಸೂರು ಜಿಲ್ಲಾ ಶ್ರೀ ವೈಷ್ಣವ ಸಂಘ** : ಭಗವದ್ ಶ್ರೀ ರಾಮಾನುಜಾಚಾರ್ಯರ 1009ನೇ ತಿರುನಕ್ಷತ್ರ ಹಾಗೂ 17ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸಾನ್ನಿಧ್ಯ : ಪರಮಪೂಜ್ಯ ಶ್ರೀ ಧನುರ್ದಾಸ ರಾಮಾನುಜ ಜೀಯರ್ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಲೋಕೇಶ್, ಮುಖ್ಯ ಅತಿಥಿಗಳು : ಅರ್ಕಧಾಮ ಸಂಸ್ಥಾಪಕ ಶ್ರೀ ಶ್ರೀನಿವಾಸ ಅರ್ಕ ಸ್ವಾಮೀಜಿ, ವಿಶೇಷ ಆಹ್ವಾನಿತರು : ಶಾಸಕ ಟಿ.ಎಸ್. ಶ್ರೀವತ್ಸ, ಕರ್ನಾಟಕ ರಾಜ್ಯ ಶ್ರೀ ವೈಷ್ಣವ ಸಂಘದ ಅಧ್ಯಕ್ಷ ಎಂ.ವಿ. ಕೃಷ್ಣಮೂರ್ತಿ, ಪ್ರಜ್ಞಾ ಕುಟೀರ ಸಂಸ್ಥಾಪಕ ಡಾ. ಎನ್.ವಿ. ಕೃಷ್ಣಮೂರ್ತಿ, ಸ್ಥಳ: ರೋಟರಿ ಪಶ್ಚಿಮ ವಿದ್ಯಾಸಂಸ್ಥೆ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9ಕ್ಕೆ.
- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಪ್ರಮುಖ ಬಡಾವಣೆಗಳಲ್ಲಿ ಮೆರವಣಿಗೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ ಮೈಸೂರು** : ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಆಪ್ತ ಸಮಾಲೋಚನಾ ಕಾರ್ಯಕ್ರಮ, ಉಪಸ್ಥಿತರು : ಕೆ.ಆರ್.ಆಸ್ಪತ್ರೆಯ ಆರ್‌ಎಂಓ ಡಾ.ನಯಾಜ್ ಪಾಷ, ಕರಿಯರ್ ಕೋಚ್ ಜೇಷಾನ್ ಸ್ಥಳ: ಆರ್.ಕೆ. ಪ್ಯಾಲೇಸ್, ಪಿ ಅಂಡ್ ಟಿ ಕ್ವಾಟ್ರರ್ಸ್, ಉದಯಗಿರಿ, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘ** : 21ನೇ ಮಹಾ ಸಮ್ಮೇಳನ ಮತ್ತು ರಜತ ಮಹೋತ್ಸವ, ಬೆಳಗ್ಗೆ 10 ರಿಂದ ರಾಜಕಾರಣಿಗಳೊಂದಿಗೆ ವಿಶೇಷ ಅಧಿವೇಶನ, ಅಧ್ಯಕ್ಷತೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎಂ. ರಾಜಶೇಖರ, ಚುನಾವಣಾ ರಾಜಕಾರಣ : ಶಾಸಕ ಜಿ.ಟಿ. ದೇವೇಗೌಡ, ಸದನದ ಕಾರ್ಯಕಲಾಪಗಳು : ಮಾಜಿ ಸಚಿವ ಎಸ್. ಸುರೇಶ್‌ಕುಮಾರ್, ಮೀಸಲು ಕ್ಷೇತ್ರದ ರಾಜಕಾರಣ : ಶಾಸಕ ಎ.ಆರ್. ಕೃಷ್ಣಮೂರ್ತಿ, ಮಹಿಳಾ ರಾಜಕಾರಣ : ಮಾಜಿ ಜಿಪಂ ಸದಸ್ಯೆ ಡಾ. ಪುಷ್ಪ ಅಮರನಾಥ್, ಮಧ್ಯಾಹ್ನ 3.30 ರಿಂದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಬರಹಗಾರ ಶಿವಸುಂದರ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಸಂಸ್ಥಾಪಕ ಅಧ್ಯಕ್ಷ ಪ್ರೊ. ಆರ್.ಎಲ್.ಎಂ. ಪಾಟೀಲ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್‌ಕುಮಾರ್, ವಿಶೇಷ ಅತಿಥಿಗಳು : ಪ್ರೊ. ಎಸ್. ನರೇಂದ್ರಕುಮಾರ್, ಪ್ರೊ. ಕೆ.ಜೆ. ಸುರೇಶ್, ಪ್ರೊ. ಜಿ.ಟಿ. ರಾಮಚಂದ್ರಪ್ಪ, ಪ್ರೊ. ಜಯಪ್ರಕಾಶ್ ಮಾವಿನಕುಳಿ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕಾವೇರಿ ಸಭಾಂಗಣ.
- **ಮೈಸೂರು ಚೆಸ್ ಸೆಂಟರ್** : ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಅಂಡರ್–13 ಚೆಸ್ ಚಾಂಪಿಯನ್‌ಶಿಪ್, ಸ್ಥಳ: ದಾಸಪ್ರಕಾಶ್ ಪ್ಯಾರಡೈಸ್, ಯಾದವಗಿರಿ, ಬೆಳಗ್ಗೆ 10 ರಿಂದ.
- **ಕನ್ನಡ ಸಾಹಿತ್ಯ ಪರಿಷತ್** : ಶ್ರೀ ಹೆಚ್.ವಿ.ಎಸ್. ಮೂರ್ತಿರವರ 80 ವರ್ಷದ ಸಂಭ್ರಮ, ಅಭಿನಂದನೆ ಹಾಗೂ ಹೆಚ್.ವಿ.ಎಸ್. ಮೂರ್ತಿ ಬದುಕು ಹೋರಾಟದ ಅವಲೋಕನ ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದ, ಉದ್ಘಾಟನೆ : ಶಾಸಕ ಎ.ಆರ್. ಕೃಷ್ಣಮೂರ್ತಿ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಸನ್ಮಾನ ಮತ್ತು ಅಭಿನಂದನೆ : ವಕೀಲ ಹೆಚ್.ವಿ.ಎಸ್. ಮೂರ್ತಿ, ಹೆಚ್.ವಿ.ಎಸ್. ಮೂರ್ತಿ ಕುರಿತು ಹಿರಿಯ ಸಾಹಿತಿ ಸಿ.ಪಿ. ಕೃಷ್ಣಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರಿಂದ ಭಾಷಣ, ಸ್ಥಳ: ಕೆ.ವಿ.ಆರ್. ವೆಡ್ಡಿಂಗ್ ಬೆಲ್ಸ್, 2ನೇ ಹಂತ, ವಿಶ್ವೇಶ್ವರನಗರ, ವಿದ್ಯಾರಣ್ಯಪುರಂ, ಬೆಳಗ್ಗೆ 10.30 ರಿಂದ.
- **ಅಂಧರ ಸ್ನೇಹ ಬಳಗ, ಶ್ರೀ ರಾಜಕುಮಾರಿ ದೊಡ್ಡಮ್ಮಣ್ಣಿ ಆಶ್ರಮ** : ಬುದ್ಧ, ಬಸವ, ಅಂಬೇಡ್ಕರ್ ದಿನಾಚರಣೆ, ಅಧ್ಯಕ್ಷತೆ : ಸಂಗೀತ ವಿದ್ವಾಂಸ ಮಾನಯ್ಯ, ಮುಖ್ಯ ಭಾಷಣ : ವಿಚಾರವಾದಿ ಡಾ. ಶಿವಕುಮಾರ್, ಮುಖ್ಯ ಅತಿಥಿಗಳು : ಅಹಿಂದ ಜವರಪ್ಪ, ಬಸವರಾಜು, ಲಿಂಗರಾಜು, ಸತೀಶ್, ಸ್ಥಳ: ಶ್ರೀ ರಾಜಕುಮಾರಿ ದೊಡ್ಡಮ್ಮಣ್ಣಿ ಆಶ್ರಮ, ತಿಲಕ್‌ನಗರ, ಬೆಳಗ್ಗೆ10.30ಕ್ಕೆ.
- **ಅದಮ್ಯ ರಂಗಶಾಲೆ, ವಿ.ಕೆ. ಪಬ್ಲಿಕ್ ಸ್ಕೂಲ್** : ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರದಲ್ಲಿ ವಿಶ್ವ ಪುಸ್ತಕ ದಿನಾಚರಣೆ ಹಾಗೂ ಮಕ್ಕಳಿಗೆ ಸಾಹಿತ್ಯ ಪುಸ್ತಕಗಳ ಉಚಿತ ವಿತರಣಾ ಸಮಾರಂಭ, ಉದ್ಘಾಟನೆ : ಹಿರಿಯ ಲೇಖಕಿ ಯಶೋಧ ರಾಮಕೃಷ್ಣ, ಅಧ್ಯಕ್ಷತೆ : ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು : ವಿ.ಕೆ. ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿ ರವಿಕುಮಾರ್ ಬೆಕ್ಕಾ, ಸ್ಥಳ: ಅದಮ್ಯ ರಂಗಶಾಲೆ, ವಿಜಯನಗರ 3ನೇ ಹಂತ, ಬೆಳಗ್ಗೆ 11ಕ್ಕೆ.
- **ಮೈಸೂರಿನ ಸಂಧ್ಯಾ ಸುರಕ್ಷಾ ಟ್ರಸ್ಟ್, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ ಹಾಗೂ ಶಾಕಂಬರಿ ಧಾರ್ಮಿಕ ಕೇಂದ್ರ** : 16ನೇ ವರ್ಷದ ರಾಮಪಟ್ಟಾಭಿಷೇಕ ಹಾಗೂ ಶಂಕರ ಜಯಂತಿ ಕಾರ್ಯಕ್ರಮ, ಸ್ಥಳ: ಶಾಕಂಬರಿ ಧಾರ್ಮಿಕ ಕೇಂದ್ರ, ದೇವಯ್ಯನಹುಂಡಿ, ಬೆಳಗ್ಗೆ 11ಕ್ಕೆ.
- **ಮೈಸೂರು ಕನ್ನಡ ವೇದಿಕೆ** : ಬಸವಣ್ಣ, ಶ್ರೀ ಶಿವಕುಮಾರಸ್ವಾಮಿ ಜಯಂತ್ಯೋತ್ಸವ ಅಂಗವಾಗಿ ಬಸವಣ್ಣ ಮತ್ತು ಸಿದ್ಧಗಂಗಾ ಪ್ರಶಸ್ತಿ ಪ್ರದಾನ, ಉದ್ಘಾಟನೆ : ತಹಸೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್, ಪುಷ್ಪಾರ್ಚನೆ : ಚುಟುಕು ಸಾಹಿತಿ ಡಾ. ಎಂ.ಜಿ.ಆರ್. ಅರಸ್, ಪ್ರಧಾನ ಭಾಷಣ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ. ಮಂಜುನಾಥ್, ಪಿ.ಕೆ. ಕೃಷ್ಣ, ಸಮಾಜ ಸೇವಕ ಎಂ. ದಿವಾಕರ್, ಡಾ. ಶ್ರೀಷಾಭಟ್, ಲೋಕೇಶ್ ಗೆಜ್ಜಗಳ್ಳಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ನಮನ ಕಲಾ ಮಂಟಪ, ಬೆಳಗ್ಗೆ 11.30ಕ್ಕೆ.
- **ಗುರುಕುಲ ಪದವಿ ಪೂರ್ವ ಕಾಲೇಜು** : ಎಸ್‌ಎಸ್‌ಎಲ್‌ಸಿಯಲ್ಲಿ ಶೇ.96ಕ್ಕಿಂತ ಮೇಲ್ಪಟ್ಟು ತೇರ್ಗಡೆಯಾಗಿರುವ ಅನುದಾನಿತ ಶಾಲಾ ಮತ್ತು ಕಾಲೇಜು ನೌಕರರ ಮಕ್ಕಳಿಗೆ ಪಿಯು ವ್ಯಾಸಂಗಕ್ಕೆ ವಿಶೇಷ ರಿಯಾಯಿತಿ ಕಲ್ಪಿಸುವ ಸಲುವಾಗಿ ಪೋಸ್ಟರ್ ಬಿಡುಗಡೆ ಸಮಾರಂಭ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.
- **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾಧಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪಂಡಿತ್ ಬಾದರಾಯಣಾಚಾರ್ಯ ಅವರಿಂದ ಗಾಯತ್ರಿ ಚಿಂತನ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ, ಸಂಜೆ 4 ರಿಂದ.
- **ವಿವಿಧ ಆರ್ಟ್ ಗ್ರೂಪ್** :ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಕಲಾವಿದ ಡಾ. ಎಂ.ಎಸ್. ಮೂರ್ತಿ, ಮುಖ್ಯ ಅಭ್ಯಾಗತರು : ಕಲಾವಿದ ಎಸ್.ಎಂ. ಜಂಬುಕೇಶ್ವರ, ಶ್ರೀ ಕಲಾನಿಕೇತನ ಕಲಾಶಾಲೆ ಪ್ರಿನ್ಸಿಪಾಲ್ ಕೆ.ಸಿ. ಮಹದೇವಶೆಟ್ಟಿ, ಡಾ. ವಿಠ್ಠಲ್ ರೆಡ್ಡಿ ಎಫ್. ಚುಳಕಿ, ಕೆ.ಎಸ್. ಪರಮೇಶ್ವರ, ಡಾ. ಶಂಕರ ಕುಂದಗೋಳ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಸಂಜೆ 4.30ಕ್ಕೆ.
- **ಕಲಾಸುರುಚಿ** : ಕಥೆ ಕೇಳೋಣ ಬನ್ನಿ – 929ರ ಕಾರ್ಯಕ್ರಮ, ಕಥೆ ಹೇಳುವವರು : ಇಂಜಿನಿಯರ್, ಎಲ್ & ಟಿ ಟೆಕ್ನಾಲಜಿ ಸರ್ವಿಸಸ್ ಇಂಜಿನಿಯರ್ ಶಶಿಧರ ಡೋಂಗ್ರೆ ಎಂ ಅವರು ಮಕ್ಕಳಿಗೆ ವಾಸ್ಕೊಡಗಾಮನ ಸಮುದ್ರ ದಂಡಯಾತ್ರೆಯ ಹಾಗೂ ಇತರೆ ಕಥೆಗಳನ್ನು ಹೇಳಲಿದ್ದಾರೆ. ಸ್ಥಳ : ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.
- **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ, ಗರುಡೋತ್ಸವ, ಸುದರ್ಶನ ಹೋಮ, ರಥೋತ್ಸವ, ಪೂಜಾ ಮಹೋತ್ಸವಗಳು, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನ ಪೂರ್ವಕ ನಿತ್ಯ ಹೋಮ ಮತ್ತು ಮಹಾಸುದರ್ಶನ ಹೋಮ, ಪೂರ್ಣಾಹುತಿ, ಗರುಡೋತ್ಸವ, ಸಂಜೆ 6ಕ್ಕೆ ರುಕ್ಮಿಣಿ ಕಲ್ಯಾಣೋತ್ಸವ, ಲಾಜಾ ಹೋಮ, ಸ್ಥಳ: ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್, ಗೋಕುಲಂ 3ನೇ ಹಂತ.
- **ನಿರ್ದಿಗಂತ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಆರೋಹಣ ಪ್ರೀ ಸ್ಕೂಲ್** : ಅರಿವು ಕಾರ್ಯಕ್ರಮ, ಉಪಸ್ಥಿತರು : ಡಾ. ಎಸ್. ಸುಮತಿ, ಸ್ಥಳ: ಆರೋಹಣ ಪ್ರೀ ಸ್ಕೂಲ್, ಬೋಗಾದಿ, ಸಂಜೆ 5.15 ರಿಂದ.
- **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್** : ವಿಶ್ವ ಭೂಮಿ ದಿನದ ಅಂಗವಾಗಿ ತಾಂತ್ರಿಕ ವಿಚಾರ ಸಂಕಿರಣ ಡಾ. ಟಿ.ವಿ. ರಾಮಚಂದ್ರ ಅವರಿಂದ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ನಿರಂತರ ಫೌಂಡೇಷನ್** : ನಿರಂತರ ಫೌಂಡೇಷನ್ ಕಲಾವಿದರಿಂದ ಪಾರ್ಟಿ ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ಮಾಜಿ ನಿರ್ದೇಶಕ ಚಿದಂಬರರಾವ್ ಜಂಬೆ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 25 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 10 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



18 ಜಾತಿವುಳ್ಳ ಎಡಗೈ ಸಮುದಾಯಕ್ಕೆ ಶೇ.5.25
20 ಜಾತಿವುಳ್ಳ ಬಲಗೈ ಸಮುದಾಯಕ್ಕೆ ಶೇ.5.25
63 ಜಾತಿವುಳ್ಳ ಇತರೆ ಸಮುದಾಯಕ್ಕೆ ಶೇ.4.5

ಒಳ ಮೀಸಲಾತಿ

■ ವಿಶೇಷ ಸಂಪುಟ ಸಭೆ ಮಹತ್ವದ ನಿರ್ಣಯ ■ ಈ ಮೀಸಲಾತಿ ಅನ್ವಯವೇ ಇನ್ನು ನೇಮಕಾತಿ ■ ಎಲ್ಲಾ ಸಮುದಾಯದ ಸಚಿವರ ಸಮ್ಮತಿ ನಿರ್ಧಾರ ■ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ

ಬೆಂಗಳೂರು, ಏ.24(ಕೆಎಂಶಿ)– ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ತೆಗೆದುಕೊಂಡಿದೆ 101 ಪರಿಶಿಷ್ಟ ಜಾತಿಗಳಿಗೆ ಇರುವ ಶೇಕಡ 15ರಷ್ಟು ಮೀಸಲಾತಿಯನ್ನ ಸಮಾನವಾಗಿ ಹಂಚಿಕೆ ಮಾಡುವ ದೃಷ್ಟಿಯಿಂದ ಸಮುದಾಯವನ್ನು ಮೂರು ವರ್ಗಗಳನ್ನಾಗಿಸಿ, ಮೀಸಲಾತಿ ಹಂಚಿಕೆ ಮಾಡುವ ಮೂಲಕ ಒಳಮೀಸಲಾತಿ ನೀತಿ ಜಾರಿಗೊಳಿಸಿದೆ. ಈ ಕುರಿತಂತೆ ಇಂದು ■6ನೇ ಪುಟಕ್ಕೆ


ವಿಧಾನಸೌಧದಲ್ಲಿ ನಡೆದ ವಿಶೇಷ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮದವರಿಗೆ ಮಾಹಿತಿ ನೀಡಿದರು.

ವಿಶೇಷ ಸಚಿವ ಸಂಪುಟದಲ್ಲಿ ಕೈಗೊಂಡಿರುವ ಒಳ ಮೀಸಲಾತಿ ಹಂಚಿಕೆ ನಿರ್ಧಾರದಿಂದ ಮಾದಿಗ ಸಮುದಾಯಕ್ಕೆ ಘೋರ ಅನ್ಯಾಯವಾಗಿದೆ. ಸದಾಶಿವ ಆಯೋಗ, ಮಾಧುಸ್ವಾಮಿ ಸಮಿತಿ ವರದಿ, ನಾಗಮೋಹನ್‌ದಾಸ್ ವರದಿ ಸೇರಿದಂತೆ ಒಳಮೀಸಲಾತಿ ಸಂಬಂಧಿತ ಎಲ್ಲಾ ವರದಿಗಳಲ್ಲೂ ಶೇ.15ರ ಪರಿಶಿಷ್ಟ ಜಾತಿ ಮೀಸಲಾತಿಯಲ್ಲಿ ಶೇ.6ರಷ್ಟನ್ನು ಮಾದಿಗ ಸಮುದಾಯಕ್ಕೆ ನೀಡಿವೆ. ಆದರೆ ಈಗ ರಾಜ್ಯ ಸರ್ಕಾರ ಮೂರು ಗ್ರೂಪ್‌ಗಳನ್ನು ಮಾಡಿ ಮಾದಿಗ ಸಮುದಾಯಕ್ಕೆ ಶೇ.5.25 ರಷ್ಟು ಹಂಚಿಕೆ ಮಾಡಿದೆ. ಅಲ್ಲದೆ, ರೋಸ್ಟರ್ ಬಿಂದು ವಿಚಾರದಲ್ಲೂ ಮಾದಿಗ ಸಮುದಾಯದ 35 ವರ್ಷಗಳ ಹೋರಾಟಕ್ಕೆ ರಾಜ್ಯ ಸರ್ಕಾರ ಮರಣ ಶಾಸನ ಬರೆದಿದೆ.



-ಎಸ್.ಅರುಣ್‌ಕುಮಾರ್, ಹಿರಿಯ ವಕೀಲರು ಹಾಗೂ ಸಾಮಾಜಿಕ ಹೋರಾಟಗಾರರು


ಪರಿಶಿಷ್ಟ ಜಾತಿಯ ಎಲ್ಲಾ 101 ಸಮುದಾಯಗಳಿಗೂ ಯಾವುದೇ ರೀತಿಯ ತಾರತಮ್ಯ ಆಗದಂತೆ ಒಳಮೀಸಲಾತಿ ಹಂಚಿಕೆ ಮಾಡಲಾಗಿದೆ. ರೋಸ್ಟರ್ ಬಿಂದು ಸಂಬಂಧಿತ ಸಮಸ್ಯೆಯನ್ನೂ ಸರಿಪಡಿಸಿದ್ದಾರೆ. 1 ಅಥವಾ 2 ಹುದ್ದೆಗಳಿದ್ದ ಸಂದರ್ಭದಲ್ಲಿ ಅವುಗಳನ್ನು ಎಸ್‌ಸಿ ಜನರಲ್ ಎಂದು ಪರಿಗಣಿಸುವ ನಿರ್ಧಾರದಿಂದ ಎಲ್ಲರಿಗೂ ಅವಕಾಶ ಸಿಗುತ್ತದೆ. ಸದ್ಯ ಶೇ.50 ಮೀಸಲಾತಿಗೆ ಅನುಗುಣವಾಗಿ ಒಳಮೀಸಲಾತಿ ಹಂಚಿಕೆ ಮಾಡಿದ್ದು, ಶೇ.56ರ ಮೀಸಲಾತಿ ವಿಚಾರ ನ್ಯಾಯಾಲಯದಲ್ಲಿ ಇತ್ಯರ್ಥವಾಗು ವವರೆಗೆ ಶೇ.6ರಷ್ಟು ಹುದ್ದೆಯನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸುವುದಾಗಿ ತಿಳಿಸಲಾಗಿದೆ. ಒಟ್ಟಾರೆ ಸಾಮರಸ್ಯ ಕದಡದಂತೆ ಒಳಮೀಸಲಾತಿಯನ್ನು ಸಮಾನವಾಗಿ ಹಂಚಿಕೆ ಮಾಡಲಾಗಿದೆ. ಸದ್ಯಕ್ಕೆ ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ.



- ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ

ಡಿಸೆಂಬರ್ ವೇಳೆಗೆ ತಡೆರಹಿತ ಟೋಲ್

ನವದೆಹಲಿ: ಡಿಸೆಂಬರ್ ವೇಳೆಗೆ ದೇಶದ ಹಲವಾರು ರಾಷ್ಟ್ರೀಯ ಹೆದ್ದಾರಿ ಗಳಲ್ಲಿ ತಡೆರಹಿತ ಟೋಲ್ ವ್ಯವಸ್ಥೆ ಜಾರಿಗೆ ತರಲು ಯೋಜಿಸಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.



ಸರಕುಗಳ ಸಾಗಣೆ ವೆಚ್ಚವನ್ನು ತಗ್ಗಿಸಲು, ಉತ್ತಮ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಿದೆ ಎಂದು ಶುಕ್ರವಾರ ತಿಳಿಸಿದ್ದಾರೆ.

ಈ ಹೊಸ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ವಿಶ್ಲೇಷಣೆಯೊಂದಿಗೆ ಸ್ವಯಂಚಾಲಿತವಾಗಿ ವಾಹನಗಳ ಸಂಖ್ಯಾ ಫಲಕ ಗುರುತಿಸುವಿಕೆ (ಎಎನ್‌ಪಿಆರ್) ಮತ್ತು ಆರ್‌ಎಫ್‌ಐಡಿ ಆಧಾರಿತ ಫಾಸ್ಟ್ಯಾಗ್ ನೊಂದಿಗೆ ತಡೆರಹಿತ ಟೋಲಿಂಗ್ ಅನ್ನು ಸುಗಮಗೊಳಿಸುತ್ತದೆ.

ಈ ವ್ಯವಸ್ಥೆಯಿಂದ ಟೋಲ್‌ಗಳಲ್ಲಿ ವಾಹನಗಳ ನಿಲುಗಡೆ ಮಾಡುವ ಅಗತ್ಯವಿಲ್ಲ. ಹೆಚ್ಚು ಸಾಮರ್ಥ್ಯ ಇರುವ ಎಎನ್‌ಪಿಆರ್ ಕ್ಯಾಮೆರಾ ಮತ್ತು ಫಾಸ್ಟ್ಯಾಗ್ ರೀಡರ್‌ಗಳ ಗುರುತಿಸುವಿಕೆಯ ಆಧಾರದ ಮೇಲೆ ವಾಹನಗಳಿಗೆ ಶುಲ್ಕ ವಿಧಿಸಲಾಗುತ್ತದೆ ಎಂದು ಹೇಳಿದ್ದಾರೆ.

22 ಕ್ಯಾರೆಟ್ ಚಿನ್ನದ ದರ
@ ತೊಳಸಿ
ತೊಳಸಿ ಜ್ಯೂಯಲ್ಸ್
THOLASI JEWELS
Fine Jewellery Since Generations
₹ 14,020/-
ಹಿಂದಿನ ದಿನದ ಬೆಲೆ
ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ಎ.ಎ.ಮೊಹಲ್ಲಾ, ಮೈಸೂರು.
ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221–200926

ಸಾಲ ಮಾಡಿ ತುಪ್ಪ ತಿನ್ನಿಸುತ್ತಿದ್ದಾರೆ... ಎಚ್ಚರ...ಎಚ್ಚರ...!

ಗ್ಯಾರಂಟಿಗಳಿಂದ ರಾಜ್ಯದ ಆರ್ಥಿಕತೆ ಸಂಪೂರ್ಣ ಹದಗೆಟ್ಟಿದೆ: ಹೆಚ್.ಡಿ.ಕುಮಾರಸ್ವಾಮಿ ಕಳವಳ

● ಶ್ರೀಲಂಕಾದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ ● ಪ್ರತಿಯೊಬ್ಬರ ಮೇಲೆ ಲಕ್ಷ ಸಾಲ ● ಕೆ.ಆರ್.ನಗರದಲ್ಲಿ ದೇಗುಲಗಳಿಗೆ ಕಾಯಕಲ್ಪ

ಕೆ.ಆರ್.ನಗರ, ಏ.24– ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ಅಭಿವೃದ್ಧಿಶೀಲ ಕರ್ನಾಟಕದ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಬಸವನಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಶ್ರೀಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ, ಹೊಸ ಅಗ್ರಹಾರ ಗ್ರಾಮದಲ್ಲಿ ಶ್ರೀ ಬಸವೇಶ್ವರಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಶ್ರೀಬಸವೇಶ್ವರ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳೆಯರಿಗೆ 2 ಸಾವಿರ ಕೊಡುತ್ತಿದ್ದಾರೆ ಎಂಬುದೇನೋ ಸರಿ. ಆದರೆ ಆ ಮೊತ್ತವನ್ನು ರಾಜ್ಯ ಸರ್ಕಾರ ಹೇಗೆ ಕೊಡುತ್ತಿದೆ ಎಂಬುದನ್ನು ಜನರು ಗಮನವಿಟ್ಟು ನೋಡಬೇಕು. ಸಾಲ ಮಾಡಿ ತುಪ್ಪ ತಿನ್ನು ಎನ್ನುವ ಹಾಗೆ ಸರ್ಕಾರ ಲಕ್ಷಾಂತರ ಕೋಟಿ ಸಾಲ ಮಾಡಿ ಗ್ಯಾರಂಟಿ ನೀಡುತ್ತಿದೆ. ಈಗಾಗಲೇ ಈ ಸರ್ಕಾರ 7 ಲಕ್ಷದ 26 ಸಾವಿರ ಕೋಟಿ ರೂಪಾಯಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ ಪ್ರತಿಯೊಬ್ಬ ■6ನೇ ಪುಟಕ್ಕೆ


ಕೆ.ಆರ್.ನಗರ ತಾಲೂಕಿನ ಹೊಸ ಅಗ್ರಹಾರದಲ್ಲಿ ಶ್ರೀಬಸವೇಶ್ವರ ದೇವಸ್ಥಾನದ ಕುರ್ಜು ಹಾಗೂ ಬಸವೇಶ್ವರಸ್ವಾಮಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಮಾಜಿ ಸಚಿವ ಸಾ.ರಾ.ಮಹೇಶ್ ಇದ್ದಾರೆ.

ಚಿತ್ರಹಿಂಸೆ ನೀಡುತ್ತಿದ್ದ ಮಗನ ಕೊಂದ ತಾಯಿ!

● ಚಾಮುಂಡಿಬೆಟ್ಟ ತಪ್ಪಲಿನ ತಾವರೆಕಟ್ಟೆ ಬಳಿಯ ಕೊಲೆ ಭೇದಿಸಿದ ಪೊಲೀಸರು! ● ಚಡ್ಡಿಯ ಸುಳಿವು ಆಧರಿಸಿ 200ಕ್ಕೂ ಅಧಿಕ ಸಿಸಿ ಕ್ಯಾಮರಾ ದೃಶ್ಯಗಳ ಜಾಡು! ● ನಜರ್‌ಬಾದ್ ಪೊಲೀಸರ ಸಾಹಸ ತನಿಖೆ; ಮಗನ ಹಿಂಸೆ ತಾಳಲಾರದೆ ಹೆತ್ತಮ್ಮನ ಭೀಭತ್ಸ ಕೃತ್ಯ

ಮೈಸೂರು,ಏ.24(ಎಂಟಿವೈ)– ಕುಡಿತದ ಚಟಕ್ಕೆ ದಾಸನಾಗಿ, ಕೆಲಸಕ್ಕೂ ಹೋಗದೆ ಚಿತ್ರಹಿಂಸೆ ನೀಡುತ್ತಿದ್ದ ಪುತ್ರನನ್ನು ತಾಯಿಯೇ ಹತ್ಯೆ ಮಾಡಿರುವ ಘಟನೆ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ.

ಚಾಮುಂಡಿಬೆಟ್ಟ ತಪ್ಪಲಿನ ತಾವರೆಕಟ್ಟೆ ಬಳಿಯ ಖಾಲಿ ಜಾಗದಲ್ಲಿ ಏ.15ರಂದು ನಡೆದಿದ್ದ ಅಪರಿಚಿತ ವ್ಯಕ್ತಿಯ ಹತ್ಯೆ ಪ್ರಕರಣವನ್ನು ಭೇದಿಸಿರುವ ನಜರ್‌ಬಾದ್ ಠಾಣೆ ಪೊಲೀಸರು, ತನ್ನ ಪುತ್ರನನ್ನು ಕಟ್ಟಿಗೆಯಿಂದ ಹೊಡೆದು, ತಲೆ ಮೇಲೆ ಕಲ್ಲು ಎತ್ತಿಹಾಕಿ ಘೋರವಾಗಿ ಕೊಲೆ ಮಾಡಿದ ತಾಯಿಯನ್ನು ಬಂಧಿಸಿ ದ್ದಾರೆ. ಮೈಸೂರಿನ ಎನ್.ಆರ್.ಮೊಹಲ್ಲಾದ ಕೆಸರೆ, ಕುರಿ ಮಂಡಿಯ 10ನೇ ಕ್ರಾಸ್ ನಿವಾಸಿ ರಮೇಶ್(44)ನನ್ನು ಹತ್ಯೆ ಮಾಡಿದ ಆತನ ತಾಯಿ ಮಂಜುಳಾ(60) ರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ರೋಸಿ ಹೋಗಿ ದುಷ್ಕೃತ್ಯ: ಕೊಲೆ ಆರೋಪಿ ಮಂಜುಳಾ ಅವರಿಗೆ ಇಬ್ಬರು ಮಕ್ಕಳಿದ್ದು, ಮೊದಲ ಮಗ ಪಾರ್ಶ್ವವಾಯು ಪೀಡಿತನಾಗಿ, ಪರಾವಲಂಭಿಯಾಗಿದ್ದಾನೆ. ಎರಡನೇ ಮಗ ರಮೇಶ ಚೆನ್ನಾಗಿದ್ದರೂ ಸೋಮಾರಿಯಾಗಿದ್ದ. ಮನೆಯ ದುಃಸ್ಥಿತಿ ತಿಳಿದಿದ್ದರೂ ಆತ ಕೆಲಸಕ್ಕೆ ಹೋಗುತ್ತಿರಲಿಲ್ಲ. ಅಲ್ಲದೆ, ಕುಡಿತಕ್ಕೆ ದಾಸನಾಗಿ ಹಣಕ್ಕಾಗಿ ತಾಯಿಯನ್ನೇ ■6ನೇ ಪುಟಕ್ಕೆ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಸುಂದರಮ್ಮ ಪಾಪಣ್ಣರವರು

(W/o ಲೇಟ್ ಕೋಡಿ ವಿ. ಪಾಪಣ್ಣ, ಮಾಜಿ ಶಾಸಕರು, ಹುಣಸೂರು)

ಇವರು ದಿ: 16/04/2026 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 26–04–2026 ಭಾನುವಾರ ಬೆಳಗ್ಗೆ 11 ಗಂಟೆಗೆ ಹುಣಸೂರಿನ ಸಂತೆಕೆರೆ ಕೋಡಿಯ ತೋಟದಲ್ಲಿ ಏರ್ಪಡಿಸಿರುವುದರಿಂದ, ಆಹ್ವಾನ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ವೆಂಕಟೇಶ್ ಪಾಪಣ್ಣ
ಮಾಜಿ ಗೌರವಾಧ್ಯಕ್ಷರು ಹಾಗೂ ಮಾಜಿ ನಿರ್ದೇಶಕರು
ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಹಾಗೂ
ದಿ॥ ಕೋಡಿ .ವಿ ಪಾಪಣ್ಣನವರ ಸಮಸ್ತ ಕುಟುಂಬವರ್ಗ

ಭೋಜನ: ಮಧ್ಯಾಹ್ನ 1 ಗಂಟೆಗೆ

ಸ್ಥಳ: 1.) # 1087, ಲಲಿತಾದ್ರಿ ರಸ್ತೆ, ಕುವೆಂಪುನಗರ, ಮೈಸೂರು
2.) ತೋಟದ ಆವರಣ, ಸಂತೆಕೆರೆ ಕೋಟೆ ಗ್ರಾಮ, ಹುಣಸೂರು ತಾ॥



ನಕ್ಕರೆ ಅದೇ ಸ್ವರ್ಗ

ಸಂತ : ನನ್ನ ಮಗ ನನ್ನ ಮಾತನ್ನು ಕೇಳೋದೆ ಇಲ್ಲ, ಗೊತ್ತಾ?
ಬಂಟಿ : ಯಾಕೆ? ಅವನಿಗೆ ಅಷ್ಟೊಂದು ಕೊಬ್ಬಾ?
ಸಂತ : ಇಲ್ಲಾ, ಅವನಿಗೆ ಕಿವಿ ಕೇಳುವುದಿಲ್ಲ!

ಮೈಸೂರು ಮಿತ್ರ

ಶನಿವಾರ, ಏಪ್ರಿಲ್ 25, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಿನ್ನೆ ಇದ್ದ ಖುಷಿ ಇವತ್ತಿಲ್ಲ ಅಂದ್ಮೇಲೆ, ಇವತ್ತಿನ ದುಃಖ ಸಹ ನಾಳೆ ಇರೋಲ್ಲ. ಯಾವುದು ಶಾಶ್ವತವಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಬೆರಳು ತೋರಿಸಿದರೆ ಹಸ್ತ ನುಂಗಿದಂತೆ.

ನಿಮ್ಮ ಪತ್ರಗಳು

ನಕಲಿ ಪನ್ನೀರ್ ಹಾವಳಿ ತಡೆಗಟ್ಟಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಹಾಲಿನ ಬದಲಾಗಿ ಹಾನಿಕಾರಕ ಎಣ್ಣೆ, ಪಾಮ್ ಆಯಿಲ್ ಮತ್ತು ಸ್ಟಾರ್ಚ್ ಬಳಸಿ ತಯಾರಿಸಿದ ನಕಲಿ ಪನ್ನೀರ್ ಮಾರುಕಟ್ಟೆಯಲ್ಲಿ ಹೆಚ್ಚಾಗುತ್ತಿದೆ. ಇದು ಅಸಲಿ ಪನ್ನೀರ್‌ನಂತೆ ಕಂಡರೂ ಇದರಲ್ಲಿ ಹಾಲಿನ ಪ್ರೊಟೀನ್ ಮತ್ತು ಕೊಬ್ಬು ಇರುವುದಿಲ್ಲ. ಅಸಲಿ ಪನ್ನೀರ್ ಕಿಲೋಗೆ ರೂ. 500 ಇದ್ದರೆ ಈ ನಕಲಿ ಪನ್ನೀರ್ ಕೇವಲ ರೂ.150ಕ್ಕೆ ಸಿಗುತ್ತದೆ. ಹೋಟೆಲ್ ಮತ್ತು ಸಮಾರಂಭಗಳಲ್ಲಿ ಹೆಚ್ಚಾಗಿ ಬಳಸಲಾಗುವ ಈ ಪನ್ನೀರ್‌ನಲ್ಲಿನ ಕೆಟ್ಟ ಕೊಬ್ಬು ಹೃದಯದ ಆರೋಗ್ಯಕ್ಕೆ ಹಾನಿಕಾರಕ, ಇದರಲ್ಲಿ ಅಗತ್ಯ ಪೋಷಕಾಂಶಗಳ ಕೊರತೆಯಿದ್ದು, ರಾಸಾಯನಿಕಗಳ ಬಳಕೆ ಹೆಚ್ಚಾಗಿರುತ್ತದೆ ಎಂಬುದು ಜನಜನಿತ.

ಗ್ರಾಹಕರು ಪ್ಯಾಕೆಟ್ ಮೇಲಿರುವ ಎಫ್.ಎಸ್.ಎಸ್.ಎ.ಐ 'ಹಾಲಿನ ಹನಿ' ಗುರುತು ಬಗ್ಗೆ ಮಾಹಿತಿ ಕೊರತೆಯಿದೆ. ಅಗ್ಗದ ಬೆಲೆಗೆ ಮಾರು ಹೋಗಿ ಜನರು ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಸಸ್ಯಾಹಾರಿಗಳಿಗೆ ಪ್ರೊಟೀನ್ ನೀಡಬೇಕಾದ ಪನ್ನೀರ್ ವಿಷವಾಗದಂತೆ ಎಚ್ಚರವಹಿಸಬೇಕಿದೆ. ಅನಧಿಕೃತ ತಯಾರಿಕಾ ಘಟಕಗಳ ಮೇಲೆ ನಿರಂತರ ನಿಗಾ ಇಡುವುದು ಮತ್ತು ಹಾಲಿನ ಅಂಶ ವಿಲ್ಲದ ಉತ್ಪನ್ನಗಳಿಗೆ 'ಪನ್ನೀರ್' ಎಂಬ ಹೆಸರನ್ನು ಬಳಸುವವರ ವಿರುದ್ಧ ಭಾರಿ ದಂಡ ಹಾಗೂ ಪರವಾನಗಿ ರದ್ದು ಮಾಡುವ ಕ್ರಮ ಸರಕಾರ ಜರುಗಿಸಬೇಕು.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಅಂತೂ ಇಂತೂ ಕೆಲಸ ಸಿಕ್ತು !

ಮಾನ್ಯರೆ,

ಕಳೆದ ಐದು ವರ್ಷಗಳ ಹಿಂದೆ ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದಾಗಿ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಈಗಲಾದರೂ ರಾಜ್ಯ ಸರ್ಕಾರ ಉದ್ಯೋಗ ನೀಡಿರುವುದು ಸ್ವಾಗತಾರ್ಹವಾಗಿದೆ.

ಮೃತಪಟ್ಟ ಕುಟುಂಬದ ಸದಸ್ಯರು ಉದ್ಯೋಗ ಕೋರಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬಂದಿದ್ದರು. ಅಂತೂ ಈಗಲಾದರೂ ರಾಜ್ಯ ಸರ್ಕಾರ ಅವರಿಗೆಲ್ಲಾ ಉದ್ಯೋಗ ನೀಡಿರುವುದು ಸಂತಸದ ಸಂಗತಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಬೇಸಿಗೆಯಲ್ಲಿ ನೀರನ್ನು ಜಾಗರೂಕತೆಯಿಂದ ಬಳಸೋಣ

ಮಾನ್ಯರೆ,

ಬೇಸಿಗೆ ತೀವ್ರಗೊಳ್ಳುತ್ತಿದ್ದಂತೆ ರಾಜ್ಯದ ಹಲವೆಡೆ ನೀರಿನ ಕೊರತೆ ಗಂಭೀರ ವಾಗುತ್ತಿದೆ. ಕೆರೆಗಳು, ಹಳ್ಳಗಳು ಒಣಗುತ್ತಿದ್ದು, ಭೂಗರ್ಭ ಜಲಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಇಂತಹ ಸಂದರ್ಭದಲ್ಲಿ ನೀರನ್ನು ಮಿತವಾಗಿ ಮತ್ತು ಜಾಗರೂಕತೆಯಿಂದ ಬಳಸುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ.

ನೀರಿಲ್ಲದೆ ಜೀವನ ಅಸಾಧ್ಯ. ಆದರೂ ನಾವು ದಿನನಿತ್ಯದಲ್ಲಿ ನೀರನ್ನು ವ್ಯರ್ಥ ವಾಗಿ ಬಳಸುತ್ತಿರುವುದು ವಿಷಾದನೀಯ. ಮನೆಗಳಲ್ಲಿ ಟ್ಯಾಪ್‌ಗಳನ್ನು ತೆರೆದಿಟ್ಟು ಕೊಳ್ಳುವುದು, ವಾಹನಗಳನ್ನು ಅತಿಯಾಗಿ ತೊಳೆಯುವುದು, ತೋಟಗಳಿಗೆ ಅಗತ್ಯಕ್ಕಿಂತ ಹೆಚ್ಚು ನೀರು ಬಳಸುವುದು ಇವುಗಳೆಲ್ಲ ನೀರಿನ ದುರುಪಯೋಗಕ್ಕೆ ಉದಾಹರಣೆಗಳಾಗಿವೆ.

ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರದ ಜೊತೆಗೆ ಜನರೂ ಸಹ ಜಾಗೃತಿಯಿಂದ ನಡೆದುಕೊಳ್ಳಬೇಕು. ಮಳೆ ನೀರನ್ನು ಸಂಗ್ರಹಿಸುವುದು, ಬಳಸಿದ ನೀರನ್ನು ಪುನಃ ಉಪಯೋಗಿಸುವುದು ಹಾಗೂ ಅಗತ್ಯವಿರುವಷ್ಟೇ ನೀರನ್ನು ಬಳಸುವಂತಹ ಸರಳ ಕ್ರಮಗಳನ್ನು ಅನುಸರಿಸಿದರೆ ನೀರಿನ ಸಮಸ್ಯೆಯನ್ನು ಕೆಲ ಮಟ್ಟಿಗೆ ತಗ್ಗಿಸಬಹುದು.

ನೀರು ಪ್ರಕೃತಿಯ ಅಮೂಲ್ಯ ಸಂಪತ್ತು. ಅದನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ. ಇಂದು ಉಳಿಸಿದ ನೀರು ನಾಳೆಯ ಬದುಕಿಗೆ ಆಧಾರ ಎಂಬುದನ್ನು ಮನದಲ್ಲಿಟ್ಟುಕೊಂಡು, ಪ್ರತಿಯೊಬ್ಬರೂ ನೀರನ್ನು ಜವಾಬ್ದಾರಿಯಿಂದ ಬಳಸೋಣ.

ಬೇಸಿಗೆ ಕಾಲವು ಬಂದಾಗ ನೀರಿನ ಅಗತ್ಯತೆ ಹೆಚ್ಚುತ್ತದೆ. ನೀರು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗ. ಕುಡಿಯಲು, ಅಡುಗೆಗೆ, ಸ್ವಚ್ಛತೆಗೆ, ಕೃಷಿಗೆ ಎಲ್ಲದಕ್ಕೂ ನೀರಿನ ಅಗತ್ಯವಿದೆ. ಆದರೆ ಬೇಸಿಗೆಯಲ್ಲಿ ನೀರನ್ನು ವ್ಯರ್ಥವಾಗಿ ಬಳಸಿದರೆ ಮುಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆ ಎದುರಾಗಬಹುದು.

ಹೀಗಾಗಿ ಪ್ರತಿಯೊಬ್ಬರೂ ನೀರಿನ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು. ನೀರನ್ನು ಉಳಿಸಲು ಕೆಲವು ಸರಳ ಕ್ರಮಗಳನ್ನು ಅನುಸರಿಸಬಹುದು: ಅಗತ್ಯವಿರುವಷ್ಟೇ ನೀರನ್ನು ಬಳಸುವುದು, ಟ್ಯಾಪ್‌ಗಳನ್ನು ಬಳಸಿದ ಬಳಿಕ ತಕ್ಷಣ ಮುಚ್ಚುವುದು, ಮಳೆ ನೀರನ್ನು ಸಂಗ್ರಹಿಸುವ ವ್ಯವಸ್ಥೆ ಮಾಡುವುದು, ವಾಹನ ತೊಳೆಯುವಾಗ ಹೆಚ್ಚು ನೀರನ್ನು ವ್ಯರ್ಥ ಮಾಡದಿರುವುದು. ತೋಟಗಳಿಗೆ ಬೆಳಗ್ಗೆ ಅಥವಾ ಸಂಜೆ ನೀರು ಹಾಕುವುದು. ಇಂತಹ ಸಣ್ಣ ಕ್ರಮಗಳು ನೀರಿನ ಸಂರಕ್ಷಣೆಗೆ ದೊಡ್ಡ ಸಹಾಯ ಮಾಡುತ್ತವೆ. ನಾವು ನೀರನ್ನು ಉಳಿಸಿದರೆ ಅದು ನಮ್ಮ ಮುಂದಿನ ಪೀಳಿಗೆಗೆ ದೊಡ್ಡ ಕೊಡುಗೆಯಾಗಿದೆ. ಬೇಸಿಗೆಯಲ್ಲಿ ನೀರನ್ನು ಜಾಗರೂಕತೆಯಿಂದ ಬಳಸಿ ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ. ನೀರು ಉಳಿಸಿ ಜೀವನ ಉಳಿಸಿ ಎಂಬ ಸಂದೇಶವನ್ನು ಪಾಲಿಸೋಣ.

–ಕಿರಣ್ ಕುಮಾರ್ ಎಂ, ಶಿಕ್ಷಕರು, ಸಂತ ಜೋಸೆಫರ ಪ್ರೌಢಶಾಲೆ, ಮೈಸೂರು.

ದಾಸಪ್ಪ ಸರ್ಕಲ್ ಬಸ್ ನಿಲ್ದಾಣದ ಅವ್ಯವಸ್ಥೆ




ಮಾನ್ಯರೆ,

ಮೈಸೂರಿನ ದಾಸಪ್ಪ ಸರ್ಕಲ್ ಬಸ್ ನಿಲ್ದಾಣದ ಬಳಿ ಒಳಚರಂಡಿ ಪೈಪ್ ಒಡೆದು ಹೋಗಿ ಕಲುಷಿತ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇಲ್ಲಿ ಬಸ್ ನಿಲ್ದಾಣ ಇರುವುದರಿಂದ ದುರ್ವಾಸನೆ ಸಹಿಸಿ, ಪ್ರಯಾಣಿಕರು ಬಸ್‌ಗಾಗಿ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಒಳಚರಂಡಿ ನೀರು ಸುಮಾರು ಒಂದು ತಿಂಗಳಿಂದ ಹರಿಯುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಇತ್ತ ಗಮನಹರಿಸಿ ಒಳಚರಂಡಿಯನ್ನು ದುರಸ್ಥಿಪಡಿಸಬೇಕೆಂದು ಈ ಮೂಲಕ ಮನವಿ.

– ಪ್ರಯಾಣಿಕರು, ಮೈಸೂರು.

ಹೆಸರಿಗೆ ದೊಡ್ಡವನಾಗಿ ಮೆರೆದರೆ ಏನು ಬಂತು?







ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654

> "ಹಾದಿಬೀದಿಯಲ್ಲಿ, ಪಾರ್ಕುಗಳಲ್ಲಿ, ಚಹಾ ಅಂಗಡಿಗಳಲ್ಲಿ ಜನಸಾಮಾನ್ಯರು ಮಾತನಾಡಿಕೊಳ್ಳುವ ಮಾತುಗಳನ್ನು ನೋಡಿದರೆ, ಅವಿದ್ಯಾವಂತ ಕೂಡ ದೊಡ್ಡಣ್ಣನ ಪರ ಇಲ್ಲದಿರುವುದನ್ನು ಗಮನಿಸಬಹುದು, ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಬಯಸುತ್ತಿದ್ದ ಟ್ರಂಪ್ ಹೆಸರು ಹಾಗೂ ವ್ಯಕ್ತಿತ್ವ ಜಾಗತಿಕವಾಗಿ ಕುಸಿದಂತೆ ಕಾಣುತ್ತಿದೆ. ಮೀಸೆ ತಿರುವಿ ಕುಣಿದವರೆಲ್ಲ ಏನಾದರು ಎಂಬುದನ್ನು ಅಮೆರಿಕ ಅರಿಯಬೇಕಾಗಿದೆ. ತನ್ನ ನಡೆ ಹೀಗೇ ಮುಂದುವರಿದರೆ ಮುಂದೊಂದು ದಿನ ಡಾಲರ್ ಕೂಡ ಡಲ್ ಆಗುವುದರಲ್ಲಿ ಸಂದೇಹವೇ ಇಲ್ಲ!.

ಅಣ್ಣಾವ್ರು ಅಭಿನಯಿಸಿ ಹಾಡಿದ ಕನ್ನಡ ಚಲನಚಿತ್ರದ ಗೀತೆಯೊಂದಿದೆ; ಮುತ್ತಿನಂತ ಮಾತೊಂದು ಗೊತ್ತೇನಮ್ಮ... ಸಿರಿತನವೆಂದು ಶಾಶ್ವತವಲ್ಲ, ಬಡಜನರೆಂದು ಪ್ರಾಣಿಗಳಲ್ಲ.... ಕೋಟೆ ಕಟ್ಟಿ ಮೆರೆದವರೆಲ್ಲ ಏನಾದರು. ಮೀಸೆ ತಿರುವಿ ಕುಣಿದವರೆಲ್ಲ ಮಣ್ಣಾದರು, ಇನ್ನು ನೀ ಯಾವ ಲೆಕ್ಕ ಹೇಳೇ ಸುಕುಮಾರಿಯೇ, ಇಲ್ಲ ಹೆಮ್ಮಾರಿಯೇ... ಚಿ.ಉದಯಶಂಕರ್‌ರವರು ರಚಿಸಿರುವ ಸಾಹಿತ್ಯವು ಇಂದು ಅಮೆರಿಕ ಅಧ್ಯಕ್ಷರ ವರ್ತನೆಗೆ ತಕ್ಕಂತಿದೆ. ಪ್ರಸ್ತುತ ಅಮೆರಿಕ ದೇಶವು ಜಗತ್ತಿನ ದೊಡ್ಡಣ್ಣನಾಗಿ ಹಿಟ್ಲರ್‌ನಂತೆ ವರ್ತಿಸುವುದು ಸರಿಯೇ?. ಶಾಂತಿ ಸ್ಥಾಪನೆಗೆ ಸಹಕಾರಿ ಎನ್ನಬಹುದಾದರೂ, ತನ್ನ ಸ್ವಾರ್ಥಕ್ಕಾಗಿ ಮತ್ತು ಆಧಿಪತ್ಯವನ್ನು ಸ್ಥಾಪಿಸುವ ನಡೆಯಾಗಿದೆ ಎಂಬುದು ಕಟು ಸತ್ಯ. ಎಲ್ಲಿಯ ಹಾರ್ಮುಜ್ ಜಲಸಂಧಿ?, ಎಲ್ಲಿಯ ಅಮೆರಿಕ?, ಎತ್ತಣಿಂದೆತ್ತ ಸಂಬಂಧವಯ್ಯಾ?. ದೇಶವಿರಲಿ ಅಥವಾ ವ್ಯಕ್ತಿಯೇ ಆಗಿರಲಿ ಎಲ್ಲರನ್ನೂ ಗೌರವಿಸಿದಾಗ ಮಾತ್ರ ಸಮಾಜದಲ್ಲಿ ಸಮಾನತೆಯೊಂದಿಗೆ ಶಾಂತಿ ಸ್ಥಾಪಿಸಲು ಸಾಧ್ಯ.

ಬದಲಾಗುತ್ತಿರುವ ಕಾಲಘಟ್ಟದಲ್ಲಿ ಯಾರೂ ಯಾರಿಗಿಂತಲೂ ದೊಡ್ಡವರಲ್ಲ, ನಾನೇ ದೊಡ್ಡವನೆಂದು ತಿಳಿದು ಮೆರೆದರೆ ಉಳಿಗಾಲವಿಲ್ಲ. ಇರಾನ್ ದೇಶವು ಅಮೆರಿಕಾಕ್ಕಿಂತ ದೊಡ್ಡದೇನಲ್ಲ, ಜನಸಂಖ್ಯೆಯಲ್ಲಿ ಅಮೆರಿಕಾ 34.87ಕೋಟಿ, ವಿಸ್ತೀರ್ಣದಲ್ಲಿ 91.47ಲಕ್ಷ ಚ.ಕಿಮೀ, ಇರಾನ್ ಜನಸಂಖ್ಯೆಯಲ್ಲಿ 9.20ಕೋಟಿ ವಿಸ್ತೀರ್ಣದಲ್ಲಿ 16.29ಲಕ್ಷ ಚ.ಕಿಮೀ., ಹೋಲಿಕೆ ಅಜಗಜಾಂತರ ಆದರೂ ದೊಡ್ಡಣ್ಣನನ್ನು ಮೆಟ್ಟಿ ಹಲವಾರು ದಿನಗಳಿಂದ ಹೋರಾಡುತ್ತಿದೆ ಎಂದರೆ ಒಂದು ದೇಶದ ಶಕ್ತಿಯನ್ನು ಅಬ್ಬರ ಹಾಗೂ ಗಾತ್ರ ಮಾತ್ರದಿಂದಲೇ ಅಳೆಯಲಾಗದು ಎನ್ನಬಹುದು. ಜಗತ್ತು ಕೇಂದ್ರೀಕೃತವಾಗದೆ ವಿಕೇಂದ್ರಿಕೃತ ಆಗುವತ್ತಾ ಸಾಗಿದೆ ಎನ್ನುವ ಮುನ್ಸೂಚನೆ ಕೂಡ ಇದಾಗಿದೆ.

ಅಮೆರಿಕಾವು ಪಡೆದಿರುವ ಬಲವಾದ ಸಾಫ್ಟ್‌ವೇರ್ ಪವರ್, ಫಾಸ್ಟ್ ಫುಡ್ ಸಂಸ್ಕೃತಿ, ಅಂತರ್ಜಾಲ ತಂತ್ರಜ್ಞಾನ, ಡಾಲರ್ ಮೌಲ್ಯದ ಬಲ ಮತ್ತು ಹಾಲಿವುಡ್ ಸಿನಿಮಾಗಳು ಇಡೀ ಪ್ರಪಂಚದ ಜೀವನಶೈಲಿಯನ್ನು ನಿಯಂತ್ರಿಸುತ್ತಿದೆ. ವಿಶ್ವಸಂಸ್ಥೆ ಮತ್ತು ಅದರ ಉಪಸಮಿತಿಗಳಾದ ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ನಿಧಿಗಳಲ್ಲಿ ಅಮೆರಿಕಾದ ನಿರ್ಧಾರಗಳೇ ಅಂತಿಮ ಎನ್ನುವ ಪರಿಸ್ಥಿತಿ ಇರುವುದನ್ನು ಇತರೆ ದೇಶಗಳು ಹೇಗೆ ಸಹಿಸಿಯಾವು?, ಮಾನವ ಸಂಪನ್ಮೂಲದಲ್ಲಿ ವಿಶ್ವಕ್ಕೇ ನಂ.1 ಆಗಿರುವ ಭಾರತವೂ ಸಹ ಯಾವುದರಲ್ಲೂ ಕಡಿಮೆ ಇಲ್ಲ, ನೀತಿ ನಿಯಮಗಳಲ್ಲಿ, ನಡೆನುಡಿಯಲ್ಲಿ ದೊಡ್ಡಣ್ಣನು ನಮಗೆ ಸಾಟಿಯಾಗದು, ದೊಡ್ಡಣ್ಣನಿಗಿಂತಲೂ ದೊಡ್ಡವನು ಭಾರತ, ಆದರೂ ನಾವು ಯಾರ ಮೇಲೂ ಸಾರ್ವಭೌಮತ್ವವನ್ನು ಸ್ಥಾಪಿಸುವುದಿಲ್ಲ, ಅನ್ಯದೇಶಗಳ ವ್ಯವಹಾರಗಳಲ್ಲಿ ಎಂದಿಗೂ ಮೂಗನ್ನು ತೂರಿಸುವುದಕ್ಕೆ ಹೋಗುವುದಿಲ್ಲ.

ಅಮೆರಿಕ ಯುದ್ಧಭೂಮಿಯ ಜೊತೆಗೆ ಆರ್ಥಿಕವಾಗಿ ನಿಯಂತ್ರಣ ಸಾಧಿಸುತ್ತಿದೆ, ಇರಾನ್, ರಷ್ಯಾ, ಉತ್ತರ ಕೊರಿಯಾ ಮುಂತಾದ ದೇಶಗಳು ತನ್ನ ಮಾತಿಗೆ ಕಿಮ್ಮತ್ತು ಕೊಡದಿದ್ದರೆ ಆ ದೇಶಗಳ ಆರ್ಥಿಕತೆ ಕುಸಿಯುವಂತೆ ಕಠಿಣ ಆರ್ಥಿಕ ನಿರ್ಬಂಧಗಳನ್ನು ಹೇರುತ್ತದೆ. ಇತ್ತೀಚೆಗೆ ಭಾರತಕ್ಕೂ ತೆರಿಗೆ ವಿಷಯದಲ್ಲಿ ತೆಗೆದುಕೊಂಡ ಕ್ರಮಗಳನ್ನು ನೋಡಿದರೆ, ಅದರ ಮುಂದೆ ಯಾವ ದೇಶವೂ ಬೆಳೆಯಬಾರದು ಎಂಬ ಧೋರಣೆಯನ್ನು ಅನುಸರಿಸಿದಂತೆ ಕಾಣುವುದು. ಜಾಗತಿಕ ವ್ಯವಹಾರದಲ್ಲಿ ಅಮೆರಿಕನ್ ಡಾಲರ್ ಮುಖ್ಯವಾಗಿರುವುದರಿಂದ ಆರ್ಥಿಕವಾಗಿ ಬೇರೆಯವರನ್ನು ಹತ್ತಿಕ್ಕುವ ಶಕ್ತಿಯನ್ನು ಅದು ಹೊಂದಿದೆ.

ಮಿಲಿಟರಿ ವಿಷಯಕ್ಕೆ ಬಂದರೆ ವಿಶ್ವದಲ್ಲಿ ಅತ್ಯಂತ ಬಲಿಷ್ಠ ಸೈನ್ಯವನ್ನು ಹೊಂದಿದೆ, ಅದರ ಬಲದಿಂದಲೇ ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಭಯೋತ್ಪಾದನೆ ನಿರ್ಮೂಲನೆ ಹೆಸರಿನಲ್ಲಿ ತನಗೆ ವಿರುದ್ಧವಿರುವ ದೇಶಗಳ ಮೇಲೆ ಬಲ ಪ್ರಯೋಗಿಸುವ ಅಥವಾ ಆಡಳಿತವನ್ನು ಬದಲಿಸುವ ಕೆಲಸಕ್ಕೆ ಕೈಹಾಕುತ್ತಲೇ ಇರುತ್ತದೆ. ಮಿಲಿಟರಿ ಬಲದಲ್ಲಿ ಅಮೆರಿಕಾವು ಮೊದಲ ಸ್ಥಾನದಲ್ಲಿದೆ, ನಂತರದ ಸ್ಥಾನ ಕ್ರಮವಾಗಿ ರಷ್ಯಾ, ಚೈನಾ ಹಾಗೂ ಭಾರತ. 51.37 ಲಕ್ಷದಷ್ಟು ಮಿಲಿಟರಿ ಸಿಬ್ಬಂದಿಗಳನ್ನು ಭಾರತ ಹೊಂದಿದೆ, ಅಮೆರಿಕಾ 21.27 ಲಕ್ಷಗಳನ್ನು ಹೊಂದಿ ರಷ್ಯಾ ಮತ್ತು ಚೈನಾಕ್ಕಿಂತಲೂ ಹಿಂದಿದೆಯಾದರೂ ಇತರೆಲ್ಲಾ ದೇಶಗಳಿಗಿಂತ ಅತೀ ಹೆಚ್ಚು ಹಣವನ್ನು ಮಿಲಿಟರಿಗಾಗಿ ಖರ್ಚು ಮಾಡುತ್ತಿದೆ.

ಜಾಗತಿಕ ಭದ್ರತೆಯಲ್ಲಿ ಸ್ಥಿರತೆ ಕಾಪಾಡುವುದು, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಾರ್ಗದರ್ಶನ ಹಾಗೂ ಭಯೋತ್ಪಾದನೆಯ ವಿರುದ್ಧದ ಹೋರಾಟಕ್ಕೆ ಮುಂಚೂಣಿಯಲ್ಲಿರುವುದು... ಇತ್ಯಾದಿಗಳು ಒಪ್ಪಲೇಬೇಕಿರುವ ಅಂಶಗಳಾದರೂ ಇತರೆ ದೇಶಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ, ಅಭಿವೃದ್ಧಿ ದೇಶಗಳ ಆರ್ಥಿಕತೆಯನ್ನು ನಿಯಂತ್ರಿಸುವುದು, ಸ್ವಾರ್ಥಕ್ಕಾಗಿ ಯುದ್ಧಗಳನ್ನು ಸೃಷ್ಟಿಸುವುದು ನ್ಯಾಯಸಮ್ಮತವಲ್ಲದ ನಡೆಗಳು.

ತೆರಿಗೆಗಳನ್ನು ವಿಧಿಸುವಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಂದ ಹಾಗೂ ಇರಾನ್ ಮೇಲೆ ಇಸ್ರೇಲ್ ಜೊತೆ ಸೇರಿ ಯುದ್ಧ ನಡೆಸುತ್ತಿರುವುದರಿಂದ ವಿಶ್ವದ ಎಲ್ಲಾ ದೇಶಗಳಿಗೂ ಆಗುತ್ತಿರುವ ಪರಿಣಾಮಗಳನ್ನು ಮಾಧ್ಯಮಗಳಲ್ಲಿ ತಿಳಿದು ಹಾದಿಬೀದಿಯಲ್ಲಿ ಪಾರ್ಕುಗಳಲ್ಲಿ, ಚಹಾ ಅಂಗಡಿಗಳಲ್ಲಿ ಜನಸಾಮಾನ್ಯರು ಮಾತನಾಡಿಕೊಳ್ಳುವ ಮಾತುಗಳನ್ನು ನೋಡಿದರೆ, ಅವಿದ್ಯಾವಂತ ಕೂಡ ದೊಡ್ಡಣ್ಣನ ಪರ ಇಲ್ಲದಿರುವುದನ್ನು ಗಮನಿಸಬಹುದು, ಶಾಂತಿಗಾಗಿ ನೊಬಲ್ ಪ್ರಶಸ್ತಿ ಬಯಸುತ್ತಿದ್ದ ಡೊನಾಲ್ಡ್ ಟ್ರಂಪ್ ಹೆಸರು ಹಾಗೂ ವ್ಯಕ್ತಿತ್ವ ಜಾಗತಿಕವಾಗಿ ಕುಸಿದಂತೆ ಕಾಣುತ್ತದೆ. ಮೀಸೆ ತಿರುವಿ ಕುಣಿದವರೆಲ್ಲ ಏನಾದರು ಎಂಬುದನ್ನು ಅಮೆರಿಕಾ ಅರಿಯಬೇಕಾಗಿದೆ. ತನ್ನ ನಡೆ ಹೀಗೇ ಮುಂದುವರಿದರೆ ಮುಂದೊಂದು ದಿನ ಡಾಲರ್ ಕೂಡ ಡಲ್ ಆಗುವುದರಲ್ಲಿ ಸಂದೇಹವೇ ಇಲ್ಲ!.

ನಾವಿಕರಾದ ಕ್ರಿಸ್ಟೋಫರ್ ಕೊಲಂಬಸ್(1451–1506) ಮತ್ತು ಅಮೇರೀಗೋ ವೆಸ್ಪೂಟ್ಟಿ(1454–1512), ಇವರಿಬ್ಬರೂ ಸಮಕಾಲೀನವರು ಹಾಗೂ ಅಮೆರಿಕಾ ಖಂಡಕ್ಕೆ ನಂಟು ಉಳ್ಳವರಾಗಿದ್ದಾರೆ. ಆದರೂ ಕೊಲಂಬಸ್‌ನ ಹೆಸರು ಅಮೆರಿಕಾಕ್ಕೆ ಅಂಟಿಕೊಳ್ಳಲಿಲ್ಲ. ಅಮೇರಿಗೋ ನಾಲ್ಕು ಬಾರಿ ಅಟ್ಲಾಂಟಿಕ್ ಸಾಗರದಲ್ಲಿ ಯಾನ ಮಾಡಿ 1499ರಲ್ಲಿ ದಕ್ಷಿಣಾ ಅಮೆರಿಕಾದ ಅಮೆಜಾನ್ ಮುಖಭೂಮಿಯನ್ನು ತಲುಪಿದ, ಇದಕ್ಕೂ ಮೊದಲೇ ಕೊಲಂಬಸ್ ಮೂರು ಯಾನಗಳನ್ನು ಮುಗಿಸಿದ್ದನು. ಆದರೆ ಭೂಪಟಗಳನ್ನು ತಯಾರಿಸುತ್ತಿದ್ದವರು ಅಮೇರಿಗೋ, ಅವರ ಹೆಸರು ಉಳಿಯುವಂತೆ ಮಾಡುವ ಉದ್ದೇಶದಿಂದ ಹೊಸ ಖಂಡಕ್ಕೆ ಅಮೆರಿಕ ಎಂಬ ಹೆಸರಿಟ್ಟನೆಂದು, ಅದೇ ಹೆಸರು ಉಳಿದು ಹೋಯಿತು. ಅಮೆರಿಕ ಎಂಬ ಹೆಸರಿನ ಬಳಕೆಯು 25 ಏಪ್ರಿಲ್ 1507ರಿಂದ ಪ್ರಾರಂಭವಾಯಿತು.

ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಾಗಳನ್ನು ಸಾಮಾನ್ಯವಾಗಿ ಪ್ರತ್ಯೇಕ ಖಂಡಗಳೆಂದು ಪರಿಗಣಿಸಲಾಗಿದೆ. ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ, ಬಹುವಚನದಲ್ಲಿ ಅಮೆರಿಕಗಳು ಎಂದು ಕರೆಯಬೇಕು, ಏಕೀಕೃತ ಖಂಡವಾಗಿ ಪರಿಗಣಿಸಿಕೊಂಡಾಗ ಅಮೆರಿಕಾ ಖಂಡವಾಗುತ್ತದೆ. ಇಂಗ್ಲೀಷಿನಲ್ಲಿ ಅಮೆರಿಕಾವನ್ನು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ(United States of America-USA) ಎಂದು ಕರೆಯುತ್ತಾರೆ.

15ನೇ ಶತಮಾನದಲ್ಲಿ ಅಟ್ಲಾಂಟಿಕ್ ಸಾಗರದ ಪಯಣದ ಮಾರ್ಗದಲ್ಲಿ ಗೊತ್ತು ಗುರಿಯನ್ನು ಯಾರೂ ಕಂಡಿರಲಿಲ್ಲ. ಮೊಟ್ಟಮೊದಲ ಬಾರಿಗೆ ಜಲಮಾರ್ಗದ ನಕಾಶೆಯ ಸಹಾಯ ಇಲ್ಲದೆ ಹೊಸ ಸಾಗರದಲ್ಲಿ ಪ್ರಯಾಣ ಮಾಡಿದ ನಾವಿಕ ಕೊಲಂಬಸ್‌ನ ಸಾಹಸ, ಧೈರ್ಯ ಮತ್ತು ಬುದ್ದಿವಂತಿಕೆಯನ್ನು ಶ್ಲಾಘಿಸಲೇಬೇಕು. ಅವನು ಈ ಪ್ರಯಾಣದಲ್ಲಿ ಮೊದಲು ಕಾಲಿಟ್ಟಿದ್ದು ಸ್ಯಾನ್ ಸಾಲ್ವಡಲ್ ಎಂಬು ಪುಟ್ಟ ದ್ವೀಪವನ್ನು ಅಲ್ಲಿನ ಆದಿವಾಸಿಗಳನ್ನು ಮತ್ತು ಅವರುಗಳು ಸೇದುತ್ತಿದ್ದ ಚುಟ್ಟಗಳನ್ನು ಕಂಡು ಆಶ್ಚರ್ಯಗೊಂಡನು.

ಕೊಲಂಬಸ್‌ನ ಅನ್ವೇಷಣೆಯ ಮಹತ್ವವು ಅವನ ಮರಣಾನಂತರ ಎಲ್ಲರ ಅರಿವಿಗೆ ಬರತೊಡಗಿತು. ಇವನ ನಂತರ ಐರೋಪ್ಯ ಜನರು ಯಾನಗಳನ್ನು ಮಾಡಿ ಉತ್ತರ ಅಮೆರಿಕದಲ್ಲಿ ಹೊಸಹೊಸ ವಸಾಹತುಗಳನ್ನು ಕಂಡುಹಿಡಿದರು. ಕೊಲಂಬಸ್ ಮೊದಲ ಬಾರಿಗೆ ಹೊಸದಾಗಿ ನೆಲಮುಟ್ಟಿದ ದಿನವಾದ 12, ಅಕ್ಟೋಬರ್ 1492ನ್ನು ರಾಷ್ಟ್ರೀಯ ಹಬ್ಬದ ದಿನವೆಂದು 'ಕೊಲಂಬಸ್ ದಿನ'ವನ್ನಾಗಿ ಇಂದಿಗೂ ಅಮೆರಿಕನ್ನರು ಆಚರಿಸುತ್ತಿದ್ದಾರೆ.

ಅಮೆರಿಕಾ ಸಂಯುಕ್ತ ಸಂಸ್ಥಾನವು 4, ಜುಲೈ 1776ರಂದು ಗ್ರೇಟ್ ಬ್ರಿಟನ್ನಿನಿಂದ ಸ್ವಾತಂತ್ರ್ಯ ಮತ್ತು ತಮ್ಮದೇ ಆಗಿರುವ ಸಹಕಾರಿ ಒಕ್ಕೂಟದ ರಚನೆಯನ್ನು ಮಾಡಿಕೊಳ್ಳುವ ಮೂಲಕ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು.

ಅಮೆರಿಕಾ 50 ರಾಜ್ಯಗಳನ್ನು ಒಳಗೊಂಡ ಒಂದು ದೇಶ, ಇದರ ರಾಜಧಾನಿ ವಾಷಿಂಗ್ಟನ್ ಡಿಸಿ, ಹಾಲಿ ಇದರ ಅಧ್ಯಕ್ಷರು ವಿಶ್ವದ ಎಲ್ಲಾ ಮಾಧ್ಯಮಗಳಲ್ಲಿ ಹಾಗೂ ಜನರ ಬಾಯಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಹೆಸರು ಡೊನಾಲ್ಡ್ ಟ್ರಂಪ್. ಇದೇ ವರ್ಷ ಮಾಂಟಿಸೆಲ್ಲೊದಲ್ಲಿ ಅಮೆರಿಕದ 250ನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುವ ಖುಷಿಯಲ್ಲಿದೆ.

ಅಮೆರಿಕಾ ದೇಶಕ್ಕೆ ಹೋಲಿಕೆ ಮಾಡಿದರೆ, ಅದು ಸ್ವಾತಂತ್ರ್ಯ ಪಡೆದ 170 ವರ್ಷಗಳ ನಂತರ ಬ್ರಿಟೀಷರಿಂದ ಭಾರತ ಸ್ವಾತಂತ್ರ್ಯಗಳಿಸಿತು, ಬಂದು ಕೇವಲ 80 ವರ್ಷಗಳಾಗಿವೆ. ನಮ್ಮ ದೇಶವು ಅದಕ್ಕಿಂತಲೂ ಸ್ವಾವಲಂಬಿಯಾಗಿ ಹಾಗೂ ಅನ್ಯ ದೇಶಗಳನ್ನು ನಿಯಂತ್ರಿಸುವುದಕ್ಕೆ ಹೋಗದೆ ಹೆಚ್ಚು ಪ್ರಗತಿ ಸಾಧಿಸಿದೆ ಎನ್ನುವುದಕ್ಕೆ ಭಾರತಿಯರಾದ ನಾವು ಹೆಮ್ಮೆ ಪಡುತ್ತೇವೆ.

ಹೆಸರಿಗೆ ದೊಡ್ಡವನಾಗಿ ಮೆರೆದರೆ ಏನು ಬಂತು?, ಗುಣದಲ್ಲಿ, ನಡೆಯಲ್ಲಿ ದೊಡ್ಡವನಾಗಿ ಇರಬೇಕು. ಒಂದು ದೇಶ ಅಭಿವೃದ್ಧಿ ಪಡುವುದರಲ್ಲಿ ತಕರಾರಿಲ್ಲ, ಒಬ್ಬ ವ್ಯಕ್ತಿ ಶ್ರೀಮಂತನಾಗಿ ಬದುಕುವುದರಲ್ಲಿ ಆ ದೇಶದ ಅಭಿವೃದ್ಧಿ ಇದೆ. ಆದರೆ ಮತ್ತೊಬ್ಬರಿಗೆ ಮೋಸ ಮಾಡದಂತೆ, ನಮ್ಮಿಂದ ತೊಂದರೆ ಆಗದ ರೀತಿ ಬೆಳೆಯಬೇಕು. ತಪ್ಪಿ ನಡೆದರೆ; ಕೋಟೆ ಕಟ್ಟಿ ಮೆರೆದವರೆಲ್ಲ ಏನಾದರು?, ಮೀಸೆ ತಿರುವಿ ಕುಣಿದವರೆಲ್ಲ ಮಣ್ಣಾದರು!. ಮಣ್ಣಿಗೆ ಮಣ್ಣಾಗುವ ಮೊದಲು ಮುಂದಿನ ಪೀಳಿಗೆಗೆ ಮಣ್ಣನ್ನು ಸಂರಕ್ಷಿಸಿ ಹೋಗುವುದು ಪ್ರತಿಯೊಂದು ಜೀವಿಯ ಜವಾಬ್ದಾರಿಯಲ್ಲವೇ?.

ಕೊನೆಯಲ್ಲಿ ಟ್ರಂಪಣ್ಣನಿಗೆ ಶ್ರೀಸಿದ್ದೇಶ್ವರ ಸ್ವಾಮಿಜಿಯವರ ಹಿತನುಡಿಯೊಂದನ್ನು ಹೇಳಿ ಲೇಖನವನ್ನು ಮುಗಿಸುತ್ತೇನೆ: ಯಾರ ನೋವಿಗೆ ಯಾರು ಹೊಣೆಗಾರರು?, ನಿನ್ನ ಕಣ್ಣೀರಿಗೆ ಯಾರು ಮರುಗುವರು?, ನಿನಗೆ ನೀನೇ ಮಿತ್ರ, ನಿನಗೆ ನೀನೇ ಶತ್ರು, ನಿನ್ನಿಂದಲೇ ಶಾಂತಿ, ನಿನ್ನಿಂದಲೇ ಕ್ರಾಂತಿ!.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ರಾಧಾಕೃಷ್ಣ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೆಲಸದ ನಿಮಿತ್ತ ಏ.25ರಂದು ಬೆಳಿಗ್ಗೆ 10 ಸಂಜೆ 5:30 ಘಂಟೆಯವರೆಗೆ ಗೋಪಾಲಗೌಡ ಆಸ್ಪತ್ರೆ, ಬ್ರಿಗೇಡ್ ಅಪಾರ್ಟ್ಮೆಂಟ್, ವಾಟಿಕ ಅಪಾರ್ಟ್ಮೆಂಟ್, ಹಳೆಯ ಹಾಲಿನ ಡೈರಿ, ಡಿಎಫ್‌ಆರ್‌ಎಲ್, ಸಾತಗಳ್ಳಿ, ಸಾತಗಳ್ಳಿ 'ಬಿ' ವಲಯ, ಶಕ್ತಿನಗರ, ವಿದ್ಯಾಶಂಕರ ಬಡಾವಣೆ, ಟೀಚರ್ಸ್ ಬಡಾವಣೆ, ಹೆಚ್.ಪಿ.ಓ & ಆರ್.ಎಂ.ಎಸ್ ಬಡಾವಣೆ, ಪಾಪಣ್ಣ ಬಡಾವಣೆ, ತ್ರಿವೇಣಿ ವೃತ್ತ, ಯರಗನಹಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಏ.26 ರಂದು ಬೆಳಿಗ್ಗೆ 10 ರಿಂದ ಸಂಜೆ 5:30 ಘಂಟೆಯವರೆಗೆ ಸಾತಗಳ್ಳಿ ಬಡಾವಣೆ, ಸಾತಗಳ್ಳಿ 'ಬಿ' ವಲಯ, ಶಕ್ತಿನಗರ, ವಿದ್ಯಾಶಂಕರ ಬಡಾವಣೆ, ಟೀಚರ್ಸ್ ಬಡಾವಣೆ, ಹೆಚ್‌ಪಿಓ & ಆರ್‌ಎಂಎಸ್ ಬಡಾವಣೆ, ಪಾಪಣ್ಣ ಬಡಾವಣೆ, ತ್ರಿವೇಣಿ ವೃತ್ತ, ಯರಗನಹಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಜೈಲ್‌ಗೆ ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ದಿಢೀರ್ ಭೇಟಿ



ಮೈಸೂರು, ಏ.24– ಮೈಸೂರು ಕೇಂದ್ರ ಕಾರಾಗೃಹಕ್ಕೆ ಶುಕ್ರವಾರ ಬಂಧೀಖಾನೆ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸುಮಾರು 2 ಗಂಟೆಗಳ ಕಾಲ ಪರಿಶೀಲನೆ ನಡೆಸಿದಾಗ 1 ಸೆಲ್‌ನಲ್ಲಿ ಮಾದಕ ವಸ್ತು ದೊರೆತಿದೆ ಎಂದು ಹೇಳಲಾಗಿದೆ. ಕಾರಾಗೃಹದಲ್ಲಿ ಎಷ್ಟೇ ಎಚ್ಚರ ವಹಿಸಿದರು ಆಗಾಗ್ಗೆ ಮೊಬೈಲ್ ಗಾಂಜಾ, ಸಿಮ್‌ಗಳು ಪತ್ತೆಯಾಗುತ್ತಿವೆ. ಕಾರಾಗೃಹದ ಭದ್ರತಾ ವ್ಯವಸ್ಥೆ, ಕೈದಿಗಳ ವಸತಿ ವ್ಯವಸ್ಥೆ, ಅಡುಗೆ ಮನೆ, ಆಸ್ಪತ್ರೆ ವಿಭಾಗ ಹಾಗೂ ಸಿಸಿಟಿವಿ ನಿಗಾ ವ್ಯವಸ್ಥೆಯನ್ನು ಅಲೋಕ್ ಕುಮಾರ್ ಪರಿಶೀಲಿಸಿದರು. ಕೈದಿಗಳಿಗೆ ನೀಡಲಾಗುತ್ತಿರುವ ಮೂಲ ಸೌಲಭ್ಯಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು. ಇದೇ ವೇಳೆ ಕಾರಾಗೃಹದ ಸ್ವಚ್ಛತೆ ಹಾಗೂ ಶಿಸ್ತು ಕಾಪಾಡುವಂತೆ ಸೂಚನೆ ನೀಡಿದರು ಎನ್ನಲಾಗಿದೆ.

ಮಹನೀಯರ ಜಯಂತಿ ಒಂದು ಸಮುದಾಯಕ್ಕೆ ಸೀಮಿತವಾಗಬಾರದು

ಡಾ.ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಭಗೀರಥ ಮಹರ್ಷಿಗಳಿಗೆ ಗಣ್ಯರಿಂದ ಪುಷ್ಪನಮನ

ಮೈಸೂರು, ಏ.24– ಮಹನೀಯರ ಜಯಂತಿಗಳು ಒಂದು ಸಮುದಾಯಕ್ಕೆ ಸೀಮಿತವಾಗದೆ ಸಮಾಜದಲ್ಲಿ ಒಂದೊಂದು ಜಯಂತಿಯನ್ನು ಒಂದೊಂದು ಸಮುದಾಯದವರು ಮಾತ್ರ ಆಚರಿಸುವ ಪದ್ಧತಿಯನ್ನು ಬದಲಾಯಿಸಬೇಕು. ಮಹನೀಯರು ಇಡೀ ದೇಶದ ಆಸ್ತಿ, ಹೀಗಾಗಿ ಎಲ್ಲರೂ ಒಗ್ಗೂಡಿ ಜಯಂತಿಗಳನ್ನು ಆಚರಿಸುವ ವಾತಾವರಣ ನಿರ್ಮಾಣವಾಗಬೇಕು ಎಂದು ಡಾ. ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಹೇಳಿದರು.

ಇಂದು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾ ನಗರ ಪಾಲಿಕೆ, ಮೈಸೂರು ಶ್ರೀ ಭಗೀರಥ ಜಯಂತೋತ್ಸವ ಸಮಿತಿ ವತಿಯಿಂದ ಕರ್ನಾಟಕ ಕಲಾಮಂದಿರದಲ್ಲಿ ಶ್ರೀ ಭಗೀರಥ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಸೂರ್ಯವಂಶದ ಕ್ಷತ್ರಿಯ ಪರಂಪರೆಯ ಸಗರ ಚಕ್ರವರ್ತಿ, ದಿಲೀಪ ಮತ್ತು ಭಗೀರಥ ಮಹರ್ಷಿಗಳಂತಹ ಮಹಾನ್ ವ್ಯಕ್ತಿಗಳ ಸಾಧನೆಯನ್ನು ಸ್ಮರಿಸುರುವುದು. ಇವರು ದೈವಾಂಶ ಸಂಭೂತರಾಗಿದ್ದು, ನಾಡಿನ ಏಳಿಗೆಗಾಗಿ ಅಪಾರ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ಸಮಾಜದಲ್ಲಿ ಇತಿಹಾಸ ಮತ್ತು ಜ್ಞಾನದ ಬಗ್ಗೆ ಅರಿವು ಕಡಿಮೆಯಾಗುತ್ತಿದೆ. ನಾವು ನಮ್ಮ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಹಿಂದುಳಿದಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮಾಜದಲ್ಲಿ ಅನೇಕ ಮತ–ಧರ್ಮಗಳಿದ್ದರೂ, ಭಾರತದಂತಹ ವಿಶಾಲ ದೇಶದಲ್ಲಿ ಭಿನ್ನತೆಯ ನಡುವೆ ಏಕತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಮುನ್ನಡೆಯಬೇಕು ಎಂದು ತಿಳಿಸಿದರು.

ಭಗೀರಥ ಮಹರ್ಷಿ, ಕನಕದಾಸರು, ವಾಲ್ಮೀಕಿ, ಬಸವಣ್ಣ ಮತ್ತು ಮಾದಾರ ಚೆನ್ನಯ್ಯನವರಂತಹ ಮಹಾನ್ ವ್ಯಕ್ತಿಗಳು ನಾಡಿಗೆ ನೀಡಿರುವ ಕೊಡುಗೆ ಅಪಾರ. ಇವರ ಜಯಂತಿಗಳನ್ನು ಆಚರಿಸುವ ಉದ್ದೇಶ ಕೇವಲ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ, ಅವರು ತೋರಿಸಿಕೊಟ್ಟ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಾಗಬೇಕು ಎಂದು ತಿಳಿಸಿದರು.

ಭಗೀರಥ ಮಹರ್ಷಿಗಳಂತಹ ಮಹನೀಯರ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಅಗತ್ಯವಿದೆ. ಶಿಕ್ಷಣವೇ ಮೂಲಮಂತ್ರವಾಗಬೇಕು ಮತ್ತು ಧಾರ್ಮಿಕ ಸಂಸ್ಕಾರದೊಂದಿಗೆ ಮಕ್ಕಳನ್ನು ಸನ್ಮಾರ್ಗದಲ್ಲಿ ಬೆಳೆಸಬೇಕೆಂದು ಸಲಹೆ ನೀಡಿದರು.

ಸಮಾಜದಲ್ಲಿನ ತಾರತಮ್ಯಗಳನ್ನು ತೊಡೆದು ಹಾಕಿ, ಅಣ್ಣ–ತಮ್ಮಂದಿರಂತೆ ಬಾಳಬೇಕು. 'ನಾನು ಮೇಲು–ನೀನು ಕೀಳು' ಎಂಬ ಭಾವನೆಯನ್ನು ದೂರವಿಟ್ಟು, ಭಾರತ ಮಾತೆಯ ಮಕ್ಕಳಾಗಿ ಒಗ್ಗಟ್ಟಿನಿಂದ ಮುನ್ನಡೆಯುವ ಅಗತ್ಯವಿದೆ ಎಂದರು.

ಶಾರದ ವಿಲಾಸ ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ.ಎಂ.ಗೋವಿಂದರಾಜು ಮಾತನಾಡಿ, ಹಿಂದೂ ಧರ್ಮದ ಪುರಾಣಗಳ ಪ್ರಕಾರ ನಾಲ್ಕು ಯುಗಗಳ (ಕೃತ, ತ್ರೇತಾ, ದ್ವಾಪರ, ಕಲಿಯುಗ) ಚಕ್ರವನ್ನು ವಿವರಿಸುತ್ತಾ, ಭಗೀರಥನ ಕಥೆಯು ದ್ವಾಪರ ಯುಗಕ್ಕೆ ಸಂಬಂಧಿಸಿದ್ದು ಎಂದು ತಿಳಿಸಿದರು.

ಭಗೀರಥನು ತನ್ನ ಪೂರ್ವಜರಾದ ಸಗರ ಚಕ್ರವರ್ತಿಯ ಮಕ್ಕಳು ಕಪಿಲ ಮುನಿಯ ಶಾಪದಿಂದ ಭಸ್ಮವಾಗಿರುವ ದುಃಖವನ್ನು ಹೋಗಲಾಡಿಸಲು, ಗಂಗಾಮಾತೆಯನ್ನು ಭೂಮಿಗೆ ಕರೆತರುವ ಸಂಕಲ್ಪ ತೊಟ್ಟ ಕಥೆ ಇದು ಎಂದು ತಿಳಿಸಿದರು.

ಗಂಗೆಯನ್ನು ಭೂಮಿಗೆ ಕರೆತರಲು ಭಗೀರಥನು ಬ್ರಹ್ಮದೇವನನ್ನು ಕುರಿತು, ನಂತರ ಶಿವನನ್ನು ಕುರಿತು ನಡೆಸಿದ ಅಸಾಧಾರಣ ತಪಸ್ಸಿನ ಸನ್ನಿವೇಶಗಳನ್ನು ಅವರು ಮನೋಜ್ಞವಾಗಿ ವರ್ಣಿಸಿದರು. ದೈವಿಕ ಶಕ್ತಿಯ ಕೃಪೆ ಪಡೆಯಲು ಭಗೀರಥನ ಭಕ್ತಿ ಎಷ್ಟು ಪ್ರಬಲವಾಗಿತ್ತು ಎಂದು ಹೇಳಿದರು.

ಶಿವನ ಶಿರದಲ್ಲಿ ಗಂಗೆಯು ವೇಗವಾಗಿ ಭೂಮಿಗೆ ಇಳಿದು ಬಂದರೆ ಭೂಲೋಕವು ಪ್ರವಾಹಕ್ಕೆ ಸಿಲುಕಿ ನಾಶವಾಗಬಹುದೆಂಬ ಆತಂಕದಿಂದ, ಶಿವನು ತನ್ನ ಜಟೆಯಲ್ಲಿ ಗಂಗೆಯನ್ನು ಹಿಡಿದಿಟ್ಟುಕೊಂಡ ಪ್ರಸಂಗವನ್ನು, ಈ ಹಂತವು ಶಿವನ ಕರುಣೆ ಮತ್ತು ಭಗೀರಥನ ಭಕ್ತಿಯ ಸಮ್ಮಿಲನವನ್ನು ಸಾರುತ್ತದೆ ಎಂದರು.

ಭಗೀರಥನ ಕಥೆಯನ್ನು ಕೇವಲ ಪುರಾಣವಾಗಿ ನೋಡದೆ, ಒಂದು ಗುರಿಯನ್ನು ಸಾಧಿಸಲು ಮನುಷ್ಯನಿಗೆ ಇರಬೇಕಾದ ಛಲ, ಸಂಕಲ್ಪ ಮತ್ತು ಶ್ರದ್ಧೆಯ ಸಂಕೇತವಾಗಿ ಎಂದು ತಿಳಿಸಿದರು. ಯಾವುದೇ ಅಡೆತಡೆಗಳು ಎದುರಾದರೂ, ಧೃತಿಗೆಡದೆ ತನ್ನ ಗುರಿಯನ್ನು ತಲುಪುವವನೇ ನಿಜವಾದ ಸಾಧಕ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಳವಳ್ಳಿ ಅಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಹಾಗೂ ಶ್ರೀ ಭಗೀರಥ ಸಮಾಜದ ಮುಖಂಡರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚೆಲುವಾಂಬ ಆಸ್ಪತ್ರೆ ವೈದ್ಯರು–ಸಿಬ್ಬಂದಿಯ ನಿರ್ಲಕ್ಷ್ಯ: ಇರುವೆ ಮುತ್ತಿ ಹಸುಳೆ ಸಾವು



• ಪೋಷಕರ ಆರೋಪ • ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಏ.24(ಎಂಟಿವೈ)– ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಯ ನಿರ್ಲಕ್ಷ್ಯದಿಂದ ಹಸುಳೆ ಬಲಿಯಾಗಿದೆ. ಐಸಿಯುನಲ್ಲಿದ್ದ ನವಜಾತ ಶಿಶುವಿಗೆ ಭಾರೀ ಪ್ರಮಾಣದಲ್ಲಿ ಇರುವೆ ಕಚ್ಚಿ ಮೃತಪಟ್ಟಿದೆ ಎಂದು ಮಗುವಿನ ಪೋಷಕರು ದೂರಿದ್ದಾರೆ.

ಮೈಸೂರಿನ ಕುವೆಂಪುನಗರದ ನಿವಾಸಿ ನೀಲಾ ದೂರು ನೀಡಿದ್ದು, ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನೀಲಾ ಅವರು ಹೆರಿಗೆ ನೋವಿನಿಂದ ಏ. 15ರಂದು ಚೆಲುವಾಂಬ ಆಸ್ಪತ್ರೆಗೆ ದಾಖಲಾಗಿದ್ದು, ಅವಧಿ ಪೂರ್ವ ಗಂಡು ಮಗು ಜನನವಾಗಿದೆ. ಸುರಕ್ಷತೆಯ ದೃಷ್ಟಿಯಿಂದ ಮಗುವನ್ನು ಆಸ್ಪತ್ರೆಯ ಐಸಿಯುನಲ್ಲಿ ಇರಿಸಿದ್ದಾರೆ. ದಿನಕ್ಕೊಮ್ಮೆ ಮಗುವನ್ನು ನೋಡಲು ತಾಯಿಗೆ ಅವಕಾಶ ಕಲ್ಪಿಸಿದ್ದಾರೆ. ಆದರೆ, ಗುರುವಾರ ಬೆಳಗ್ಗೆ ಮಗು ಮೃತಪಟ್ಟಿದೆ ಎಂದು ವೈದ್ಯರು ಪೋಷಕರಿಗೆ ತಿಳಿಸಿದ್ದಾರೆ.

ಮಗು ಹುಟ್ಟಿದಾಗ 1 ಕೆಜಿ 40 ಗ್ರಾಂ ಇತ್ತು. ಮಗುವನ್ನು ನೋಡಲು ಬಿಡುತ್ತಿರಲಿಲ್ಲ. ಒಮ್ಮೆ ಮಗುವನ್ನು ನೋಡಲು ಹೋದಾಗ ಮಗುವಿನ ಮುಖಕ್ಕೆ ಇರುವೆಗಳು ಮುತ್ತಿದ್ದು ಕಂಡು ಬಂತು. ಇದರ ಬಗ್ಗೆ ಆತಂಕಿಸಿದಾಗ ಗ್ಲೂಕೋಸ್‌ನಿಂದ ಇರುವೆ ಬರುತ್ತವೆ. ನಿಮ್ಮ ಒಂದೇ ಮಗುವಿನ ಬಗ್ಗೆ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ ಎಂದು ನಿರ್ಲಕ್ಷ್ಯದ ಉತ್ತರ ನೀಡಿದ್ದರು. ನಿನ್ನೆಯವರೆಗೆ ಮಗು ಚೆನ್ನಾಗಿದೆ ಎಂದು ಹೇಳುತ್ತಿದ್ದವರು, ಗುರುವಾರ ಬೆಳಗ್ಗೆ ಮಗು ಮೃತಪಟ್ಟಿದೆ ಎಂದು ಹೇಳುತ್ತಿದ್ದಾರೆ. ಮಗು ಸಾವಿಗೆ ವೈದ್ಯರು ಮತ್ತು ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ. ಮಗು ಸಾವಿನ ಬಗ್ಗೆ ಅನುಮಾನವಿದ್ದು, ಸೂಕ್ತ ತನಿಖೆಯಾಗಬೇಕು ಎಂದು ದೂರಿನಲ್ಲಿ ನೀಲಾ ಕೋರಿದ್ದಾರೆ. ದೂರು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ಸಾವಿಗೆ ನಿಖರ ಕಾರಣ ತಿಳಿಯಲು ಮಗುವಿನ ಕಳೇಬರವನ್ನು ಮರಣೋತ್ತರ ಪರೀಕ್ಷೆ ಮಾಡಿಸಿದ್ದಾರೆ.



ನಿರ್ಲಕ್ಷ್ಯವೇ ಮಗುವಿನ ಸಾವಿಗೆ ಕಾರಣ

ನಾನು ಈಗ ಕರುಳ ಕುಡಿಯನ್ನು ಕಳೆದುಕೊಂಡಿದ್ದೇನೆ. ಹೆರಿಗೆ ನಂತರ ಮಗುವನ್ನು ಐಸಿಯುನಲ್ಲಿ ಇಟ್ಟು ಕೊಂಡು ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ಕನಿಷ್ಠ ಮಗುವಿನ ಮುಖ ನೋಡಲು ಬಿಡುತ್ತಿರಲಿಲ್ಲ. ಆಸ್ಪತ್ರೆಯಲ್ಲಿ ಹಣ ನೀಡದೇ ಏನೂ ಚಿಕಿತ್ಸೆ ನೀಡಲ್ಲ. ಎಲ್ಲದಕ್ಕೂ ಹಣ ಕೇಳುತ್ತಾರೆ. ಇದೀಗ ಮಗುವನ್ನು ಕಳೆದು ಕೊಂಡಿದ್ದೇನೆ. ಮಗುವಿನ ಮುಖದ ಮೇಲೆ ಇರುವೆ ಓಡಾಡುತ್ತಿದ್ದರೂ ಸಿಬ್ಬಂದಿಗೆ ಅರಿವೇ ಇರಲಿಲ್ಲ. ಇರುವೆ ನೋಡಿ ಅವರಿಗೆ ನಾನೇ ತಿಳಿಸಿದ್ದೇನೆ. ಕಣ್ಣಿನ ಒಳಗೆಲ್ಲಾ ಇರುವೆ ಸೇರಿಕೊಂಡಿವೆ. ನನಗೆ ಆದ ಅನ್ಯಾಯ ಇನ್ಯಾರಿಗೂ ಆಗಬಾರದು. ಆಸ್ಪತ್ರೆ ಪರಿಸ್ಥಿತಿ ಸುಧಾರಿಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳ ಬೇಕು.

– ನೀಲಾ, ಹಸುಳೆಯ ತಾಯಿ

> ಅವಧಿ ಪೂರ್ವ ಮಗು ಜನಿಸಿದ್ದು, ಐಸಿಯುನಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಅಲ್ಲಿ ವೈದ್ಯರು ಮತ್ತು ಸಿಬ್ಬಂದಿ ನಿರ್ಲಕ್ಷ್ಯ ವಹಿಸಿಲ್ಲ. ಮರಣೋತ್ತರ ಪರೀಕ್ಷೆಯ ಬಳಿಕ ಮಗುವಿನ ಸಾವಿಗೆ ನಿಖರ ಕಾರಣ ತಿಳಿಯಲಿದೆ.
> – ಡಾ.ದಾಕ್ಷಾಯಿಣಿ, ನಿರ್ದೇಶಕರು, ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ.

ಆಸ್ಪತ್ರೆಗೆ ಸಂಸದ ಯದುವೀರ್ ದಿಢೀರ್ ಭೇಟಿ; ಮಾಹಿತಿ ಸಂಗ್ರಹ

ನಿರ್ಲಕ್ಷ್ಯ ತೋರಿದರೆ ಕಾನೂನು ಕ್ರಮದ ಎಚ್ಚರಿಕೆ



ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಶುಕ್ರವಾರ ದಿಢೀರ್ ಭೇಟಿ ನೀಡಿದ ಸಂಸದ ಯದುವೀರ್, ಪರಿಶೀಲನೆ ನಡೆಸಿದರು.

ಮೈಸೂರು, ಏ.24(ಎಂಕೆ)– ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪರಿಶೀಲನೆ ನಡೆಸಿ ತಾಯಿ–ಮಕ್ಕಳ ಆರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸೂಚನೆ ನೀಡಿದರು.

ಚೆಲುವಾಂಬ ಆಸ್ಪತ್ರೆಯಲ್ಲಿ ಹಸುಗೂಸೊಂದು ಇರುವೆ ಕಚ್ಚಿ ಮೃತಪಟ್ಟಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದನ್ನು ಗಮನಿಸಿ, ಶುಕ್ರವಾರ ಮಧ್ಯಾಹ್ನ ದಿಢೀರ್ ಭೇಟಿ ನೀಡಿ ಎನ್‌ಐಸಿಯು ಘಟಕ ಮತ್ತು ಬಾಣಂತಿಯರ ವಾರ್ಡ್‌ಗಳ ಪರಿಶೀಲಿಸಿದ ಸಂಸದರು, ರೋಗಿಗಳ ಕುಂದು–ಕೊರತೆ ಆಲಿಸಿದರು.

ಮೈಸೂರಿನ ಪ್ರತಿಷ್ಠಿತ ಚೆಲುವಾಂಬ ಆಸ್ಪತ್ರೆಯಲ್ಲಿ ಇಂತಹ ಪ್ರಕರಣ ವರದಿಯಾಗುತ್ತಿರುವುದು ವಿಷಾದನೀಯ. ಆಸ್ಪತ್ರೆಯ ವೈದ್ಯಾಧಿಕಾರಿಗಳು ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಯಾವುದೇ ರೀತಿಯ ನಿರ್ಲಕ್ಷ್ಯ ತೋರಬಾರದು. ಇದೇ ರೀತಿಯ ಧೋರಣೆ ಮುಂದುವರಿದರೆ ಕಾನೂನು ಕ್ರಮ ಎದುರಿಸಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ವೈದ್ಯಕೀಯ ಸಲಕರಣೆಗಳನ್ನು ಸೂಕ್ತ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ನಿರ್ವಹಣೆಗಾಗಿ ಮೀಸಲಿರುವ ನಿಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ತಮ್ಮ ಪೂರ್ವಿಕರು ಸ್ಥಾಪಿಸಿರುವ ಈ ಆಸ್ಪತ್ರೆಯಲ್ಲಿ ಆರೋಗ್ಯ ಸೇವೆಗೆ ಆದ್ಯತೆ ನೀಡಲು ಎಲ್ಲರೂ ಬದ್ಧರಾಗಿರಬೇಕು. ರೋಗಿಗಳು ಹಾಗೂ ಪೋಷಕರು ಬಯಸಿದಂತೆ ಪ್ರತಿ ಎರಡು ಅಥವಾ ಮೂರು ತಿಂಗಳಿಗೊಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ ಎಂದರಲ್ಲದೆ ಆಸ್ಪತ್ರೆಯಲ್ಲಿ ಕುಡಿಯಲು ಬಿಸಿ ನೀರಿನ ಕೊರತೆ ಇದೆ ಎಂದು ರೋಗಿಗಳು ತಿಳಿಸಿದ ಕೆಲವೇ ನಿಮಿಷದಲ್ಲಿ ಬಿಸಿ ನೀರಿನ ಡಿಸ್ಪೆನ್ಸರ್ ತರಿಸಿದ ಸಂಸದ, ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಸೂಕ್ತ ಕ್ರಮ: ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ದಾಕ್ಷಾಯಿಣಿ, ಅವಧಿಗೂ ಮುನ್ನವೇ ಏ.15 ರಂದು ಜನಿಸಿದ ಮಗು ಇರುವೆ ಕಚ್ಚಿ ಮೃತಪಟ್ಟಿದೆ ಎನ್ನುತ್ತಿರುವುದು ವಿಷಾಧನೀಯ. ಮಗುವಿನ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದು, ವರದಿ ಬಂದ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚೆಲುವಾಂಬ ಆಸ್ಪತ್ರೆಗೆ ಸುತ್ತಲಿನ ಐದು ಜಿಲ್ಲೆಗಳಿಂದ ಗರ್ಭಿಣಿ ಸ್ತ್ರೀಯರು ಆಗಮಿಸಲಿದ್ದು, ಸರಿಯಾಗಿ ಬೆಳವಣಿಗೆಯಾಗದ ಮಕ್ಕಳನ್ನು ಉಳಿಸಲು ವೈದ್ಯರು ಪ್ರಯತ್ನ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಮಾಜಿ ಶಾಸಕ ಎಲ್.ನಾಗೇಂದ್ರ, ಹೇಮಾ ನಂದೀಶ್ ಮತ್ತಿತರರಿದ್ದರು.

HOUSE FOR SALE
30×50, North Facing, 2BHK + 1RK Near De Paul International Residential School, VB City, Belagola
Mob: 9535555577

Achievers PU College
CA 1, BEML Layout, Srirampura, 2nd Stage, Mysuru.
ADMISSION OPEN -1st & 2nd PUC Courses : PCMB, PCMC, EBAC- Integrated Coaching for: JEE//NEET/KCET. FACULTIES REQUIRED: Kannada: full time- MA, B.Ed. Computer-Science: Full time- M.Sc., B.Ed. Commerce - Part Time- M.Com, B.Ed
9900373206 / 9134866398
CV-Submission Last Date: 30-4-2026

LUXURY HOUSE FOR SALE
50×85, North facing
60ft road attached 4 floors with inside lift , luxury pooja room, spacious living room, bar lounge and much more.
Price: Rs. 5.10cr
Location: Ramkrishna nagara, Mysore
Call - LISHA PROPERTIES
8151035074
9035012579
6361535074

ಹುಟ್ಟುಹಬ್ಬದ ಶುಭಾಶಯ....



ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ನೇತೃತ್ವದಲ್ಲಿ, ಟಿಎಪಿಸಿಎಂಎಸ್ ನಿರ್ದೇಶಕ ಎಚ್.ಪ್ರಕಾಶ್ ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ತೇಜಸ್, ಲೋಕೇಶ್ ಗೌಡ್ರು, ಪುರುಷೋತ್ತಮ್, ನಿಂಗಪ್ಪ, ನಾಗರಾಜು, ಶಿವ, ದರ್ಶನ್, ಅಶೋಕ, ಮೈಸೂರು ಜಿಲ್ಲಾ ಕಸಾಪ ಕಟ್ಟಡ ನಿರ್ವಹಣಾ ಸಮಿತಿ ನಿರ್ದೇಶಕ ಕಾಮನಕೆರೆಹುಂಡಿ ಹೆಚ್. ಗಿರೀಶ್‌ಗೌಡ ಹಾಗೂ ಮತ್ತಿತರಿದ್ದರು

ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿದ ಮೂವರ ಬಂಧನ

ಬೆಂಗಳೂರು: ಖಾಸಗಿ ಕಾಲೇಜಿನಲ್ಲಿ ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ಸಂಬಂಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣ ದಾಖಲು ಮಾಡಿಕೊಂಡ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಪರಿವೀಕ್ಷಕರಾದ ಸರಿತಾ, ಗಿರಿಜಮ್ಮ, ಪರೀಕ್ಷಾ ಕೇಂದ್ರದ ಉಸ್ತುವಾರಿ ಸುಧಾಕರ್ ಬಂಧಿತ ಆರೋಪಿಗಳು. ವಿದ್ಯಾರ್ಥಿ ನೀಡಿದ ದೂರಿನ ಅನ್ವಯ ಬಿಎನ್‌ಎಸ್ 299, 302 ರೆಡ್ ವಿತ್ 3 and 5 ಅಡಿಯಲ್ಲಿ ಕೇಸ್ ದಾಖಲು ಮಾಡಲಾಗಿದೆ. ನಿನ್ನೆ ಸಿಇಟಿ ಪರೀಕ್ಷೆ ವೇಳೆ ಮಡಿವಾಳದ ಕೃಪನಿಧಿ ಕಾಲೇಜಿನಲ್ಲಿ ಮೂವರು ವಿದ್ಯಾರ್ಥಿಗಳಿಗೆ ಜನಿವಾರ ಧರಿಸಲು ಅವಕಾಶ ಇಲ್ಲ.. ತೆಗೆದು ಪರೀಕ್ಷೆ ಬರೆಯಬೇಕು.. ಇಲ್ಲವೇ ಮನೆಗೆ ಹೋಗಿ ಅಂತಾ ಬೆದರಿಸಿದರು. ಈ ವೇಳೆ ವಿದ್ಯಾರ್ಥಿಗಳು ಜನಿವಾರ ತೆಗೆದು ಪರೀಕ್ಷೆಗೆ ಹಾಜರಾಗಿದ್ದರು.

ಐದನೇ ವರ್ಷದ ಪುಣ್ಯಸ್ಮರಣೆ



ಶ್ರೀಮಾನ್ ಕುಳ್ಳೇಗೌಡರು
[ಯಜಮಾನ್ ಚಿಕ್ಕದೇಗೌಡರ ಮಗ]
ಯರಗನಹಳ್ಳಿ, ಮೈಸೂರು ಸಿಟಿ
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮನ್ನು ಸದಾ ಸ್ಮರಿಸುತ್ತಿರುವ:
ಮೃತರ ಪತ್ನಿ: ಗೌರಮ್ಮ ಮಗ ಶ್ರೀನಿವಾಸ .ಕೆ, ಸೊಸೆ ಸಂಯುಕ್ತ ಎಂ.ಎಸ್., ಮೊಮ್ಮಕ್ಕಳು: ಹಂಸಿತ ಎಸ್, ವರುಣ್ ಎಸ್, ಹೆಣ್ಣುಮಕ್ಕಳು, ಅಳಿಯಂದಿರು, ಬಂಧುಮಿತ್ರರು

ತಿದ್ದುಪಡಿ

ದಿ: 24-04-206 ರಂದು ಪುಟ 9 ರಲ್ಲಿ ಪ್ರಕಟವಾದ "ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ .ನಿ., ನಂ 1, ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು-570015. ಇದರ ಟೆಂಡರ್ ಜಾಹಿರಾತು" 5ನೇ ಕಾಲಂನಲ್ಲಿ 'ಅಂದಾಜು ಮೊತ್ತ – ಲಕ್ಷ ರೂಗಳಲ್ಲಿ – 987096.43 ಎಂದು ಪ್ರಕಟವಾಗಿದ್ದು, ಅದನ್ನು, 'ಅಂದಾಜು ಮೊತ್ತ – ಲಕ್ಷ ರೂಗಳಲ್ಲಿ + GST– 987096.43 ಎಂದು ಓದಿಕೊಳ್ಳುವುದು.

ಮೈಸೂರು ಮಿತ್ರ 47 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

5ನೇ ವರ್ಷದ ಪುಣ್ಯಸ್ಮರಣೆ




ಶ್ರೀ ವೆಂಕಟೇಶ್.ಆರ್
MA, M.Phil, PhD
ಕನ್ನಡ ಉಪನ್ಯಾಸಕರು
ಜಿದರಗೂಡು (ಕೇರ್ಗಳ್ಳಿ)
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು ಪತ್ನಿ: ಶ್ರೀಮತಿ ಜಯಲಕ್ಷ್ಮಿ & ಮಕ್ಕಳು ಶ್ರೀಮತಿ ನಾಗಮ್ಮ ಮತ್ತು ನಾಗಣ್ಣನವರ ಕುಟುಂಬ, ಕೇರ್ಗಳ್ಳಿ, ಡ್ರಾಮಾ.ರಂಗರಾಮಯ್ಯನವರ ಕುಟುಂಬ,

ಚಿರಸ್ಮರಣೆ



ಮಹಾಲಕ್ಷ್ಮಮ್ಮ
(ನಿವೃತ್ತ ಮುಖ್ಯ ಶಿಕ್ಷಕಿ) ಎಸ್. ಕುನ್ನೇಗೌಡರ ಧರ್ಮಪತ್ನಿ
ನಿಧನ: 25-04-2025
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರೂ ನಮ್ಮ ಮನದಲ್ಲಿ ಸದಾ ಚಿರಸ್ಥಾಯಿಯಾಗಿ ನೆಲೆಸಿದ್ದೀರಿ. ನಿಮ್ಮ ಸ್ಮರಣೆಯಲ್ಲಿ ಸಾಗುತ್ತಿದೆ ನಮ್ಮ ಬದುಕು ನೀವು ಕಂಡ ಕನಸು ನನಸಾಗಿಸುವುದೇ ನಮ್ಮ ಗುರಿ
ದುಃಖತಪ್ತರು: ಪತಿ, ಮಕ್ಕಳು, ಸೊಸೆ, ಅಳಿಯಂದಿರು ಸಹೋದರಿಯರು ಮತ್ತು ಕುಟುಂಬವರ್ಗ, ಸಿದ್ದಾರ್ಥನಗರ, ಮೈಸೂರು.

ಕೊಡಗು ಮಾಡೆಲ್ ಸ್ಕೂಲ್
ಪ್ರೋತ್ಸಾಹಿತ: ಶ್ರೀ ಕಾವೇರಿ ಕೊಡವ ಅಸೋಸಿಯೇಶನ್ (ಆರ್) ಮೈಸೂರು ಈಸ್ಟ್
ಸಿ.ಎ. ನಂ. 4, ಕಾವೇರಿ ಮುಖ್ಯ ರಸ್ತೆ, ವಿದ್ಯಾಶಂಕರ ನಗರ, ಸಾತಗಳ್ಳಿ, ಮೈಸೂರು–29



Aishwarya S. Gowda 98.7% | Radhashree Raj M.96% | Yashaswini K 95.8% | Keerthana K 95.5% | Shivakumar G 95.5%
M.P. Deepa shree 95% | Likitha R 94.7% | Harsha Y.S. 93.9% | Yashwanth Kumar S 90.5% | Anjali M S 89.6%
Prerana M. 88.1% | Deekshitha .D 87% | Manya S 86.8% | Bhoomika .P 86.4% | Likhitha M 85.4%

"ಕೊಡಗು ಮಾಡೆಲ್ ಶಾಲೆಯು ಮತ್ತೊಮ್ಮೆ ಶೇ. 100 ರಷ್ಟು ಫಲಿತಾಂಶವನ್ನು ಸಾಧಿಸಿದೆ. ಐಶ್ವರ್ಯ ಎಸ್. ಗೌಡ ಅವರು 617/625 (98.7%) ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.
ಇದು ಶಾಲೆಗೆ ನಿಜಕ್ಕೂ ಹೆಮ್ಮೆಯ ಕ್ಷಣವಾಗಿದೆ. ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಗಾಗಿ ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಅವರನ್ನು ಅಭಿನಂದಿಸಿದ್ದಾರೆ.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಕಾವೇರಿ ಲೋಕಪಾವನ್ಯಾಃ ಸಂಗಮ ಕ್ಷೇತ್ರ ಸುಸ್ಥಿತೇ ।
ಶ್ರೀ ಚಕ್ರರಾಜ ಸಹಿತೆ ಶ್ರೀ ನಿಮಿಷಾಂಬಾ ನಮೋಸ್ತುತೇ ॥
ಶ್ರೀ ನಿಮಿಷಾಂಬ ದೇವಸ್ಥಾನ
ಗಂಜಾಂ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
ಶ್ರೀ ನಿಮಿಷಾಂಬ ಅಮ್ಮನವರ ವರ್ಧಂತಿ–2025
ಧಾರ್ಮಿಕ ಕಾರ್ಯಕ್ರಮಗಳು
ಸ್ವಸ್ತಿಶ್ರೀ ವಿಶ್ವವಸು ನಾಮ ಸಂವತ್ಸರದ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ನವಮಿಯಿಂದ ದಶಮಿಯವರೆಗೆ ಶ್ರೀ ನಿಮಿಷಾಂಬ ಅಮ್ಮನವರ ವರ್ಧಂತಿ ಮಹೋತ್ಸವದ ಅಂಗವಾಗಿ ಧಾರ್ಮಿಕ ಕಾರ್ಯಕ್ರಮಗಳು
ದಿನಾಂಕ: 25.04.2026 ನೇ ಶನಿವಾರ ರಾತ್ರಿ 8.00 ಗಂಟೆಗೆ
ಗಣಪತಿ ಪೂಜೆ, ಪುಣ್ಯಾಹ ಮಹಾಸಂಕಲ್ಪ ಕಲಶಸ್ಥಾಪನೆ, ಸಪ್ತಶತೀ ಪಾರಾಯಣ. ಕಲಶ ಪೂಜೆ, ಮಹಾಮಂಗಳಾರತಿ
ದಿನಾಂಕ: 26.04.2026ನೇ ಆದಿತ್ಯವಾರ
ಬೆಳಗ್ಗೆ 8–00 ಕ್ಕೆ ಶ್ರೀ ನಿಮಿಷಾಂಬ ಹೋಮ, 10–30 ಕ್ಕೆ ಪೂರ್ಣಾಹುತಿ
10–45ಕ್ಕೆ ಕಲಶ ಪೂಜೆ ಮತ್ತು 121 ಕಲಶಗಳ ಮಹಾಭಿಷೇಕ ನಂತರ ಅಷ್ಟದಿಗ್ಬಲಿ,
ಮಧ್ಯಾಹ್ನ 1–00 ಕ್ಕೆ ಮಹಾಮಂಗಳಾರತಿ ಪ್ರಸಾದ ವಿತರಣೆ
ಸಂಜೆ 6–30 ಕ್ಕೆ ದಕ್ಷಿಣ ಗಂಗೆ ಕಾವೇರಿ ಮಾತೆಗೆ ಪೂಜೆ ಮಹಾಆರತಿ
ಸಂಜೆ 7–00 ಘಂಟೆಗೆ ಉತ್ಸವ, ಮಹಾಪೂಜೆ, ಮಹಾಮಂಗಳಾರತಿ ಪ್ರಸಾದ ವಿತರಣೆ
ಸರ್ವರಿಗೂ ಆದರದ ಸುಸ್ವಾಗತ
ಶ್ರೀ ಭರತ್ ಭಾ.ಆ.ಸೇ. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು
ಡಾ.ಕುಮಾರ, ಭಾ.ಆ.ಸೇ. ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ, ಮಂಡ್ಯ
ಬಿ.ಸಿ.ಶಿವಾನಂದ ಮೂರ್ತಿ ಕ.ಆ.ಸೇ ಅಪರ ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ, ಮಂಡ್ಯ
ಶ್ರೀ ಕೆ.ಆರ್.ಶ್ರೀನಿವಾಸ್ ಕ.ಆ.ಸೇ ಉಪವಿಭಾಗಾಧಿಕಾರಿಗಳು ಪಾಂಡವಪುರ ಉಪವಿಭಾಗ
ಶ್ರೀ ಚೇತನಾ ಯಾದವ್.ಎಸ್ ಕ.ಆ.ಸೇ ತಹಶೀಲ್ದಾರ್, ಶ್ರೀರಂಗಪಟ್ಟಣ ತಾಲ್ಲೂಕು
ಶ್ರೀ ಹೆಚ್.ಎಸ್.ಮಹೇಶ್ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ನಿಮಿಷಾಂಬಾ ದೇವಸ್ಥಾನ ಗಂಜಾಂ, ಶ್ರೀರಂಗಪಟ್ಟಣ
ಎಸ್.ಎನ್.ದಯಾನಂದ ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ ಶ್ರೀ ನಿಮಿಷಾಂಬಾ ದೇವಸ್ಥಾನ, ಗಂಜಾಂ
ವ್ಯವಸ್ಥಾಪನ ಸಮಿತಿ ಸದಸ್ಯರು
ಶ್ರೀ ಸೂರ್ಯನಾರಾಯಣ ಭಟ್ ಅರ್ಚಕರು, ಶ್ರೀ ರಂಗಸ್ವಾಮಿ, ಶ್ರೀಮತಿ ಭಾಗ್ಯಲಕ್ಷ್ಮೀ, ಶ್ರೀಮತಿ ಸುಮಲತ, ಶ್ರೀ ಜಿ.ಎನ್.ಪೂರ್ಣ ಪ್ರಜ್ಞಮೂರ್ತಿ, ಶ್ರೀ ಟಿ.ಕೃಷ್ಣ, ಶ್ರೀ ಪಿ.ಬಾಲಸುಬ್ರಹ್ಮಣ್ಯ ಮತ್ತು ಶ್ರೀ ಎಸ್.ಕೃಷ್ಣ
ದೇವಸ್ಥಾನದ ಸಿಬ್ಬಂದಿ ವರ್ಗ ಹಾಗೂ ಗಂಜಾಂ ಮತ್ತು ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಹಾಗೂ ಭಕ್ತಾದಿಗಳು

ಗೃಹ ಮಂತ್ರಾಲಯ ಭಾರತ ಸರಕಾರ
ನಮ್ಮ ಜನಗಣತಿ ನಮ್ಮ ಅಭಿವೃದ್ಧಿ
2027 ರ ಜನಗಣತಿಯ ಮೊದಲ ಹಂತ
ಮನೆಪಟ್ಟಿ ಮತ್ತು ವಸತಿ ಜನಗಣತಿ
ಜನಗಣತಿ: ಗೌಪ್ಯತೆಯ ಖಾತರಿ
ನಿಮ್ಮ ಮಾಹಿತಿಯು ಸಂಪೂರ್ಣವಾಗಿ ಸುರಕ್ಷಿತವಾಗಿದೆ
- 1948 ರ ಜನಗಣತಿ ಕಾಯ್ದೆಯ ಅಡಿಯಲ್ಲಿ ಸಂಪೂರ್ಣ ಗೌಪ್ಯತೆ
- ಸುರಕ್ಷಿತ ಸರ್ವರ್‌ಗಳಲ್ಲಿ ಎನ್‌ಕ್ರಿಪ್ಟ್ ಮಾಡಲಾದ ಡೇಟಾ
- ವರದಿಗಳಲ್ಲಿ ಒಟ್ಟು ಅಂಕಿಅಂಶಗಳನ್ನು ಮಾತ್ರ ಪ್ರಕಟಿಸಲಾಗುತ್ತದೆ
- ಹೆಸರು ಮತ್ತು ವಿಳಾಸವನ್ನು ಯಾರೊಂದಿಗೂ ಹಂಚಿಕೊಳ್ಳಲಾಗುವುದಿಲ್ಲ
- ತೆರಿಗೆ, ಪೊಲೀಸ್ ಅಥವಾ ತನಿಖಾ ಉದ್ದೇಶಗಳಿಗಾಗಿ ಬಳಸಲಾಗುವುದಿಲ್ಲ.

ಜನಗಣತಿ 2027
ನಂಬಿಕೆ ಮತ್ತು ಭಾಗವಹಿಸುವಿಕೆ
- ಸರಿಯಾದ ಮಾಹಿತಿಯನ್ನು ನೀಡಿ
- ಭಯವಿಲ್ಲದೆ ಮಾಹಿತಿಯನ್ನು ನೀಡಿ
- ರಾಷ್ಟ್ರದ ಅಭಿವೃದ್ಧಿಯನ್ನು ಬೆಂಬಲಿಸಿ

ಖಚಿತರಾಗಿರಿ
ನಿಮ್ಮ ಮಾಹಿತಿ
- ಸುರಕ್ಷಿತವಾಗಿ ಉಳಿಯುತ್ತದೆ
- ಗೌಪ್ಯವಾಗಿ ಉಳಿಯುತ್ತದೆ
- ರಾಷ್ಟ್ರ ನಿರ್ಮಾಣಕ್ಕಾಗಿ ಮಾತ್ರ ಬಳಸಲಾಗುವುದು



ನಮ್ಮ ಜವಾಬ್ದಾರಿಯನ್ನು ಪೂರೈಸೋಣ ಮತ್ತು ಜನಗಣತಿಯಲ್ಲಿ ಭಾಗವಹಿಸೋಣ.
ಟೋಲ್ ಫ್ರೀ-1855
CensusIndia2027
CBC 19108/13/0053/2627

ಸ್ಕ್ಯಾನಿಂಗ್ ಸೆಂಟರ್‌ಗಳ ಪರಿಶೀಲನೆಗೆ ಸಮಿತಿ ರಚನೆ

ಪಿ.ಸಿ.ಪಿ.ಎನ್.ಡಿ.ಟಿ ಕಾಯ್ದೆ ಪ್ರಕಾರ ನಿಯಮ ಉಲ್ಲಂಘನೆಗೆ ಸೂಕ್ತ ಕ್ರಮ ವಹಿಸಿ: ಜಿಲ್ಲಾಧಿಕಾರಿ



ಸಭೆಯಲ್ಲಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಡಾ. ಕುಮಾರ್

ಮಂಡ್ಯ, ಏ.24– ಇತ್ತೀಚೆಗೆ ಕೆ.ಆರ್. ಪೇಟೆ ಪಟ್ಟಣದ ಎರಡು ಖಾಸಗಿ ಡಯಾಗ್ನೋಸ್ಟಿಕ್ (ಸ್ಕ್ಯಾನಿಂಗ್) ಸೆಂಟರ್‌ಗಳಲ್ಲಿ ಕಾನೂನುಬಾಹಿರವಾಗಿ ಭ್ರೂಣಲಿಂಗ ಪತ್ತೆ ಮಾಡುತ್ತಿರುವುದು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ ಹಿನ್ನೆಲೆಯಲ್ಲಿ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಪರಿಶೀಲಿಸಲು ಸಮಿತಿ ರಚನೆ ಮಾಡಬೇಕು ಎಂದು ಡಾ.ಕುಮಾರ ತಿಳಿಸಿದರು.

ಇಂದು ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ಡಯಾಗ್ನೋಸ್ಟಿಕ್ (ಸ್ಕ್ಯಾನಿಂಗ್) ಸೆಂಟರ್‌ಗಳಲ್ಲಿ ಕಾನೂನುಬಾಹಿರವಾಗಿ ಭ್ರೂಣಲಿಂಗ ಪತ್ತೆ ಮಾಡುತ್ತಿರುವುದು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ ಹಿನ್ನೆಲೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಅಂತಹ ಸ್ಕ್ಯಾನಿಂಗ್ ಸೆಂಟರ್‌ಗಳ ಬಗ್ಗೆ ಕ್ರಮ ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ಕ್ಯಾನಿಂಗ್ ಸೆಂಟರಗಳಲ್ಲಿ ನಿಯಮಾನುಸಾರವಾಗಿ ಸ್ಕ್ಯಾನಿಂಗ್ ವಿವರಗಳನ್ನು ನಮೂದಿಸಿಲ್ಲದರ ಬಗ್ಗೆ ವರದಿಯಾಗಿದ್ದು ಎಲ್ಲಾ ಅಧಿಕಾರಿಗಳೊಂದಿಗೆ ಜಿಲ್ಲಾ ಸಮಿತಿಯನ್ನು ಕರೆದು ಸಭೆಯನ್ನು ನಡೆಸಲಾಗಿದೆ. ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ ಪಿಸಿಪಿಸಿ ಎನ್‌ಡಿಟಿ ಕಾಯ್ದೆ ಪ್ರಕಾರ ನಿಯಮ ಉಲ್ಲಂಘನೆ ಮಾಡಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

> **ಅಪ್ರಾಪ್ತ ಬಾಲ ಗರ್ಭಿಣಿಯರನ್ನು ನಿಯಮ ಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಮಾಹಿತಿಯನ್ನು ಸಂಬಂಧಪಟ್ಟಂತಹ ಇಲಾಖೆಗೆ ನೀಡುವುದು. ಅಂತಹ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡುವುದು ಹಾಗೂ ಅವುಗಳ ಲೈಸೆನ್ಸ್ ಅನ್ನು ರದ್ದುಪಡಿಸಿ ಮುಚ್ಚುವ ಕ್ರಮ ವಹಿಸಬೇಕು. - ಡಾ.ಕುಮಾರ್, ಜಿಲ್ಲಾಧಿಕಾರಿ**

ಲೋಕಾಯುಕ್ತ ಪೊಲೀಸರು ಪ್ರಕರಣವನ್ನು ದಾಖಲು ಮಾಡಿರುವ ಬಗ್ಗೆ ಎಲ್ಲಾ ವಿವರಗಳನ್ನು ಇಲಾಖೆಯಿಂದ ಸಮರ್ಪಕವಾಗಿ ನೀಡಿರುತ್ತಾರೆ. ತಪ್ಪು ಎಸಗಿರುವ ಸ್ಕ್ಯಾನಿಂಗ್ ಸೆಂಟರ್‌ಗಳ ವಿರುದ್ಧ ಕೂಡಲೇ ನಿಯಮಾನುಸಾರ ಕ್ರಮ ಆಗಬೇಕು ಎಂದರು.

ತಾಲೂಕು ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು ಸದರಿ ಸಮಿತಿಯ ಸಂಪೂರ್ಣ ಜವಾಬ್ದಾರಿ ತಾಲೂಕು ಆರೋಗ್ಯ ಅಧಿಕಾರಿಗಳು ತೆಗೆದುಕೊಂಡು ಮುಂದಿನ 10 ದಿವಸದ ಒಳಗಡೆ ಜಿಲ್ಲೆಯಲ್ಲಿರುವ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ತಿಳಿಸಿದರು

ಸದರಿ ಜಾಗೃತ ದಳದವರು ಪರಿಶೀಲನೆ ನಡೆಸಿದ ಬಗ್ಗೆ ಕಳೆದ ಆರು ತಿಂಗಳ ಎಫ್.ಆರ್ ಫಾರಂ ಅನ್ನು ಪಡೆದು ಆಡಿಟ್ ಮಾಡಿಸಬೇಕು ಮತ್ತು ನಿಯಮಾನುಸಾರ ನಿಗದಿ ನಮೂನೆಯಲ್ಲಿ ವರದಿ ಯನ್ನು ಸಲ್ಲಿಸಬೇಕು ಎಂದು ತಿಳಿಸಿದರು.

18 ವರ್ಷದೊಳಗಿನ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಸ್ಕ್ಯಾನಿಂಗ್ ಗೆ ಸಂಬಂಧಪಟ್ಟಂತಹ ಪ್ರಕರಣಗಳಿದ್ದಲ್ಲಿ ಪೋಕ್ಸೋ ಕಾಯ್ದೆ ಪ್ರಕಾರ ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಠಾಣೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡಿ ಕಾನೂನು ಉಲ್ಲಂಘನೆ ಮಾಡಿರುವ ಸ್ಕ್ಯಾನಿಂಗ್ ಸೆಂಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳುವುದಲ್ಲದೆ ಕೂಡಲೇ ಪ್ರಕರಣಗಳನ್ನು ದಾಖಲು ಮಾಡಲು ಕ್ರಮ ವಹಿಸಬೇಕು ಎಂದರು.

ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಕಾಲ ಕಾಲಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು ಹಾಗೂ ಉಪ ವಿಭಾಗ ಅಧಿಕಾರಿಗಳು ಪಿ.ಸಿ.ಪಿ. ಎನ್.ಡಿ.ಟಿ ಕಾಯ್ದೆ ಪ್ರಕಾರ ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಮೇಲ್ವಿಚಾರಣೆ ಮಾಡಿ ಮಾಸಿಕ ವರದಿಯನ್ನು ಸಲ್ಲಿಸುವುದು ಹಾಗೂ ಭ್ರೂಣಲಿಂಗ ಪತ್ತೆಯು ಅಪರಾಧ ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಹಾಗೂ ಆಸ್ಪತ್ರೆ, ಕ್ಲಿನಿಕ್, ಲ್ಯಾಬ್, ಸ್ಕ್ಯಾನಿಂಗ್ ಸೆಂಟರ್ ಗಳಿಗೆ ಕಡ್ಡಾಯವಾಗಿ ಮುಂದಿನ 10 ದಿವಸದೊಳಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಲು ಕ್ರಮವನ್ನು ವಹಿಸಲು ಸೂಚಿಸಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದಎಂ, ಜಿಲ್ಲಾ ಉಪ ವಿಭಾಗ ಅಧಿಕಾರಿ ಶಿವಮೂರ್ತಿ, ಪಾಂಡವಪುರ ಉಪ ವಿಭಾಗ ಅಧಿಕಾರಿ ಶ್ರೀನಿವಾಸ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ಬೆಟ್ಟಸ್ವಾಮಿ, ಕುಷ್ಠ ರೋಗ ನಿರ್ಮೂಲನ ಅಧಿಕಾರಿ ಸೋಮಶೇಖರ್, ಡಾ. ಕುಮಾರ್, ಕಾಂತರಾಜು, ಡಾ. ಕೆ.ಪಿ. ಅಶ್ವಥ್ ರವರು ಉಪಸ್ಥಿತರಿದ್ದರು.

ಹಲ್ಲಿನ ಆರೋಗ್ಯದ ಬಗ್ಗೆ ಗಮನವಿರಲಿ



ಚಿನಕುರಳಿ, ಏ.24– ಹಲ್ಲು ಹಾಗೂ ಬಾಯಿಯ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಗಮನ ಹರಿಸಬೇಕೆಂದು ಮನ್‌ಮುಲ್ ನಿರ್ದೇಶಕ ಶಿವಕುಮಾರ್ ಹೇಳಿದರು.

ಚಿನಕುರಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಬಾಯಿ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನಿಗೆ ಬಾಯಿ ಎಂಬುದು ಅತಿ ಮುಖ್ಯವಾದ ಅಂಗ. ಸೌಂದರ್ಯದ ಹೊರತಾಗಿಯೂ ಮನುಷ್ಯನಿಗೆ ಬಾಯಿಯ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಬೇಕಿದೆ.

ಆಹಾರ, ನೀರು ಸೇವನೆಗೆ ಬಾಯಿ ಪ್ರಮುಖವಾಗಿದೆ. ಅದರಂತೆ ಆಹಾರವನ್ನು ಅಗಿಯಲು ಬಾಯಿಯೊಳಗಿರುವ ಹಲ್ಲು ಸಹ ಸಹಕಾರಿ. ಇವತ್ತು ಅದೆಷ್ಟೋ ಮಂದಿ ಹಲ್ಲು ನೋವಿನಿಂದ ಬಳಲುತ್ತಿದ್ದಾರೆ. ಹಲ್ಲನ್ನು ಶುದ್ಧವಾಗಿಟ್ಟುಕೊಳ್ಳುವುದರಿಂದ ಉಳುಕಲ್ಲು, ಹಲ್ಲುದುರುವ ಸಮಸ್ಯೆಯಿಂದ ತಪ್ಪಿಸಿಕೊಳ್ಳಬಹುದು. ಹೀಗೆ ಬಾಯಿ ಮತ್ತು ಹಲ್ಲಿನ ಆರೋಗ್ಯಕ್ಕೆ ಎಲ್ಲರೂ ಗಮನ ವಹಿಸುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಚಿನಕುರಳಿ ಲೋಕೇಶ್ ಸೇರಿದಂತೆ ಹಲವು ಮಂದಿ ಹಾಜರಿದ್ದರು.

ಸೇಂಟ್ ಆನ್ಸ್ ಆಂಗ್ಲ ಪ್ರೌಢಶಾಲೆಗೆ ಶೇಕಡ 99 ಫಲಿತಾಂಶ


ಗಗನ್ | ಪೂರ್ವಿಕ | ಚೈತ್ರ | ಚಿನ್ಮಯಿ

ಪಾಲಹಳ್ಳಿ, ಏ.24– 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯಲ್ಲಿರುವ ಸೇಂಟ್ ಆನ್ಸ್ ಆಂಗ್ಲ ಪ್ರೌಢಶಾಲೆಗೆ ಶೇಕಡ 99 ಫಲಿತಾಂಶ ಲಭಿಸಿದೆ. ಗಗನ್ 605 ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಟಾಪರ್ ಆಗಿದ್ದಾರೆ. ಪೂರ್ವಿಕ ಜಿ. 598 ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾಳೆ. ಚೈತ್ರ 580, ಚಿನ್ಮಯ್ 579 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಯುವ ಜನತೆ ಡಾ.ರಾಜ್‌ರ ಸರಳತೆ ಅಳವಡಿಸಿಕೊಳ್ಳಿ


ಡಾ.ರಾಜ್ ಕುಮಾರ್ 97ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟನೆ.

ಮಂಡ್ಯ, ಏ.24– ಡಾ.ರಾಜ್ ಕುಮಾರ್ ಮೇರು ನಟರಾಗಿದ್ದರೂ ಸಹ ಸ್ವಲ್ಪವೂ ಕೂಡ ಅಹಂ ಇಲ್ಲದೆ ಸಾಮಾನ್ಯರಲ್ಲಿ ಸಾಮಾ ನ್ಯರಾಗಿದ್ದು ಕನ್ನಡ ಚಿತ್ರರಂಗಕ್ಕೆ ಅಪಾರ ಕೀರ್ತಿ ತಂದು ಕೊಟ್ಟವರು ಅವರ ಸರಳ ಜೀವನ ಶೈಲಿ ಹಾಗೂ ನೈತಿಕ ಮೌಲ್ಯ ಆದರ್ಶಗಳನ್ನು ಯುವ ಜನತೆಯೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ ಪ್ರಕಾಶ್ ತಿಳಿಸಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸರ್ಕಾರಿ ಮಹಿಳಾ ಕಾಲೇಜು (ಸ್ವಾಯತ್ತ) ಸಂಯುಕ್ತಾಶ್ರಯದಲ್ಲಿ ನಗರದ ಸರ್ಕಾರಿ ಮಹಿಳಾ ಕಾಲೇಜಿನ (ಸ್ವಾಯತ್ತ)ಸಭಾಂಗಣದಲ್ಲಿ ನಡೆದ ವರನಟ ಡಾ. ರಾಜ್ ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ರಾಜ್ ಕುಮಾರ್ ಉನ್ನತ ಪ್ರಶಸ್ತಿಯನ್ನು ಪಡೆದು ನಿರ್ಮಾಪಕರನ್ನೇ ಅನ್ನದಾತರೆಂದು ಅವರಿಗೆ ಗೌರವ ಪೂರ್ವಕವಾಗಿ ನಡೆಸಿಕೊಳ್ಳುತ್ತಿದ್ದರು. ಅವರ ಸರಳ ಜೀವನ ಎಲ್ಲರಿಗೂ ಮಾದರಿ ಎಂದರು.

ಮೈಸೂರು ಮಹಾರಾಣಿ ಮಹಿಳಾ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ ಪಿ.ವಿ. ಅವರು ವಿಶೇಷ ಉಪನ್ಯಾಸ ನೀಡಿ, ಕನ್ನಡ ಚಿತ್ರರಂಗದ ಮೇರುನಟ, ಗಾಯಕ ಮತ್ತು ಸಾಂಸ್ಕೃತಿಕ ಐಕಾನ್. 'ನಟಸಾರ್ವಭೌಮ' ಎಂದೇ ಕರೆಯಲ್ಪಡುವ ಇವರು 5 ದಶಕಗಳ ವೃತ್ತಿ ಜೀವನದಲ್ಲಿ 200ಕ್ಕೂ ಹೆಚ್ಚು ಚಲನ ಚಿತ್ರಗಳಲ್ಲಿ ನಟಿಸಿದ್ದಾರೆ.

ಪದ್ಮಭೂಷಣ ಮತ್ತು ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದ ಇವರು, ಕನ್ನಡ ಚಿತ್ರರಂಗದ ಧ್ರುವತಾರೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸರ್ಕಾರಿ ಮಹಿಳಾ ಕಾಲೇಜಿನ ಸಮಾಜ ಶಾಸ್ತ್ರ ಪ್ರಾಧ್ಯಾಪಕರಾದ ಮನ್ಸೂರ್ ಪಾಷ ರಾಜ್ ಕುಮಾರ ಚಿತ್ರಗೀತೆಯನ್ನು ಹಾಡಿ ಗಮನ ಸೆಳೆದರು

ವೇದಿಕೆಯಲ್ಲಿ ವಾರ್ತಾ ಮತ್ತು ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರಾದ ಟಿ.ಕೆ.ಹರೀಶ್, ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ರವಿಕಾಂತ್ ಲಂಬಾಣಿ, ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆ ರಾಜ್ಯ ಅಧ್ಯಕ್ಷರಾದ ಸಂದೇಶ್. ಹಿರಿಯ ಪತ್ರಕರ್ತರಾದ ದೇವರಾಜು ಕೊಪ್ಪ. ಸೇರಿದಂತೆ ಕಾಲೇಜಿನ ಪ್ರಾಧ್ಯಾಪಕರಾದ ದಾನೇಗೌಡ, ಶಿವರಾಜು ಹಾಗೂ ಕಾಲೇಜಿನ ಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ: ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಏ.25ರಂದು ಬೆಳಗ್ಗೆ 9ರಿಂದ 6 ಗಂಟೆವರೆಗೆ ಶಂಕರಪುರ, ಜೈನ್ ಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ಹೋಳಲು ವೃತ್ತ, ವಿನಾಯಕನಂದ ಬಡಾವಣೆ, ಗ್ರಾಮಾಂ ತರ ಪ್ರದೇಶಗಳಾದ ಗೋಪಾಲಪುರ, ಚಿಕ್ಕಮಂಡ್ಯ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್‌ನಲ್ಲಿ ವ್ಯತ್ಯಯವಾಗಲಿದೆ.

ನಾಗಮಂಗಲದಲ್ಲಿ ಭಗೀರಥ ಮಹರ್ಷಿ ಜಯಂತಿ ಆಚರಣೆ



ನಾಗಮಂಗಲ: ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧದಲ್ಲಿ ಭಗೀರಥ ಜಯಂತಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪಾಂಡವಪುರ ವಿಭಾಗಾಧಿಕಾರಿ ಶ್ರೀನಿವಾಸ್ ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಭಗೀರಥನ ಕಠಿಣ ಪ್ರಯತ್ನದಂತೆ ಸಮಾಜದಲ್ಲಿ ಸ್ಥಾನಮಾನ ಪಡೆಯಬೇಕು ಎಂದು ಕಿವಿ ಮಾತು ಹೇಳಿದರು.

ಮಹನೀಯರ ಜಯಂತಿಯ ಶುಭಾಶಯಗಳು ಒಂದು ಸಮುದಾಯಕ್ಕೆ ಸೀಮಿತವಾಗದೆ ಸಮಾಜದಲ್ಲಿ ಒಂದೊಂದು ಜಯಂತಿಯನ್ನು ಒಂದೊಂದು ಸಮುದಾಯದವರು ಮಾತ್ರ ಆಚರಿಸುವ ಪದ್ಧತಿ, ಬದಲಾಗಬೇಕು. ಮಹನೀಯರು ಇಡೀ ದೇಶದ ಆಸ್ತಿ ಹೀಗಾಗಿ ಎಲ್ಲರೂ ಒಗ್ಗೂಡಿ ಜಯಂತಿಗಳನ್ನು ಆಚರಿಸುವ ವಾತಾ ವರಣ ನಿರ್ಮಾಣವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಂತಪುರ ಮುಖ್ಯೋಪಾದಾಯ ಮಂಜುನಾಥ್ ಸಿಡಿಪಿಓ ಕೃಷ್ಣಮೂರ್ತಿ, ಟಿಎಚ್ಓ ನಾರಾಯಣ, ಅಶೋಕ್ ಸ್ವಾಮಿ ಎನ್, ಸುರೇಶ್ ಟಿ, ಸತೀಶ್ ಟಿ ಇದ್ದರು.

ಮೂರನೇ ಪುಟದಿಂದ

ಒಳ ಮೀಸಲಾತಿ

ನಡೆದ ವಿಶೇಷ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಮಾದಿಗ ಸೇರಿದಂತೆ 18 ಜಾತಿಗಳಿರುವ ಎಡಗೈ ಸಮುದಾಯಕ್ಕೆ ಶೇಕಡ 5.25 ಹಾಗೂ ಹೊಲೆಯ ಸೇರಿದಂತೆ 20 ಜಾತಿಗಳಿರುವ ಬಲಗೈ ಸಮುದಾಯಕ್ಕೆ ಶೇಕಡ 5.25 ಮತ್ತು ಕೊರಚ, ಕೊರಮ, ಲಂಬಾಣಿ ಮತ್ತು ಭೋವಿ ಸೇರಿದಂತೆ 63 ಇತರೆ ಸಮುದಾಯಗಳಿಗೆ ಶೇಕಡ 4.5ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಲಾಗಿದೆ.

ಪ್ರಸ್ತಾಪಿತ ಶೇ.56 ಮೀಸಲಾತಿ ವಿಚಾರ ಕೋರ್ಟ್‌ನಲ್ಲಿರುವುದರಿಂದ ಅದು ಇತ್ಯರ್ಥವಾಗುವವರೆಗೂ ಶೇ.6 ಅನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು. ಕೋರ್ಟ್ ತೀರ್ಪಿಗೆ ಅನುಗುಣವಾಗಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ಈ ಬಗ್ಗೆ ಮಾಹಿತಿ ನೀಡಿದ ಸಿಎಂ ಸಿದ್ದರಾಮಯ್ಯ, ಒಳ ಮೀಸಲಾತಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಿತಿ ಮಾಡಬೇಕೆಂದು ಕಳೆದ ಸಂಪುಟ ಸಭೆಯಲ್ಲಿ ತೀರ್ಮಾನ ಆಗಿತ್ತು ಆ ಸಮಿತಿ ಶುಕ್ರವಾರ ವರದಿ ನೀಡಿದೆ. ಆ ವರದಿಯಲ್ಲಿ ಶೇ.15 ಪ್ರಮಾಣದಲ್ಲಿ ದಲಿತ ಎಡಗೈ ಸಮುದಾಯಕ್ಕೆ 5.3, ಎಡಗೈ ಸಮುದಾಯಕ್ಕೆ 5.3 ಹಾಗೂ 4.4 ಹಂಚಿಕೆ ಮಾಡುವಂತೆ ತಿಳಿಸಲಾಗಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದ ಬಳಿಕ ಮೀಸಲಾತಿ ಪ್ರಮಾಣವನ್ನು 5.25, 5.25 ಹಾಗೂ 4.5 ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಎಲ್ಲ ಸಚಿವರ ಸಮ್ಮತಿ: ಒಳ ಮೀಸಲಾತಿ ವಿಚಾರವಾಗಿ ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಿ ಎಲ್ಲ ಮಂತ್ರಿಗಳು ಸರ್ವಾನುಮತದ ಒಪ್ಪಿಗೆ ಸೂಚಿಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗಿದೆ. ಹೀಗಾಗಿ ಬಿಕ್ಕಟ್ಟು ಬಗೆಹರಿದಿದ್ದು ತಕ್ಷಣವೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ತಿಳಿಸಿದರು.

ನೇಮಕಾತಿ ಪ್ರಕ್ರಿಯೆ: ರಾಜ್ಯ ಸರ್ಕಾರದಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ. ಇದರಲ್ಲಿ ಮೊದಲ ಹಂತದಲ್ಲಿ 56437 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿತ್ತು ಈಗ ಅದನ್ನು ವಾಪಸ್ ಪಡೆದು ಒಳ ಮೀಸಲಾತಿಯನ್ನು ಅಳವಡಿಸಿ ಹೊಸದಾಗಿ ಅಧಿಸೂಚನೆ ಹೊರಡಿಸಲಾಗುವುದು. ಈ ಮೂಲಕ ನೇಮಕಾತಿ ಪ್ರಕ್ರಿಯೆ ಆರಂಭವಾಗುತ್ತಿದ್ದು ಹಂತ ಹಂತವಾಗಿ ಮೂರು ವರ್ಷದಲ್ಲಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು. ವಿಧಾನಸಭೆ ಚುನಾವಣೆಗೂ ಮುನ್ನ ಚಿತ್ರದುರ್ಗದಲ್ಲಿ ಕಾಂಗ್ರೆಸ್ ಪಕ್ಷ ಡಾ.ಜಿ ಪರಮೇಶ್ವರ್ ನೇತೃತ್ವದಲ್ಲಿ ದಲಿತ ಸಮಾವೇಶ ಆಯೋಜಿಸಿತ್ತು. ಈ ಸಭೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ಪಕ್ಷವನ್ನು ಆಗ್ರಹಿಸಿದ ಎಸ್ ಸಿ ಸಮುದಾಯದ 101 ಜಾತಿಗಳು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರು. ಇದಾದ ನಂತರ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ಜಾರಿಯ ಭರವಸೆ ನೀಡಲಾಗಿತ್ತು

ಕೋರ್ಟ್ ಸೂಚನೆ: 2024ರಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ ಒಳಮೀಸಲಾತಿ ಮಾಡಬಹುದು ಎಂದು ತೀರ್ಪು ನೀಡಿತ್ತು ಇದಕ್ಕೆ ಸಂವಿಧಾನದ ವಿರೋಧ ಇಲ್ಲ ಎಂದಿತ್ತು. ಬಳಿಕ ನ್ಯಾ. ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಅಯೋಗ ರಚನೆ ಮಾಡಿದ್ದೆವು. ಅವರು ನೀಡಿದ ವರದಿಯನ್ನು ಸಂಪುಟ ಅಂಗೀಕಾರ ಮಾಡಿತ್ತು. 6,5,4,1,1 ಹಂಚಿಕೆ ಮಾಡಲಾಗಿತ್ತು. ಅದರೆ ಸಂಪುಟದಲ್ಲಿ ಎಡಗೈಗೆ 6 ಬಲಗೈಗೆ 6 ಹಾಗೂ ಇತರೇ 5 ಹಂಚಿಕೆ ಮಾಡಿದ್ದೆವು. ಬಳಿಕ ಕಾನೂನು ಮಾಡಲಾಗಿತ್ತು. ಆದರೆ ರೋಸ್ಟರ್ ಬಿಂದುವಿನಲ್ಲಿ ಗೊಂದಲ ನಿರ್ಮಾಣ ಆಗಿತ್ತು. ಅಲೆಮಾರಿ ಸಮುದಾಯ ನ್ಯಾಯಾಲಯದ ಮೆಟ್ಟಿಲೇರಿತ್ತು. ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದು ನ್ಯಾಯಾಲಯ ಸೂಚಿಸಿತ್ತು ಎಂದು ತಿಳಿಸಿದರು.

ನಾಗಮೋಹನ್ ದಾಸ್ ಆಯೋಗ ಎಸ್‌ಸಿ–ಎಸ್‌ಟಿ ಮೀಸಲಾತಿ ಪ್ರಮಾಣವನ್ನು 24% ನೀಡಿತ್ತು ಹೀಗಾಗಿ ಮೀಸಲಾತಿ ಪ್ರಮಾಣ ಶೇ. 56 ಕ್ಕೆ ಏರಿಕೆ ಆಗಿತ್ತು. ಹೀಗಾಗಿ ಶೇ.50 ಸೀಲಿಂಗ್ ಮೀರಬಾರದು ಎಂದು ಕೋರ್ಟ್ ಆದೇಶ ನೀಡಿತ್ತು ಇಂದಿರಾ ಸಹಾನಿ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಹೈಕೋರ್ಟ್ ಪುನರುಚ್ಚಾರ ಮಾಡಿತ್ತು. ರೋಸ್ಟರ್ ಬಿಂದು ಸರಿಯಾಗಿಲ್ಲ ಎಂಬ ಕಾರಣ ನೀಡಿ ಪ್ರತಿಭಟನೆಗಳು ನಡೆಯುತ್ತಿದ್ದವು. ಕಳೆದ ತಿಂಗಳು ವಿಶೇಷ ಸಚಿವ ಸಂಪುಟ ಸಭೆ ಮಾಡಲು ತೀರ್ಮಾನ ಮಾಡಿದ್ದೆವು. ನೀತಿ ಸಂಹಿತೆ ಕಾರಣಕ್ಕಾಗಿ ಸಂಪುಟ ಸಭೆ ಮಾಡಿಲ್ಲ ಎಂದು ವಿವರಿಸಿದರು.

ಈ ಬಾರಿ ಬಜೆಟ್‌ನಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಣೆ ಮಾಡಿದ್ದೆವು.ಈ ಹುದ್ದೆಗಳ ಭರ್ತಿ ವೇಳೆ ಇದೇ ಮೀಸಲಾತಿ ಅನುಪಾತ ಅನ್ವಯ ಆಗಲಿದೆ. ಪ್ರವರ್ಗ ಎ–5.25, ಬಿ – 5.25 ಹಾಗೂ ಸಿ –4.5 ರಂದು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ರೋಸ್ಟರ್ ಬಿಂದು ಗೊಂದಲವನ್ನು ಸರಿಪಡಿಸಲು ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆ ಪ್ರಕಾರ, 1 ಅಥವಾ 2 ಹುದ್ದೆಗಳು ಇದ್ದ ಸಂದರ್ಭದಲ್ಲಿ ಅವುಗಳನ್ನು ಎಸ್‌ಸಿ ಜನರಲ್ ಎಂದು ಮಾಡಲಾಗುವುದು. ಇದಕ್ಕೆ ಈ ಮೂರೂ ವರ್ಗದವರು ಸ್ಪರ್ಧಿಸಬಹುದು.

ರಾಷ್ಟ್ರದಲ್ಲಿ ಮಾದರಿ: ಆರಂಭದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್ ಕೆ ಪಾಟೀಲ್ ಮಾತನಾಡಿ, 'ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ವಿಚಾರವಾಗಿ ಚರ್ಚೆ ನಡೆಯುತ್ತಿತ್ತು. ಆದರೆ ರಾಷ್ಟ್ರದಲ್ಲಿ ಮಾದರಿಯಾಗಬೇಕಾದ ನಿರ್ಣಯವನ್ನು ಕೈಗೊಳ್ಳಲಾಗಿದೆ. ಈ ವಿಚಾರ ಸಾಕಷ್ಟು ಚರ್ಚೆಗೆ ಒಳಗಾಗಿತ್ತು. ಎಲ್ಲಾ ಸಮುದಾಯದ ಮನವೊಲಿಸಿ ಒಪ್ಪಿಸಿ, ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು ಮಾಡಬೇಕಾಗಿತ್ತು. ರೋಸ್ಟರ್ ವಿಚಾರವಾಗಿಯೂ ನಿರ್ಣಯ ತೆಗೆದುಕೊಳ್ಳುವಲ್ಲಿ ಸಿಎಂ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ' ಎಂದರು.

ತುಪ್ಪ ತಿನ್ನಿಸುತ್ತಿದ್ದಾರೆ... ಎಚ್ಚರ...ಎಚ್ಚರ...!

ಕನ್ನಡಿಗರ ಮೇಲೆ ಕನಿಷ್ಠ ಲಕ್ಷ ರೂ. ಸಾಲ ಹೊರಿಸಿದೆ. ಇದನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಯಾವ ವೇದಿಕೆಯಲ್ಲಿ ಬೇಕಾದರೂ ಚರ್ಚೆಗೆ ತಯಾರಿದ್ದೇನೆ. ಅವರಿಗೆ ಧೈರ್ಯವಿದ್ದರೆ ಚರ್ಚೆಗೆ ಬರಲಿ ಎಂದು ರಾಜ್ಯ ಸರ್ಕಾರಕ್ಕೆ ಸವಾಲು ಹಾಕಿದರು. ಗ್ಯಾರಂಟಿಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸಕಾಲಕ್ಕೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಶಕ್ತಿಯನ್ನು ಸರ್ಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲ ಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನು ಆರ್ಥಿಕವಾಗಿ ಹಾಳು ಮಾಡಿದೆ. ಅಧಿಕಾರಿಗಳ ವೇತನದಲ್ಲಿ ಕಡಿತ ಮಾಡುತ್ತಿದೆ. ಸ್ವತಃ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನದಲ್ಲಿ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲ ಪ್ರದೇಶದ ಪರಿಸ್ಥಿತಿಯು ಕರ್ನಾಟಕಕ್ಕೆ ಬರಲಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕೆಲವು ವರ್ಷಗಳ ಹಿಂದೆ ಶ್ರೀಲಂಕಾ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಎಲ್ಲರೂ ಗಮನಿಸಿದ್ದೇವೆ. ಇವರು ಇದೇ ರೀತಿ ಆರ್ಥಿಕ ವ್ಯವಸ್ಥೆಯನ್ನು ಕಳಪೆಯಾಗಿ ನಿರ್ವಹಣೆ ಮಾಡಿದರೆ ಶ್ರೀಲಂಕಾದ ಪರಿಸ್ಥಿತಿಯೇ ಕರ್ನಾಟಕಕ್ಕೂ ಬರಲಿದೆ ಎಂದು ಎಚ್ಚರಿಕೆ ನೀಡಿದರು. ಮಹಿಳೆಯರು 2 ಸಾವಿರ ಪಡೆದು ಸಂಸಾರ ನಿರ್ವಹಣೆ ಮಾಡಲು ಸಾಧ್ಯವೇ? ನಿಮಗೆ ಇಲ್ಲಿ ಗೃಹಲಕ್ಷ್ಮೀ ಎಂದು ಹಣ ಕೊಡುತ್ತಾರೆ. ಅತ್ತ ಬೆಲೆ ಏರಿಕೆ ಮತ್ತು ತೆರಿಗೆ ಏರಿಕೆಯಿಂದ ನಿಮ್ಮ ಪತಿಯವರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ. ಅಲ್ಲದೆ ಮನಸ್ಸೋ ಇಚ್ಛೆ ಸಾಲ ಮಾಡಿ ನಿಮ್ಮ ಮಕ್ಕಳ ಮೇಲೆಯೂ ಸಾಲ ಹೊರಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.


ಗ್ರಾಮಸ್ಥರು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಿದರು.

> **ಮಾತ್ತೆತ್ತಿದರೆ ಕೇಂದ್ರ ಸರ್ಕಾರ ಸಾಲ ಮಾಡಿಲ್ವಾ ಎನ್ನುವ ಕಾಂಗ್ರೆಸ್ ಮುಖಂಡರು, ಕೇಂದ್ರ ಸರ್ಕಾರ ಸಾಲ ಮಾಡಿರುವುದು ರೈಲ್ವೆ, ವಿಮಾನ ನಿಲ್ದಾಣ ಇಂತಹ ಯೋಜನೆಗಳನ್ನು ಮಾಡಿ ದೇಶದ ಆಸ್ತಿ ವೃದ್ಧಿಸಲು. ಆದರೆ ನಿಮ್ಮ ಹಾಗೆ ಅನಗತ್ಯ ಸಾಲ ಮಾಡಿ ರಾಜ್ಯದ ಆಸ್ತಿ ಆಡವಿಟ್ಟಿಲ್ಲ. ಆನ್‌ಲೈನ್ ಗೇಮ್, ಬೆಟ್ಟಿಂಗ್‌ನಿಂದ ಸಾಲ ಮಾಡಿಕೊಂಡು ಯುವಕರು ಮನೆ, ಜಮೀನು ಕಳೆದುಕೊಂಡು ಬೀದಿಗೆ ಬಂದಿದ್ದಾರೆ. ಇನ್ನೂ ಕೆಲವು ಸಾಲ ತೀರಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳುತ್ತಿದ್ದಾರೆ. ಇದು ಚರ್ಚೆ ಮಾಡದ ಇವರು ಪ್ರತಿ ನಿತ್ಯ ನಾನು ಸಿಎಂ. ನಾನು ಸಿಎಂ, ಕೊನೆಗೆ ನಮ್ಮಪ್ಪ ಐದು ವರ್ಷ ಸಿಎಂ ಇದೇ ಆಗೋಯ್ತು. ಇನ್ನೆಲ್ಲಿ ರಾಜ್ಯದ ಅಭಿವೃದ್ಧಿ ಸಾಧ್ಯ. ಹಾಗಾಗಿ ಮುಂದೆ ಒಳ್ಳೆಯ ಸರ್ಕಾರ ತರಲು ನನ್ನೊಂದಿಗೆ ಜನರು ಕೈ ಜೋಡಿಸಬೇಕು.**
> **- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ.**

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಹೊಸ ಅಗ್ರಹಾರ ಗ್ರಾಮದ ಎಲ್ಲಾ ಸಮುದಾಯದವರು ಸೇರಿ ದೇವಸ್ಥಾನದ ಕುರ್ಜು ನಿರ್ಮಾಣ ಮಾಡಿ ಇಂದು ಲೋಕಾರ್ಪಣೆ ಮಾಡಿದ್ದೀರಿ. ಇದು ಧಾರ್ಮಿಕ ಕಾರ್ಯಕ್ರಮ, ನಾನು ರಾಜಕೀಯ ಮಾತನಾಡಲ್ಲ ಎಂದರು. ನಿಮ್ಮೂರಿನ ನಾಟಕ ಪ್ರದರ್ಶನ ಸಮಾರಂಭದಲ್ಲಿ ಗ್ರಾಮದ ಅಭಿವೃದ್ಧಿ ನಾನೇ ಮಾಡಿದ್ದು ಎಂದಿದ್ದಾರೆ. ಆದರೆ, ವಾಲ್ಮೀಕಿ ಸಮುದಾಯ ಭವನಕ್ಕೆ ನಿವೇಶನ ಕೊಡಿಸಿದ್ದು ನಾನು, 50 ಲಕ್ಷ ಅನುದಾನ ನೀಡಿದ್ದು ನಾನು, ಗ್ರಾಮಕ್ಕೆ ರೈತ ಸಂಪರ್ಕ ಕೇಂದ್ರದ ಹೊಸ ಕಟ್ಟಡ, ಕಾಂಕ್ರೀಟ್ ರಸ್ತೆಗಳು, ಆಶ್ರಯ ನಿವೇಶನ, ವಿಕಾಸ ಗ್ರಾಮ ಯೋಜನೆ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಯನ್ನು ಮಾಡಿದ್ದೇನೆ. ಇದು ಗ್ರಾಮದ ಜನತೆಗೆ ಗೊತ್ತಿದೆ ಎಂದ ಅವರು ದೇವಸ್ಥಾನ ಕಟ್ಟುವುದು ಎಲ್ಲರಿಗೂ ಒಳಿತಿಗಾಗಿ, ಪಕ್ಕದ ಮನೆಯವರಿಗೆ ಕೇಡು ಬಯಸುವುದಕ್ಕೆ ಅಲ್ಲ. ನಿಮ್ಮ ತಂದೆ ತಾಯಿಗಳಲ್ಲಿ ದೇವರನ್ನು ಕಾಣಿ ಎಂದು ನುಡಿದರು.

ಸಾಲಿಗ್ರಾಮ ಯೋಗ ನರಸಿಂಹಸ್ವಾಮಿ ದರ್ಶನ ಪಡೆದ ಹೆಚ್ಡಿಕೆ: ಇವೆರಡು ಕಾರ್ಯಕ್ರಮಗಳ ನಂತರ ಸಾಲಿಗ್ರಾಮದ ಶ್ರೀಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಮುಖಂಡರ ಜೊತೆ ದೇಗುಲಕ್ಕೆ ಬಂದ ಸಚಿವರು ಕೆಲಕಾಲ ಭಗವಂತನ ಸನ್ನಿಧಿಯಲ್ಲಿ ಇದ್ದರು.

ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆವಿವೇಕಾನಂದ, ಮಾಜಿ ಶಾಸಕರಾದ ಅಶ್ವಿನ್, ಕೆ.ಮಹದೇವ್, ಜಿಪಂ ಮಾಜಿ ಅಧ್ಯಕ್ಷ ದ್ವಾರಕೀಶ್, ಮಾಜಿ ಸದಸ್ಯ ಎಂ.ಟಿ. ಕುಮಾರ್, ಬಿಜೆಪಿ ಜಿಲ್ಲಾ ಮಾಜಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಮಣಿಗಾರ್, ರಾಜ್ಯ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಪುರಸಭಾ ಮಾಜಿ ಸದಸ್ಯರಾದ ಉಮೇಶ್, ಕೆ.ಎಲ್.ಜಗದೀಶ್, ಮಾಜಿ ಅಧ್ಯಕ್ಷರಾದ ಗೀತಾ ಮಹೇಶ್, ಡಿ.ಕಾಂತರಾಜು, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಂದ್ರಶೇಖರ್, ಹೊಸ ಅಗ್ರಹಾರ ಗ್ರಾಮದ ರಾಮೇಗೌಡ, ಗೋಪಾಲ್ ಗೌಡ, ಡೈರಿ ರಾಜೇಗೌಡ, ರಾಘವೇಂದ್ರ, ಬಸವೇಶ್ವರ ದೇವಸ್ಥಾನದ ಅರ್ಚಕ ಮಂಜುನಾಥ್, ಡೈರಿ ಮಹೇಶ್, ಚಂದು, ಪ್ರಭಾಕರ ನಾಯಕ, ಇಂಜಿನಿಯರ್ ಶಿವು, ಹೆಚ್.ಎಸ್. ರಾಜು, ಡೈರಿ ಪ್ರತಾಪ್, ಯಜಮಾನ್ ಮಧು, ನಾರಾಯಣ್ ನಾಯಕ, ಸುನೀಲ್, ಪುನೀತ್, ಎಳನೀರು ರವಿ, ದೇವೇಂದ್ರ ನಾಯಕ ಇತರರಿದ್ದರು.

ಮಗನ ಕೊಂದ ತಾಯಿ!

ಪ್ರತಿನಿತ್ಯ ಪೀಡಿಸುತ್ತಿದ್ದ. ಹಣ ನೀಡದಿದ್ದರೆ ಕುಡಿದು ಬಂದು ತಾಯಿಯ ಮೇಲೆ ಹಲ್ಲೆ ಮಾಡುತ್ತಿದ್ದ. ಮನೆ ಕೆಲಸ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದ ಮಂಜುಳಾ, ಮಗನ ಕಿರುಕುಳದಿಂದ ರೋಸಿ ಹೋಗಿದ್ದರು. ಒಬ್ಬ ಮಗ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ, ಮತ್ತೋರ್ವ ಮದ್ಯ ವ್ಯಸನಿ. ಇದೇ ಯೋಚನೆಯಲ್ಲಿ ಮಂಜುಳಾ, ಕುಡುಕ ಮಗನನ್ನೇ ಹತ್ಯೆ ಮಾಡಲು ನಿರ್ಧರಿಸಿದರು ಎಂದು ತಿಳಿದುಬಂದಿದೆ. ಮಂಜುಳಾರನ್ನು ಗುರುವಾರ ರಾತ್ರಿ ಚಾಮುಂಡಿಬೆಟ್ಟ ತಪ್ಪಲಿನ ತಾವರೆ ಕಟ್ಟೆ ಬಳಿ ಕರೆತಂದು ಪೊಲೀಸರು ಸ್ಥಳ ಮಹಜರು ನಡೆಸಿದ ವೇಳೆ, ತಾನೊಬ್ಬಳೇ ಮಗನನ್ನು ತಾವರೆಕಟ್ಟೆ ನಿರ್ಜನ ಪ್ರದೇಶಕ್ಕೆ ಕರೆತಂದು ಕಟ್ಟಿಗೆಯಲ್ಲಿ ಬಡಿದು, ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದು, ಕಿರುಕುಳ ನೀಡುತ್ತಿದ್ದ ಮಗನನ್ನು ತಾಯಿ ಚಾಮುಂಡಿ ಸನ್ನಿಧಿಗೆ ಒಪ್ಪಿಸಿದ್ದೇನೆ ಎಂದು ಯಾವುದೇ ಪಶ್ಚಾತ್ತಾಪವಿಲ್ಲದೆ ಹೇಳಿದ್ದಾಗಿ ಮೂಲಗಳಿಂದ ತಿಳಿದುಬಂದಿದೆ.

ಸವಾಲಾಗಿದ್ದ ಪ್ರಕರಣ: ಚಾಮುಂಡಿ ಬೆಟ್ಟದ ತಪ್ಪಲಿನ ತಾವರೆಕಟ್ಟೆ ಪ್ರದೇಶದ ಖಾಲಿ ಜಾಗದಲ್ಲಿ ಏ.15ರಂದು ಕೊಲೆಯಾದ ಸ್ಥಿತಿಯಲ್ಲಿ ವ್ಯಕ್ತಿಯ ಶವ ಪತ್ತೆಯಾಗಿತ್ತು. ಸ್ಥಳ ಮಹಜರು ನಡೆಸಿದ ನಜರ್‌ಬಾದ್ ಪೊಲೀಸರಿಗೆ ಘಟನಾ ಸ್ಥಳದಲ್ಲಿ ಯಾವುದೇ ಸಾಕ್ಷಿ ಸಿಕ್ಕಿರಲಿಲ್ಲ. ವಿವಿಧ ಆಯಾಮದಲ್ಲಿ ತನಿಖೆ ನಡೆಸಿದರೂ ಕೊಲೆಯಾದ ವ್ಯಕ್ತಿಯ ಚಹರೆ ಹಾಗೂ ಹಂತಕರ ಬಗ್ಗೆ ಯಾವ ಸುಳಿವು ದೊರಕಲಿಲ್ಲ. ಪರಿಣಾಮ ಈ ಪ್ರಕರಣ ಭೇದಿಸುವುದು ಪೊಲೀಸ ರಿಗೆ ಸವಾಲಾಗಿ ಪರಿಣಮಿಸಿತ್ತು.

ಚಡ್ಡಿ ಸುಳಿವು: ಕೊಲೆಯಾದ ಹಿಂದಿನ ದಿನ ಆ ರಸ್ತೆಯಲ್ಲಿ ಓಡಾಡಿರುವವರ ಪತ್ತೆಗೆ ಮುಂದಾದ ಪೊಲೀಸರು, ಅಂಗಡಿಗಳು, ವೃತ್ತಗಳ ಬಳಿ ಅಳವಡಿಸಿರುವ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದ್ದರು. ಆ ಮಾರ್ಗದಲ್ಲಿನ ವಾಹನ ಸಂಚಾರ ದೃಶ್ಯಾವಳಿಯನ್ನೂ ಸೂಕ್ಷ್ಮವಾಗಿ ಗಮನಿಸಿದ್ದರು. ಈ ವೇಳೆ ಆಟೋ ರಿಕ್ಷಾದಲ್ಲಿ ಕೊಲೆಯಾದ ವ್ಯಕ್ತಿ ಧರಿಸಿದ್ದ ಚಡ್ಡಿಯನ್ನು ಹೋಲುವ ಚಡ್ಡಿ ಧರಿಸಿದ್ದ ವ್ಯಕ್ತಿ ಪ್ರಯಾಣಿಸಿದ್ದನ್ನು ಕಂಡರು. ಕೂಡಲೇ ಅದರ ಜಾಡು ಹಿಡಿದು ತನಿಖೆ ಮುಂದುವರೆಸಿದ ಪೊಲೀಸರು, ಮೊದಲಿಗೆ ಆಟೋರಿಕ್ಷಾ ಪತ್ತೆ ಮಾಡಿದರು. ಅದು ಜಯದೇವ ಆಸ್ಪತ್ರೆ ಬಳಿಯಿಂದ ಬಂದಿರುವ ಬಗ್ಗೆ ಮಾಹಿತಿ ಸಿಕ್ಕಿತು. ನಂತರ ಜಯದೇವ ಆಸ್ಪತ್ರೆ ಬಳಿಯ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದಾಗ ಅದೇ ಚಡ್ಡಿ ಧರಿಸಿದ್ದ ವ್ಯಕ್ತಿ ಹಾಗೂ ಮಹಿಳೆ ಓಡಾಡಿರುವ ದೃಶ್ಯ ಪತ್ತೆಯಾಯಿತು. ಕೂಡಲೇ ಕಾರ್ಯ ಪ್ರವೃತ್ತರಾದ ಪೊಲೀಸರು, ಆಟೋ ರಿಕ್ಷಾ ಚಾಲಕರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಿದರು.

ಮೂರು ಆಟೋ ಬದಲಿಸಿದ್ದರು: ಆ ಇಬ್ಬರು ಜಯದೇವ ಆಸ್ಪತ್ರೆಗೆ ಹೇಗೆ ಬಂದರು ಎಂದು ತನಿಖೆ ನಡೆಸುವ ವೇಳೆ ಮತ್ತೊಂದು ಮಾಹಿತಿ ಲಭ್ಯವಾಯಿತು. ರಿಂಗ್ ರಸ್ತೆಯಿಂದ ಆಟೋ ರಿಕ್ಷಾದಲ್ಲಿ ಜಯದೇವ ಆಸ್ಪತ್ರೆಗೆ ಬಂದ ಸುಳಿವು ಸಿಕ್ಕಿತು. ರಿಂಗ್ ರಸ್ತೆ ಬಳಿ ತೆರಳಿ ವಿಚಾರಿಸಿದಾಗ, ಕೆಸರೆ ಕುರಿಮಂಡಿಯಿಂದ ಆಟೋ ರಿಕ್ಷಾದಲ್ಲಿ ರಿಂಗ್ ರಸ್ತೆಗೆ ಬಂದಿರುವುದಾಗಿ ತಿಳಿಯಿತು. ಕುರಿಮಂಡಿ ಬಳಿ ವಿಚಾರಿಸಿದಾಗ ಕೊಲೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಲಭ್ಯವಾಯಿತು. ಆತ ಕುರಿಮಂಡಿ ಸಮೀಪದ ರಮೇಶ ಎಂಬುದು ಗೊತ್ತಾಯಿತು. ಬಳಿಕ ಆತನ ಮನೆಯಲ್ಲಿರುವವರ ಬಗ್ಗೆ ಮಾಹಿತಿ ಪಡೆದು ನಂತರ ರಮೇಶನ ತಾಯಿಯ ವಿಚಾರಣೆ ನಡೆಸಿದಾಗ ಪ್ರಕರಣ ಬಯಲಾಯಿತು.

200 ಸಿಸಿ ಕ್ಯಾಮರಾ ಪರಿಶೀಲನೆ: ಕೊಲೆ ಪ್ರಕರಣದ ತನಿಖೆ ವೇಳೆ ಪೊಲೀಸರು 200ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಪರಿಶೀಲಿಸಿದ್ದಾರೆ. ಮಗನ ಚಿತ್ರಹಿಂಸೆಯಿಂದ ಬೇಸತ್ತಿದ್ದ ಮಂಜುಳಾ, ಆತನ ಹತ್ಯೆ ಮಾಡಲು ನಿರ್ಧರಿಸಿ, ಕುರಿಮಂಡಿಯಿಂದ ರಿಂಗ್‌ರಸ್ತೆ, ಅಲ್ಲಿಂದ ಜಯದೇವ ಆಸ್ಪತ್ರೆ, ಅಲ್ಲಿಂದ ಚಾಮುಂಡಿ ಬೆಟ್ಟದ ತಪ್ಪಲಿಗೆ ಮೂರು ಆಟೋ ಬದಲಿಸಿದ್ದರಿಂದ ಇಷ್ಟೊಂದು ಸಂಖ್ಯೆಯ ಸಿಸಿಟಿವಿ ಕ್ಯಾಮರಾಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಬೇಕಾಯಿತು.

ಡಿಸಿಪಿಗಳಾದ ಡಾ.ಹರ್ಷಾ ಪ್ರಿಯಂವದ, ಸುಂದರಾಜ್ ಹಾಗೂ ಎಸಿಪಿ ಕೆ.ರಾಜೇಂದ್ರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಜರಬಾದ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಪಿ.ನಟರಾಜು, ಎಸ್.ಅನಿಲ್ ಕುಮಾರ್, ರಂಗಸ್ವಾಮಿ, ಸಿದ್ದೇಶ್.ಎಂ.ಎಲ್, ಸಿಬ್ಬಂದಿ ಪ್ರಕಾಶ್. ಬಿ.ವಿ., ಪುರುಶೋತ್ತಮ, ಸತೀಶ್ ಕುಮಾರ್ ಎಸ್. ಗೋಪಾಲ್, ಪ್ರವೀಣ್ ಕುಮಾರ್, ಸಂಜು, ಸಂದೇಶ ಕುಮಾರ್, ವೆಂಕಟೇಶ್, ಮೊಹಮದ್ ಇಸ್ಮಾಯಿಲ್, ಸುರೇಶ್, ಮಂಜುನಾಥ್, ಅಬ್ದುಲ್ ರೆಹಮಾನ್, ಶಿವಪ್ರಸಾದ್, ಚಿನ್ನಪ್ಪ, ಜಯಕುಮಾರ್, ಕೃಷ್ಣ, ಪರುಶುರಾಮ್, ಚೈತ್ರ, ನಂದಿನಿ ಹಾಗೂ ಸಿಡಿಆರ್ ಘಟಕದ ಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ತಾಪಮಾನ ಹೆಚ್ಚಳ: ಎಲ್ಲಾ ಆಸ್ಪತ್ರೆಗಳಲ್ಲಿ ಹೀಟ್ ಸ್ಟ್ರೋಕ್ ವಾರ್ಡ್ ಕಡ್ಡಾಯ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ತಾಪಮಾನ ತೀವ್ರ ಹೆಚ್ಚಾಗುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಪ್ರತ್ಯೇಕ 'ಹೀಟ್ ಸ್ಟ್ರೋಕ್ ವಾರ್ಡ್' ಆರಂಭಿಸುವಂತೆ ರಾಜ್ಯ ಸರ್ಕಾರ ಶುಕ್ರವಾರ ನಿರ್ದೇಶನ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯವು ಹೊರಡಿಸಿದ ಸುತ್ತೋಲೆಯಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳು ಎರಡು ಹಾಸಿಗೆಗಳ ಹೀಟ್ ಸ್ಟ್ರೋಕ್ ವಾರ್ಡ್, ತಾಲೂಕು ಆಸ್ಪತ್ರೆಗಳು ಐದು ಹಾಸಿಗೆಯ ಹೀಟ್ ಸ್ಟ್ರೋಕ್ ವಾರ್ಡ್ ಮತ್ತು ಜಿಲ್ಲಾ ಆಸ್ಪತ್ರೆಗಳು 10 ಹಾಸಿಗೆಗಳನ್ನು ಹೀಟ್ ಸ್ಟ್ರೋಕ್ ವಾರ್ಡ್ ಅನ್ನು ಮೀಸಲಿಡಬೇಕು ಎಂದು ಹೇಳಿದೆ. ಶಾಖ–ಸಂಬಂಧಿತ ಕಾಯಿಲೆಗಳ ರಾಷ್ಟ್ರೀಯ ಕ್ರಿಯಾ ಯೋಜನೆಯಡಿಯಲ್ಲಿ ಹೊರಡಿಸಲಾದ ಸುತ್ತೋಲೆಯಲ್ಲಿ, 2026 ಸೇರಿದಂತೆ, ಮಾರ್ಚ್ 1 ರಿಂದ ಜುಲೈ 31 ರವರೆಗೆ ಈ ಸೌಲಭ್ಯಗಳನ್ನು ಪ್ರತಿ ವರ್ಷವೂ ಕಾರ್ಯಗತಗೊಳಿಸಬೇಕು ಎಂದು ಹೇಳಲಾಗಿದೆ. ಎಲ್ಲಾ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಗೆ ಶಾಖ–ಸಂಬಂಧಿತ ಕಾಯಿಲೆಗಳ ನಿರ್ವಹಣೆಗೆ ತರಬೇತಿ ಪಡೆಯಲು ಸೂಚಿಸಲಾಗಿದೆ. ಎಲ್ಲಾ ಆರೋಗ್ಯ ಸಂಸ್ಥೆಗಳು ಓಆರ್‌ಎಸ್ ಕಾರ್ನರ್‌ಗಳನ್ನು ಸ್ಥಾಪಿಸಲು ಮತ್ತು ಫ್ಯಾನ್‌ಗಳು, ಐಸ್ ಕ್ಯೂಬ್‌ಗಳು ಹಾಗೂ ಥರ್ಮಾಮೀಟರ್‌ಗಳಂತಹ ಅಗತ್ಯ ಸೌಲಭ್ಯಗಳೊಂದಿಗೆ ಹೀಟ್ ಸ್ಟ್ರೋಕ್ ನಿರ್ವಹಣಾ ಕೊಠಡಿಗಳನ್ನು ಸಜ್ಜುಗೊಳಿಸಲು ಸಹ ನಿರ್ದೇಶಿಸಿದೆ.

ಡಾ.ರಾಜ್ ಜನ್ಮದಿನ: ಸ್ವಯಂ ಪ್ರೇರಿತ ರಕ್ತದಾನ



ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಮೈಸೂರು, ಏ.24(ಎಂಕೆ)– ವರನಟ ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಡಾ.ರಾಜಕುಮಾರ್ ಅಭಿಮಾನಿ ಬಳಗ ಹಾಗೂ ಜೀವದಾರ ರಕ್ತ ನಿಧಿ ಕೇಂದ್ರದ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಅಭಿಮಾನಿಗಳ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಅಭಿಮಾನ ಮೆರೆದರು. ಇದಕ್ಕೂ ಮುನ್ನ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಸರಳ, ಸಜ್ಜನ, ನಿಷ್ಠಾವಂತ, ಪ್ರಾಮಾಣಿಕ ಕಲಾವಿದ ಹಾಗೂ ಎಲ್ಲ ಸಮುದಾಯದ ಜನರ ಪ್ರೀತಿಗೆ ಪಾತ್ರರಾದ ಡಾ.ರಾಜಕುಮಾರ ಅವರ ವ್ಯಕ್ತಿತ್ವ ಎಲ್ಲರಿಗೂ ಮಾದರಿ ಎಂದರು.

ನಟನೆಯ ಮೂಲಕ ಮನೆ ಮಾತಾಗಿ, ಕೋಟ್ಯಾಂತರ ಅಭಿಮಾನಿ ದೇವರುಗಳ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿರುವ ಡಾ.ರಾಜಕುಮಾರ್, ವೃತ್ತಿ ಬದುಕು ನಮಗೆಲ್ಲರಿಗೂ ಪ್ರೇರಣೆ. ಅವರ ಜೀವನದ ಆದರ್ಶಗಳನ್ನು ತಿಳಿದು ನಮ್ಮ ಜೀವನದಲ್ಲೂ ಅನುಕರಣೆ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಬಿಜೆಪಿ ಮುಖಂಡ ಜೋಗಿ ಮಂಜು, ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್, ಪ್ರಭು, ಕೀರ್ತಿ, ಕಿಶೋರ್ ಮತ್ತಿತರರಿದ್ದರು.

ಡಾ.ರಾಜ್‌ಕುಮಾರ್ ಪ್ರತಿಮೆಗೆ ಮಾಲಾರ್ಪಣೆ



ನಟ ಸಾರ್ವಭೌಮ ಡಾ.ರಾಜ್‌ಕುಮಾರ್ ಅವರ ಜನ್ಮದಿನದ ಪ್ರಯುಕ್ತ ಶುಕ್ರವಾರ ಚಾಮರಾಜ ಒಡೆಯರ್ ವೃತ್ತದ ಬಳಿಯ ಉದ್ಯಾನವನದಲ್ಲಿರುವ ಡಾ.ರಾಜ್‌ಕುಮಾರ್ ಅವರ ಪ್ರತಿಮೆಗೆ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮತ್ತಿತರರು ಉಪಸ್ಥಿತರಿದ್ದರು.

ವರನಟನಿಗೆ ಪುಷ್ಪನಮನ



ಪದ್ಮಭೂಷಣ ಡಾ.ರಾಜಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಚಾಮರಾಜ ಒಡೆಯರ್ ವೃತ್ತದ ಬಳಿಯ ರಾಜ್‌ಕುಮಾರ್ ಉದ್ಯಾನವನದಲ್ಲಿರುವ ಅವರ ಪ್ರತಿಮೆಗೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಹರ್ಷಿತ್, ರಾಜು, ಧನಂಜಯ ಮತ್ತಿತರರು ಮಾಲಾರ್ಪಣೆ ಮಾಡಿದರು.

ಕಾಂಗ್ರೆಸ್ ಮೈಸೂರು ನಗರ ಓಬಿಸಿ ಘಟಕದಿಂದ ಡಾ.ರಾಜ್‌ಕುಮಾರ್ ಹುಟ್ಟುಹಬ್ಬ



ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ವತಿಯಿಂದ ಡಾ.ರಾಜ್‌ಕುಮಾರ್ ಅವರ ಜನ್ಮ ದಿನ ಆಚರಿಸಲಾಯಿತು.

ಮೈಸೂರು, ಏ.24– ಕನ್ನಡ ಚಿತ್ರರಂಗದ ವರನಟ ಡಾ.ರಾಜ್‌ಕುಮಾರ್ ಅವರ ಜನ್ಮ ದಿನವನ್ನು ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ(ಓಬಿಸಿ) ಘಟಕದ ವತಿಯಿಂದ ಆಚರಿಸಲಾಯಿತು.

ನಗರದ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿ ಅವರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ಸಿಹಿ ವಿತರಿಸುವುದರೊಂದಿಗೆ ಅವರ ಅಗಾಧ ಪ್ರತಿಭೆ, ಸರಳತೆ, ನಾಡಿನ ಮೇಲಿನ ಅಪಾರ ಕಾಳಜಿಯನ್ನು ಸ್ಮರಿಸಲಾಯಿತು.

ಈ ವೇಳೆ ಘಟಕ ಅಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಡಾ.ರಾಜ್‌ಕುಮಾರ್ ಅವರು 200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿರುವ ಮಹಾನ್ ನಟರು. ಚೊಚ್ಚಲ ಚಿತ್ರ 'ಬೇಡರ ಕಣ್ಣಪ್ಪ' ಅವರ ಕಲಾನೈಪುಣ್ಯತೆಯನ್ನು ಅನಾವರಣಗೊಳಿಸಿತು. ನಂತರದಲ್ಲಿ ಬಂಗಾರದ ಮನುಷ್ಯ, ಕಸ್ತೂರಿ ನಿವಾಸ, ಮಯೂರ, ಜೀವನ ಚೈತ್ರ ಸೇರಿದಂತೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಚಿತ್ರಗಳಲ್ಲಿ ಅಭಿನಯಿಸಿ, ಕನ್ನಡ ಚಿತ್ರರಂಗವನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತೆ ಮಾಡಿದರು ಎಂದು ಬಣ್ಣಿಸಿದರು.

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮಭೂಷಣ ಸೇರಿದಂತೆ ಅನೇಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದ ಡಾ.ರಾಜ್‌ಕುಮಾರ್ ಅವರು ನಟನೆಗಷ್ಟೇ ಸೀಮಿತವಾಗದೆ ಹಿನ್ನೆಲೆ ಗಾಯಕರಾಗಿಯೂ ಅಪಾರ ಸಾಧನೆ ಮಾಡಿದ್ದಾರೆ. ದೈವ ಭಕ್ತರಾಗಿದ್ದ ಅವರು ಹಲವು ಭಕ್ತಿ ಗೀತೆಗಳನ್ನು ಹಾಡಿದ್ದಾರೆ. ಮಹಾನ್ ಪ್ರತಿಭಾನ್ವಿತರಾಗಿದ್ದ ಡಾ.ರಾಜ್‌ಕುಮಾರ್ ನಮ್ಮ ನಾಡಿನ ಹೆಮ್ಮೆ ಎಂದರು.

ಈ ಸಂದರ್ಭದಲ್ಲಿ ಘಟಕದ ರಾಜ್ಯ ಉಪಾಧ್ಯಕ್ಷ ಶ್ರೀಕಾಂತ್, ನಗರದ ಘಟಕದ ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಸಂಚಾಲಕ ಲಕ್ಷ್ಮಿ ನಾರಾಯಣ್, ಸಂಘಟನಾ ಕಾರ್ಯದರ್ಶಿ ಶ್ರೀಕಾಂತ್ ಯಾದವ್, ಕಾರ್ಯದರ್ಶಿ ರವಿ ಕುಂಬಾರ, ಸೌಮ್ಯ, ರಾಜು ರೆಡ್ಡಿ, ಕೆ.ಸಿ.ರಾಜ್ ಪ್ರಕಾಶ್, ಸ್ವಾಮಿ ಎನ್.ಬೋವಿ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಹಾಗೂ ರಾಜ್‌ಕುಮಾರ್ ಅಭಿಮಾನಿಗಳು ಉಪಸ್ಥಿತರಿದ್ದರು.

ಚೇಸಿಂಗ್‌ನಲ್ಲಿ ಮಿಂಚಿದ ಕೊಹ್ಲಿ–ಪಡಿಕ್ಕಲ್; ಆರ್‌ಸಿಬಿಗೆ 5 ವಿಕೆಟ್ ಗೆಲುವು

ಬೆಂಗಳೂರು, ಏ.24(ವಿವಿಹೆಚ್)– ವಿರಾಟ್ ಕೊಹ್ಲಿ, ದೇವ್‌ದತ್ ಪಡಿಕ್ಕಲ್ ಅವರ ಕ್ಲಾಸ್ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಟೈಟನ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್–2026ರ 34ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜಿಟಿ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು.

ಈ ಹೈ–ಸ್ಕೋರಿಂಗ್ ಗೇಮ್‌ನಲ್ಲಿ ವಿರಾಟ್ ಕೊಹ್ಲಿ ಹಾಗೂ ದೇವ್‌ದತ್ ಪಡಿಕ್ಕಲ್‌ರ ಶತಕದ ಜೊತೆಯಾಟದ ಬಲದಿಂದ ಜಿಟಿ ನೀಡಿದ ಸ್ಪರ್ಧಾತ್ಮಕ ಮೊತ್ತವನ್ನು ಆರ್‌ಸಿಬಿ ಸುಲಭವಾಗಿ ಬೆನ್ನತ್ತಿ ಗೆದ್ದು ಬೀಗಿತು.

ಫಿಲ್ ಸಾಲ್ಟ್ ಅನುಪಸ್ಥಿತಿಯಲ್ಲಿ ವಿರಾಟ್ ಕೊಹ್ಲಿಯೊಂದಿಗೆ ಇನ್ನಿಂಗ್ಸ್ ಆರಂಭಿಸಿದ ಜಾಕೋಬ್ ಬೆಥೆಲ್ 14(10) ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಬಳಿಕ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ದೇವ್‌ದತ್ ಪಡಿಕ್ಕಲ್ ಏಕಾಏಕಿ ಜಿಟಿ ಬೌಲರ್‌ಗಳನ್ನು ಬೆಂಡೆತ್ತಿದರು. ಪಡಿಕ್ಕಲ್ 27 ಎಸೆತಗಳಲ್ಲಿ 2 ಬೌಂಡರಿ, 6 ಸಿಕ್ಸರ್ ಸಹಿತ 57 ರನ್ ಚಚ್ಚಿದರೆ, ಕೊಹ್ಲಿ 44 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಸಹಿತ 81 ರನ್ ಗಳಿಸಿದರು.

ನಂತರ ಕ್ರೀಸ್‌ಗಿಳಿದ ನಾಯಕ ರಜತ್ ಪಾಟಿದರ್ 8(5), ಜಿತೇಶ್ ಶರ್ಮಾ 19(6) ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿದರು. ಕೊನೆಯಲ್ಲಿ ಒಂದಾದ ಟಿಮ್ ಡೇವಿಡ್ 10(9) ಹಾಗೂ ಕೃನಾಲ್ ಪಾಂಡ್ಯ 23(12) ರನ್ ಗಳಿಸಿ ಅಜೇಯರಾಗಿ ಉಳಿದು ಪಂದ್ಯ ಗೆಲ್ಲಿಸಿಕೊಟ್ಟರು. ಆ ಮೂಲಕ ಆರ್‌ಸಿಬಿ 18.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 206 ರನ್ ಕಲೆಹಾಕಿತು.

ಜಿಟಿ ಪರ ರಶೀದ್ ಖಾನ್ 2 ವಿಕೆಟ್, ಮೊಹಮ್ಮದ್ ಸಿರಾಜ್, ಜಾಸನ್ ಹೋಲ್ಡರ್ ಹಾಗೂ ಮನವ್ ಸುತಾರ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ ಸಾಯ್ ಸುದರ್ಶನ್ ಅವರ ಆಕರ್ಷಕ ಶತಕದಾಟದ ನೆರವಿನಿಂದ ಬೃಹತ್ ಮೊತ್ತ ಪೇರಿಸಿತು. ನಾಯಕ ಶುಭ್‌ಮನ್ ಗಿಲ್ ಹಾಗೂ ಸಾಯ್ ಸುದರ್ಶನ್ 128 ರನ್‌ಗಳ ಜೊತೆಯಾಟ ನೀಡುವ ಮೂಲಕ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಗಿಲ್ 24 ಎಸೆತಗಳಲ್ಲಿ 32 ರನ್ ಗಳಿಸಿದರೆ, ಸುದರ್ಶನ್ 58 ಎಸೆತಗಳಲ್ಲಿ 11 ಬೌಂಡರಿ, 5 ಸಿಕ್ಸರ್ ಸಹಿತ 100 ರನ್ ಗಳಿಸಿ ಔಟಾದರು.

ಬಳಿಕ ಬಂದ ಜೋಸ್ ಬಟ್ಲರ್ 25(16), ವಾಷಿಂಗ್ಟನ್ ಸುಂದರ್ ಅಜೇಯ 19(12) ಹಾಗೂ ಜಾಸನ್ ಹೋಲ್ಡರ್ ಅಜೇಯ 23(10) ರನ್ ಗಳಿಸಿದರು.



ಕೊಹ್ಲಿ–ಪಡಿಕ್ಕಲ್ ಜುಗಲ್ ಬಂದಿ.

ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್, ಜೋಶ್ ಹೇಜಲ್ವುಡ್ ಹಾಗೂ ಸುಯೇಶ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದು ಗಮನಸೆಳೆದರು.

ಎಎಪಿಗೆ ಬಿಗ್ ಶಾಕ್!

ರಾಘವ್ ಚಡ್ಡಾ ಸೇರಿ 7 ಸಂಸದರು ಬಿಜೆಪಿ ಸೇರ್ಪಡೆ; ಸರ್ಕಾರಕ್ಕೆ ಮತ್ತಷ್ಟು ಬಲ!



ನವದೆಹಲಿ: ರಾಜ್ಯಸಭಾ ಸಂಸದರಾದ ರಾಘವ್ ಚಡ್ಡಾ ಅಶೋಕ್ ಮಿತ್ತಲ್ ಮತ್ತು ಸಂದೀಪ್ ಪಾಠಕ್ ಶುಕ್ರವಾರ ಎಎಪಿ ತೊರೆದು ಬಿಜೆಪಿ ಸೇರಿದ್ದಾರೆ.

ಈ ಬೆಳವಣಿಗೆ ಯಿಂದ ಕೇಜ್ರಿವಾಲ್‌ಗೆ ದೊಡ್ಡ ಆಘಾತ ಉಂಟಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಅವರೊಂದಿಗೆ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ರಾಘವ್ ಚಡ್ಡಾ, ಆಮ್ ಆದ್ಮಿ ಪಕ್ಷದಿಂದ 7 ಸಂಸದರು ಬಿಜೆಪಿಗೆ ಸೇರ್ಪಡೆಯಾಗಲಿದ್ದೇವೆ. ರಾಜ್ಯಸಭೆಯಲ್ಲಿ ಎಎಪಿಗೆ ಸೇರಿದ 2/3 ನೇ ಸದಸ್ಯರಾದ ನಾವು ಭಾರತದ ಸಂವಿಧಾನದ ನಿಬಂಧನೆಗಳನ್ನು ಚಲಾಯಿಸಲು ಮತ್ತು ಬಿಜೆಪಿಯೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿದ್ದೇವೆ ಎಂದು ಹೇಳಿದರು.

ರಾಘವ್ ಚಡ್ಡಾ, ಅಶೋಕ್ ಕುಮಾರ್ ಮಿತ್ತಲ್ ಮತ್ತು ಸಂದೀಪ್ ಪಾಠಕ್ ಅವರು 2022 ರಿಂದ ಆಮ್ ಆದ್ಮಿ ಪಕ್ಷದಿಂದ (AAP) ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಾಘವ್ ಚಡ್ಡಾ ಅವರು, ನಾನು ನನ್ನ ರಕ್ತ ಮತ್ತು ಬೆವರಿನಿಂದ ಪೋಷಿಸಿ ನನ್ನ ಯೌವನದ 15 ವರ್ಷಗಳನ್ನು ನೀಡಿದ ಆಮ್ ಆದ್ಮಿ ಪಕ್ಷ ಈಗ ಅದರ ತತ್ವಗಳು, ಮೌಲ್ಯಗಳು ಮತ್ತು ಮೂಲ ನೈತಿಕತೆಗಳಿಂದ ಸಂಪೂರ್ಣವಾಗಿ ವಿಮುಖವಾಗಿದೆ. ಪಕ್ಷ ಇನ್ನು ಮುಂದೆ ದೇಶಕ್ಕಾಗಿ ಅಥವಾ ರಾಷ್ಟ್ರೀಯ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿಲ್ಲ, ಆದರೆ ವೈಯಕ್ತಿಕ ಲಾಭಕ್ಕಾಗಿ ಕೆಲಸ ಮಾಡುತ್ತಿದೆ. ನಿಮ್ಮಲ್ಲಿ ಹಲವರು ಕಳೆದ ಕೆಲವು ವರ್ಷಗಳಿಂದ ಇದನ್ನು ನನಗೆ ಹೇಳುತ್ತಿದ್ದೀರಿ ಮತ್ತು ನಾನು ತಪ್ಪು ಪಕ್ಷದಲ್ಲಿದ್ದ ಸರಿಯಾದ ವ್ಯಕ್ತಿ ಎಂದು ವೈಯಕ್ತಿಕವಾಗಿ ಭಾವಿಸಿದ್ದೇನೆ. ಆದ್ದರಿಂದ, ಇಂದು ನಾನು ಆಮ್ ಆದ್ಮಿ ಪಕ್ಷದಿಂದ ದೂರವಿದ್ದು ಜನರ ಬಳಿಗೆ ಹೋಗುತ್ತಿದ್ದೇನೆ ಎಂದು ರಾಘವ್ ಚಡ್ಡಾ ಘೋಷಿಸಿದ್ದಾರೆ.

ನಯನಕುಮಾರ್ಸ್ ಆಸ್ಪತ್ರೆಯಲ್ಲಿ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ



ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಡಾ.ರಾಜ್‌ಕುಮಾರ್ ಜನ್ಮ ದಿನವನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಹಾಗೂ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ದೀಪ ಬೆಳಗಿದರು. ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್, ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್ ಮತ್ತಿತರರಿದ್ದರು.

ಏ.27ಕ್ಕೆ 'ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಕರಿಯರ್ ಆಯ್ಕೆ' ಸಂವಾದ

ಮೈಸೂರು, ಏ.24– ಎಸ್‌ಎಸ್‌ಎಲ್‌ಸಿ ನಂತರ ಮುಂದೇನು ಎಂಬ ಗೊಂದಲಕ್ಕೀಡಾಗದೆ ಸೂಕ್ತ ಆಯ್ಕೆಗೆ ನೆರವಾಗುವ ನಿಟ್ಟಿನಲ್ಲಿ ಮೈಸೂರಿನ ನೈಪುಣ್ಯ ಪಿಯು ಸಂಸ್ಥೆಯಿಂದ 'ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಮತ್ತು ಕರಿಯರ್ ಆಯ್ಕೆ' ಕುರಿತ ಸಂವಾದ ಕಾರ್ಯಕ್ರಮವನ್ನು ಏ.26ರಂದು ಬೆಳಗ್ಗೆ 10ಕ್ಕೆ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ನೈಪುಣ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ರಘು ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವೃತ್ತಿಪರ ಮಾರ್ಗದರ್ಶಕ ಹಾಗೂ ಆಪ್ತ ಸಮಾಲೋಚಕ ಪ್ರಶಾಂತ್ ಕುಮಾರ್ ನಾಯಕ್ ಹಾಗೂ ಶಿಕ್ಷಣ ತಜ್ಞ ಪ್ರೊ.ಗುರುರಾಜ್ ಶ್ರೀಧರ್ ಭಾಗವಹಿಸಲಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಂಡು ಭವಿಷ್ಯದಲ್ಲಿ ಶಿಕ್ಷಣದ ಆಯ್ಕೆ ಹೇಗಿರಬೇಕೆಂಬ ಸಲಹೆ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ. ಹಳೆಯ ಮಾದರಿಯಲ್ಲೇ ವಿಷಯಗಳನ್ನು ಆಯ್ಕೆ ಮಾಡಬೇಕೇ ಅಥವಾ ಎಐ ತಂತ್ರಜ್ಞಾನದೊಂದಿಗೆ ಪೂರಕವಾದ ವೃತ್ತಿ ಮಾರ್ಗವನ್ನು ಆರಿಸಬೇಕೇ ಎಂಬ ವಿದ್ಯಾರ್ಥಿಗಳಲ್ಲಿನ ಗೊಂದಲಕ್ಕೆ ಪರಿಹಾರ ಸೂಚಿಸಲಿದ್ದಾರೆ ಎಂದು ಸಂಸ್ಥೆಯ ಮಾಧ್ಯಮ ಸಂಯೋಜಕಿ ಶೈಲಾ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಅಧ್ಯಯನ ಶಿಬಿರ



ಸುತ್ತೂರು, ಏ. 24– ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 21ರಿಂದ 25ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಮಠಾಧಿಪತಿಗಳು, ಸಾಧಕರು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳಿಗಾಗಿ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರುಗಳಾದ ಚುಂಚನಹಳ್ಳಿ ಶ್ರೀಗಳು (9945494612), ಕೆ.ಪಿ. ಬಸವರಾಜಪ್ಪ (9880596359), ಎಸ್. ನಂದೀಶ್ (9379682611), ಬಿ. ಮಾದಪ್ಪ (9880506091), ಗವಿಯಪ್ಪದೇವರು (9845541667) ಅವರನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ.

ಪ್ರಗತಿ ನಿಸರ್ಗ ಯೋಜನೆಗೆ ಗುದ್ದಲಿ ಪೂಜೆ



ಸುಮಂಯಾ ಪ್ರಾಪರ್ಟೀಸ್‌ನ 10ನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿ 'ಪ್ರಗತಿ ನಿಸರ್ಗ' ಯೋಜನೆಗೆ ಗುದ್ದಲಿ ಪೂಜೆ ನೆರವೇರಿತು. ಈ ವೇಳೆ ಅಶ್ವಿನಿ ರಿಯಲ್ ಎಸ್ಟೇಟ್ ಸಂಸ್ಥಾಪಕ ಕೆ.ರಾಮಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುಧಿ ಎಸ್ ಶೆಟ್ಟಿ, ಶ್ರೀಮತಿ ವಿಶಾಖಾ ಸಿ ಹೆಗಡೆ, ಯುನೈಟೆಡ್ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರರಾದ ಯಡಲಂ ಹರಿಕಿಶೋರ್, ಮಂಜುನಾಥ್ ರಾಜು.ಜಿ ಉಪಸ್ಥಿತರಿದ್ದರು.

ಪ್ರಧಾನಿ ಮೋದಿ 'ಭಯೋತ್ಪಾದಕ' ಎಂಬ ಖರ್ಗೆ ಹೇಳಿಕೆ ಖಂಡಿಸಿ ಮೈಸೂರಲ್ಲಿ ಬಿಜೆಪಿ ಯುವ ಮೋರ್ಚಾ ಪ್ರತಿಭಟನೆ



ಮೈಸೂರಿನ ಗಾಂಧಿ ವೃತ್ತದಲ್ಲಿ ಮೈಸೂರು ನಗರ ಯುವ ಮೋರ್ಚಾ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.24(ಎಂಕೆ)– ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಭಯೋತ್ಪಾದಕ' ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವಹೇಳನಕಾರಿ ಹೇಳಿಕೆ ಖಂಡಿಸಿ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ಬಹಿರಂಗ ಕ್ಷಮೆಯಾಚಿಸುವಂತೆ ಆಗ್ರಹಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕಾಂಗ್ರೆಸ್‌ನ ಗುಣವೇ ಭಯೋತ್ಪಾದಕ ಗುಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಯವರ ಬಗ್ಗೆ ಏಕವಚನದಲ್ಲಿ ಮಾತನಾಡಿದರೆ, ಅವರ ಅಧ್ಯಕ್ಷರು ಪ್ರಧಾನಿಗಳನ್ನು ಭಯೋತ್ಪಾದಕ ಎಂದು ಕರೆಯುವ ಮೂಲಕ ದೇಶದಲ್ಲಿ ಯಾರೆಲ್ಲಾ ಬಿಜೆಪಿಗೆ ಮತ ನೀಡಿದ್ದಾರೋ ಅವರನ್ನೆಲ್ಲಾ ಅವಮಾನಿಸುವ ಕೆಲಸ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೊಂದು ಕಾರ್ಯಕ್ರಮದಲ್ಲಿ ಖರ್ಗೆಯವರು, ನಮಾಜ್ ಟೈಂನಲ್ಲಿ ಹಾವು ಬಂದರೆ ಹೊಡೆದಾಕುವ ರೀತಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಬಂದರೆ ಹೊಡೆದಾಕಿ ಎಂದು ಕರೆ ಕೊಟ್ಟಿದ್ದರು. ಸಾಯಿಸಿ, ಕೊಲೆ ಮಾಡಿ, ಕಲ್ಲಿನಲ್ಲಿ ಹೊಡೆಯಿರಿ ಎನ್ನುವ ಮೂಲಕ ಭಯೋತ್ಪಾದಕತೆಗೆ ಅವರೇ ಉತ್ತೇಜನ ನೀಡುತ್ತಿದ್ದಾರೆ. ಹಾಗಾಗಿ ಭಯೋತ್ಪಾದಕ ಸಂಸ್ಕೃತಿ ಕಾಂಗ್ರೆಸ್‌ನ ಹುಟ್ಟುಗುಣವೇ ಹೊರತು ಬಿಜೆಪಿಗೂ, ಭಯೋತ್ಪಾದಕತೆಗೂ ಯಾವುದೇ ಸಂಬಂಧವಿಲ್ಲ. ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುವ ಖರ್ಗೆಯವರು ಮತಿಹೀನರಾದಂತೆ ಕಾಣುತ್ತಿದೆ. ಅಲ್ಲದೆ ಅವಹೇಳನಕಾರಿ ಹೇಳಿಕೆ ನೀಡಿರುವ ಮಲ್ಲಿಕಾರ್ಜುನ ಖರ್ಗೆಯವರು ಕೂಡಲೇ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್‌ಗೌಡ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ ಎಂಬ ಖರ್ಗೆ ಹೇಳಿಕೆ ಖಂಡನೀಯ. ಬಹಿರಂಗವಾಗಿ ಖರ್ಗೆಯವರು ಕ್ಷಮೆ ಕೇಳದಿದ್ದರೆ ವ್ಯಾಪಕ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಗೋಪಾಲ್ ರಾವ್, ಜೋಗಿ ಮಂಜು, ಲೋಹಿತ್, ವಾಣೀಶ್, ಕೆ.ಎಂ.ನಿಶಾಂತ್, ರಾಕೇಶ್ ಭಟ್, ಕೆಂಚ ಮಧು, ಎಂ.ಎನ್.ಧನುಷ್, ಪ್ರದೀಪ್ ಕುಮಾರ್, ಚೇತನ್, ರವಿ, ಚಂದನ್, ಉಮೇಶ್, ಪುನೀತ್, ಸಾಗರ್ ಮತ್ತಿತರರಿದ್ದರು.

ಇರಾನ್ ವಿರುದ್ಧ ಮತ್ತೆ ಹೊಸದಾಗಿ ಯುದ್ಧ ಆರಂಭಿಸಲು ಇಸ್ರೇಲ್ ತಯಾರಿ!



ಜೆರುಸಲೆಂ: ಇರಾನ್ ವಿರುದ್ಧ ಮಿಲಿಟರಿ ಕ್ರಮವನ್ನು ಹೆಚ್ಚಿಸಲು ಇಸ್ರೇಲ್ ಸಿದ್ಧವಾಗಿದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಆದರೆ ಮುಂದಿನ ಕಾರ್ಯಾಚರಣೆ ಮುಂದುವರಿಸಲು ಅಮೆರಿಕದ ಒಪ್ಪಿಗೆಗಾಗಿ ಕಾಯುತ್ತಿದೆ ಎಂದು ಜೆರುಸಲೆಂ ಪೋಸ್ಟ್ ವರದಿಯಲ್ಲಿ ಹೇಳಲಾಗಿದೆ.

ಗುರುವಾರ ನಡೆದ ಭದ್ರತಾ ಮೌಲ್ಯಮಾಪನದ ಸಂದರ್ಭದಲ್ಲಿ, ಇಸ್ರೇಲ್ ಮಿಲಿಟರಿ ವಿಸ್ತೃತ ಕಾರ್ಯಾಚರಣೆಗಳಿಗೆ ಸಜ್ಜಾಗಿದೆ. ಇರಾನ್ ವಿರುದ್ಧ ಹೊಸದಾದ ಯುದ್ಧ ನಡೆಸಲು ಇಸ್ರೇಲ್ ಸಿದ್ಧವಾಗಿದೆ ಎಂದು ಅವರು ಹೇಳಿದರು.

ಇಸ್ರೇಲ್ ರಕ್ಷಣಾ ಪಡೆಗಳು ಖಮೇನಿ ಕುಟುಂಬ ನಿರ್ಮೂಲನೆಯನ್ನು ಪೂರ್ಣಗೊಳಿಸಲು ಅಮೆರಿಕದ ಒಪ್ಪಿಗೆಗಾಗಿ ಕಾಯುತ್ತಿವೆ ಎಂದು ಜೆರುಸಲೆಂ ಪೋಸ್ಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆಕ್ರಮಣಕಾರಿ ಮತ್ತು ರಕ್ಷಣಾತ್ಮಕ ಕ್ರಮದ ಸಿದ್ಧತೆ ಕುರಿತು ಮಾಹಿತಿ ನೀಡಲಾಗಿದ್ದು, IDF ರಕ್ಷಣೆ ಮತ್ತು ದಾಳಿ ಎರಡಕ್ಕೂ ಸಿದ್ಧವಾಗಿದ್ದು, ಗುರಿಗಳನ್ನು ಗುರುತಿಸಲಾಗಿದೆ. ಇರಾನ್‌ನ ಆಂತರಿಕ ಭದ್ರತೆ ಕುರಿತು ಪ್ರತಿಕ್ರಿಯಿಸಿದ ಕ್ಯಾಟ್ಜ್, ಇರಾನ್‌ನಲ್ಲಿನ ಭಯೋತ್ಪಾದಕ ಆಡಳಿತ ಮುಖ್ಯವಾಗಿ ಕ್ರಾಂತಿಕಾರಿ ಗಾರ್ಡ್‌ಗಳು ಜನರ ಆಂತರಿಕ ದಮನದಲ್ಲಿ ಪರಿಣತಿ ಹೊಂದಿದೆ ಎಂದು ಅವರು ಹೇಳಿದ್ದಾರೆ.

ಇರಾನ್ ಆರ್ಥಿಕ ದಬ್ಬಾಳಿಕೆ ನಡೆಸುತ್ತಿದೆ ಎಂದು ಅವರು ಆರೋಪಿಸಿದ್ದು, ಜಾಗತಿಕ ತೈಲ ಬೆಲೆಗಳನ್ನು ಹೆಚ್ಚಿಸುವ ಬೆದರಿಕೆಯೊಂದಿಗೆ ಇಂಧನ ಸುಲಿಗೆ ಮಾಡುತ್ತಿದೆ ಎಂದು ಕಿಡಿಕಾರುತ್ತಿದ್ದಾರೆ.

PUBLIC NOTICE

The Public at large is hereby notified that my client is intending to purchase the below mentioned Schedule Property for a valuable consideration from its absolute owner Sri.Shivakumara S/o Sri.Beeregowda, residing at Ningegowdanahundi Village, Kasaba Hobli, T.Narasipura Taluk, Mysore District, (hereinafter referred as "Owner"). The Owner claim that, his right is free from all encumbrances, charges, claims etc., of whatsoever nature and that, he has a clear and marketable title in respect of the Schedule Property. All or any persons including any Banks, Financial Institutions or any other party or persons, having any valid and legal claim, right, title, demand or interest by virtue of any sale, gift, lease, tenancy, license, exchange, partition, mortgage, charge, lien, inheritance, succession, trust, maintenance, possession, easement, power of attorney, agreement, lis-pendence, stay order, attachment, decree, specific performance or otherwise or any other right of whatsoever nature are required / called upon to convey their objection/s in writing at the address mentioned below during the working hours, with the documentary proof/s in original within Seven (07) days from issuance of this public notice. Failing which it will be presumed by my client that (a) there are no Power of Attorney holders, (b) there are no claim/s, lein/s, objection/s, mortgages, charges, etc., (c) if any, the same is / are deemed to have been waived and abandoned in respect of the Schedule Property and my client will be obliged to proceed with the execution and Registration of the Sale Agreement and Absolute Sale Deed as if there are no valid claim/s, lien/s, objection/s, mortgages, charge/s, etc., subsisting against the Schedule Property.

SCHEDULE

All that piece and parcel of Land bearing Survey No.245/5 Measuring 01-1¼ Guntas, situated at Tumbala Village, Kasaba Hobli, T.Narasipura Taluk, Mysore District, on the basis of title deeds and other documents, encumbrance certificates, bounded on. East by : La. Sa No.246, West by : La. Sa No.248, North by : Block 2, South by : La. Hi 2

Sd/- Mohana.C
Advocate. KAR/1640/98
#390/E, 1st Flor, 4th Main, Maruti Temple Road, Kuvempunagr, Mysore-57023. Mob: 9448448407
Date: 24/04/2026, Palce: Mysore

ಮೈಸೂರು ಮಿತ್ರ ಶನಿವಾರ 25 ಏಪ್ರಿಲ್ 2026

ಬಿಸಿಲ ಧಗೆಗೆ ನಲುಗುತ್ತಿರುವ ಕಾವೇರಿ ತವರು

ಮಡಿಕೇರಿ, ಏ.24–ಪ್ರಕೃತಿಯ ರಮಣೀಯ ತಾಣವಾಗಿರುವ ಕಾವೇರಿ ತವರು ಜಿಲ್ಲೆ ಕೊಡಗು ಈಗ ಬಿಸಿಲ ಧಗೆಗೆ ನಲುಗುತ್ತಿರುವುದರಿಂದ ಜಿಲ್ಲೆಗೆ ಆಗಮಿಸುವ ಪ್ರವಾಸಿಗರ ಸಂಖ್ಯೆಯಲ್ಲೂ ಭಾರಿ ಇಳಿಮುಖಗೊಂಡಿದ್ದು, ಪ್ರವಾಸೋದ್ಯಮದ ಮೇಲೂ ವ್ಯಾಪಕ ಪರಿಣಾಮ ಬೀರುತ್ತಿದೆ.


ಜಿಲ್ಲೆಯ ವಿವಿಧ ಭಾಗಗಳಲ್ಲಿ 33ರಿಂದ 35 ಡಿಗ್ರಿವರೆಗೂ ತಾಪಮಾನ ಏರಿಕೆ ಆಗಿರುವ ಬಗ್ಗೆ ವರದಿಯಾಗಿದ್ದು, ಜೀವ ಸಂಕುಲದ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ. ಆಗಸದ ಕಡೆ ಮುಖ ಮಾಡಿ ರೈತಾಪಿ ವರ್ಗ ಮಳೆ ಹನಿಗಾಗಿ ಕಾಯುವಂತಾಗಿದೆ. ನದಿ, ಜರಿ, ತೊರೆಗಳು ಮತ್ತು ಕುಡಿಯುವ ನೀರಿನ ಮೂಲಗಳು ಕೂಡ ಬಿಸಿಲಿನ ತಾಪ ದಲ್ಲಿ ಸೊರಗುತ್ತಿದ್ದು, ದಿನದಿಂದ ದಿನಕ್ಕೆ ಬತ್ತುತ್ತಿದೆ. ಇದೇ ರೀತಿ ಪರಿಸ್ಥಿತಿ ಮುಂದುವರೆದಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲೂ ವ್ಯತ್ಯಯಗಳಾಗುವ ಎಲ್ಲಾ ಸಾಧ್ಯತೆಗಳು ಕಂಡು ಬರುತ್ತಿದೆ.

ನಗರಕ್ಕೆ ನೀರು ಪೂರೈಸುವ ಕೂಟುಹೊಳೆಯಲ್ಲಿ ನೀರಿನ ಪ್ರಮಾಣ ಕುಸಿತ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಕುಂಡಾಮೇಸ್ತ್ರಿ ಮಿನಿ ಡ್ಯಾಂ ಮೂಲಕ ಕೂಟುಹೊಳೆಗೆ ನೀರನ್ನು ಪಂಪ್ ಮಾಡಲಾಗುತ್ತಿದೆ. ಅದರಂತೆ ಮೂರ್ನಾಡು ಸಮೀಪದ ಬೇತ್ರಿ, ಸಿದ್ದಾಪುರ, ನೆಲ್ಯಹುದಿಕೇರಿ, ಕುಶಾಲನಗರ, ಕೂಡಿಗೆ, ಕಣಿವೆ ಭಾಗದಲ್ಲೂ ಕಾವೇರಿ ನದಿ ಹರಿವಿನಲ್ಲಿ ಕುಸಿತ ಕಂಡು ಬರುತ್ತಿದ್ದು, ಕುಡಿಯುವ ನೀರಿನ ಮೇಲೆ ಪರಿಣಾಮ ಬೀರುತ್ತಿದೆ.

ವನ್ಯಜೀವಿಗಳು ಕೂಡ ನೀರಿನ ಮೂಲಗಳಲ್ಲಿ ತಮ್ಮ ದಾಹ ನೀಗಿಸಿಕೊಳ್ಳುತ್ತಿವೆ. ಕಾಡು ಪ್ರಾಣಿಗಳ ನೀರಿನ ದಾಹ ತೀರಿಸಲು ಅರಣ್ಯದ ಒಳಭಾಗಗಳಲ್ಲಿ ಇರುವ ಕೆರೆ ಕಟ್ಟೆ ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಸಲು ಅರಣ್ಯ ಇಲಾಖೆಯೂ ಕ್ರಮಕೈಗೊಂಡಿದೆ. ಕೆಲ ಅರಣ್ಯ ವ್ಯಾಪ್ತಿಯಲ್ಲಿ ಬೋರ್‌ಗಳ ಮೂಲಕ ಸೋಲಾರ್ ಪ್ಯಾನಲ್ ಅಳವಡಿಸಿ ನೀರೆತ್ತುವ ಕೆಲಸವೂ ನಡೆಯುತ್ತಿದೆ. ನಗರ ಮತ್ತು ಪಟ್ಟಣ ಭಾಗಗಳಲ್ಲಿ ಈಗಾಗಲೇ ದಿನ ಬಿಟ್ಟು ದಿನ ನೀರನ್ನು ಪೂರೈಕೆ ಮಾಡಲಾಗುತ್ತಿದ್ದು, ಸದ್ಯಕ್ಕೆ ದೊಡ್ಡ ಮಟ್ಟದಲ್ಲಿ ನೀರಿನ ಸಮಸ್ಯೆ ಎದುರಾಗಿಲ್ಲ.

ಒಂದೆಡೆ ಅತಿಯಾದ ಬಿಸಿಲು ಮತ್ತೊಂದೆಡೆ ಶೆಕೆಯ ಹವಾಮಾನಕ್ಕೆ ಜನರು ಕೂಡ ಹೈರಾಣಾಗಿದ್ದಾರೆ. ಎ.ಸಿ. ಫ್ಯಾನ್, ಕೂಲರ್‌ಗಳಿಲ್ಲದೆ ಮನೆ, ಕಚೇರಿ, ಕೊಠಡಿಗಳ ಒಳಗೆ ಇರಲಾಗದಂತಹ ಪರಿಸ್ಥಿತಿ ಕಂಡು ಬರುತ್ತಿದೆ. ಅದರ ಜೊತೆಯಲ್ಲದೇ ಬಿಸಿಲಿನ ನೇರ ಹೊಡೆತದಿಂದ ಚರ್ಮಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ಕೂಡ ಕಂಡು ಬರುತ್ತಿದೆ. ಬಿಸಿಲಿನಿಂದ ದೇಹವನ್ನು ರಕ್ಷಿಸಿಕೊಳ್ಳಲು ಎಳನೀರು, ಕಲ್ಲಂಗಡಿ, ಹಣ್ಣಿನ ರಸ, ಹಣ್ಣುಗಳ ಸೇವನೆಯ ಮೊರೆ ಹೊಕ್ಕಿರುವ ಪರಿಣಾಮ ಎಳನೀರು, ನಿಂಬೆ ಹಣ್ಣು ಸಹಿತ ಎಲ್ಲಾ ಹಣ್ಣಿನ ದರಗಳು ಕೂಡ ಗ್ರಾಹಕರ ಜೇಬು ಸುಡುತ್ತಿವೆ.

ಕೆಲವು ಭಾಗದಲ್ಲಿ ಮಳೆ: ನಾಪೋಕ್ಲು, ಕಕ್ಕಬ್ಬೆ, ನೆಲಜಿ, ತಲಕಾವೇರಿ, ಕುಂದಚೇರಿ ಸಹಿತ ಬ್ರಹ್ಮಗಿರಿ ಬೆಟ್ಟ ಶ್ರೇಣಿ ವ್ಯಾಪ್ತಿಯ ಗ್ರಾಮಗಳು, ಗಾಳಿಬೀಡು, ಮೂರ್ನಾಡು, ಕುಶಾಲನಗರ, ಕಡೆಗಳಲ್ಲಿ ಕೆಲವು ದಿನಗಳ ಅಂತರದಲ್ಲಿ ಗುಡುಗು ಸಿಡಿಲಿನ ಸಹಿತ ಉತ್ತಮ ಮಳೆಯೂ ಸುರಿದಿದೆ. ಇನ್ನು ಹಲವು ಕಡೆಗಳಲ್ಲಿ ಮಧ್ಯಾಹ್ನದಿಂದ ಸಂಜೆ ವೇಳೆ ಯಲ್ಲಿ ಮೋಡ ಕವಿದ ವಾತಾವರಣ ಕಂಡು ಬಂದರೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗುತ್ತಿಲ್ಲ.



ನೀರಿನ ಭೋರ್ಗರೆತವಿಲ್ಲದೆ ಕಳಾಹೀನಗೊಂಡಿರುವ ಇರ್ಪು ಫಾಲ್ಸ್.


ಸೊರಗಿದ ಫಾಲ್ಸ್‌ಗಳು

ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿರುವ ನೈಸರ್ಗಿಕ ಜಲಧಾರೆಗಳು ಕೂಡ ನೀರಿಲ್ಲದೇ ಸೊರಗುತ್ತಿವೆ. ಮಡಿಕೇರಿಯ ಅಬ್ಬಿ ಫಾಲ್ಸ್, ಸೋಮವಾರಪೇಟೆ ಶಾಂತಳ್ಳಿ ವ್ಯಾಪ್ತಿಯ ಮಲ್ಲಳ್ಳಿ ಫಾಲ್ಸ್, ಶ್ರೀಮಂಗಲ ಸಮೀಪದ ಇರ್ಪು ಫಾಲ್ಸ್, ನಾಪೋಕ್ಲು ಸಮೀಪದ ಚೇಲಾವರ ಫಾಲ್ಸ್‌ಗಳು ಕೂಡ ನೀರಿನ ಅಭಾವ ಎದುರಿಸುತ್ತಿವೆ. ಮಳೆಗಾಲ ಭೋರ್ಗರೆಯುತ್ತಾ ಹರಿದು ಸೌಂದರ್ಯವೆಲ್ಲ ತಮ್ಮದೇ ಎಂದು ಬೀಗುತ್ತಿದ್ದ ಈ ಜಲರಾಶಿ ಇದೀಗ ಬಿಸಿಲಿನ ತಾಪಕ್ಕೆ ತಮ್ಮ ವೈಭವವನ್ನೇ ಕಳೆದುಕೊಂಡು ಸೊರಗುತ್ತಿವೆ.



ಕಾಡು ಪ್ರಾಣಿಗಳ ದಾಹ ತೀರಿಸಲು ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡುತ್ತಿರುವುದು.

ಬಾಣಂಗಾಲದಲ್ಲಿ ಆನೆಗಳ ಹಿಂಡು: ಮರಳಿ ಕಾಡಿಗೆ ಅಟ್ಟಿದ ಅರಣ್ಯ ಅಧಿಕಾರಿಗಳು



ಸಿದ್ದಾಪುರ, ಏ.24–ಬಾಣಂಗಾಲ ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ಕಾಡಾನೆಗಳ ಹಿಂಡನ್ನು ನಿಯಂತ್ರಣಕ್ಕೆ ತಂದು ಕಾಡಿಗೆ ಮರಳಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಗ್ರಾಮದ ಸುತ್ತಮುತ್ತಲಿನ ಅರಣ್ಯ ಪ್ರದೇಶದಿಂದ ಹೊರ ಬಂದು ಬೆಳೆ ಹೊಲಗಳತ್ತ ಚಲಿಸುತ್ತಿದ್ದ ಒಟ್ಟು 9 ಕಾಡಾನೆಗಳ ಹಿಂಡಿನಲ್ಲಿ 2 ಮರಿ ಆನೆಗಳೂ ಇದ್ದವು. ಈ ಆನೆ ಗಳ ಹಿಂಡನ್ನು ನೋಡಿದ ಗ್ರಾಮಸ್ಥರಲ್ಲಿ ಭಯ ಮತ್ತು ಆತಂಕ ಉಂಟುಮಾಡಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ, ಕಾಡಾನೆಗಳನ್ನು ಸುರಕ್ಷಿತವಾಗಿ ಮರಳಿ ಅರಣ್ಯ ಪ್ರದೇಶದತ್ತ ಓಡಿಸುವಲ್ಲಿ ಯಶಸ್ವಿಯಾದರು. ಕಾಡಾನೆಗಳ ಹಿಂಡು ಗ್ರಾಮ ಪ್ರದೇಶದಿಂದ ದೂರ ಸರಿದಾಗ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಇಂತಹ ಘಟನೆಗಳು ಮರುಕಳಿಸದಂತೆ ಶಾಶ್ವತ ಕ್ರಮ ಕೈಗೊಳ್ಳು ವಂತೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಆಗ್ರಹಿಸಿದ್ದಾರೆ. ಚೆನ್ನಂಗಿ ಉಪವಲಯ ಅರಣ್ಯಾಧಿಕಾರಿ ಪಿ.ಟಿ. ಶಶಿ ನೇತೃತ್ವದಲ್ಲಿ ಆರ್.ಆರ್.ಟಿ. ಸಿಬ್ಬಂದಿಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರವಾಸೋದ್ಯಮ ನಿಯಮ ರೂಪಿಸಲು ಹೋಂಸ್ಟೇ ಅಸೋಸಿಯೇಷನ್ ಆಗ್ರಹ

ಮಡಿಕೇರಿ, ಏ.24–ದಕ್ಷಿಣ ಕೊಡಗಿನ ಕುಟ್ಟ ಗ್ರಾಮದ ಹೋಂಸ್ಟೇಯೊಂದರಲ್ಲಿ ವಿದೇಶಿ ಮಹಿಳೆಯ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಪ್ರಕರಣ ಎಚ್ಚರಿಕೆಯ ಗಂಟೆಯಾಗಿದ್ದು, ಸರಕಾರ ತಕ್ಷಣ ಪ್ರವಾಸೋದ್ಯಮ ನಿಯಮವನ್ನು ರೂಪಿಸಿ ಪ್ರವಾಸಿಗರ ಸುರಕ್ಷತೆಯ ಬಗ್ಗೆ ಆದ್ಯತೆ ನೀಡಬೇಕೆಂದು ಕೂರ್ಗ್ ಹೋಂ ಸ್ಟೇ ಅಸೋಸಿಯೇಷನ್ ಒತ್ತಾಯಿಸಿದೆ.

ಕುಟ್ಟ ಹೋಂಸ್ಟೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಂಸ್ಟೇಯ ಪರವಾನಗಿಯನ್ನು ಜಿಲ್ಲಾಧಿಕಾರಿಗಳು ರದ್ದು ಮಾಡಿರುವುದು ಸರಿಯಾದ ಕ್ರಮವಲ್ಲ. ಪ್ರಕರಣ ತನಿಖೆಯ ಹಂತದಲ್ಲಿದ್ದು, ಆರೋಪ ಸಾಬೀತಾಗುವ ವರೆಗೆ ಪರವಾನಗಿಯನ್ನು ಅಮಾನತಿನಲ್ಲಿ ಡಬಹುದಾಗಿತ್ತು ಎಂದು ಅಸೋಸಿಯೇಷನ್‌ನ ಅಧ್ಯಕ್ಷೆ ಮೋಂತಿ ಗಣೇಶ್ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು. ಹೋಂಸ್ಟೇ ಮಾಲೀಕರು ಅಸೋಸಿಯೇಷನ್‌ನ ಸದಸ್ಯರಾಗಿದ್ದು, ಇವರ ವಿರುದ್ಧದ ಆರೋಪದ ಬಗ್ಗೆ ಸಮಗ್ರ ತನಿಖೆಯಾಗಲಿ. ಹೋಂಸ್ಟೇಯಲ್ಲಿರುವ ಸಿ.ಸಿ ಕ್ಯಾಮರಾದ ದೃಶ್ಯಗಳನ್ನು ಮತ್ತು ವೈಫೈ ವ್ಯವಸ್ಥೆಗಳನ್ನು ತನಿಖೆಗೆ ಒಳಪಡಿಸಲಿ ಎಂದು ಒತ್ತಾಯಿಸಿದರು.

ಕೂರ್ಗ್ ಹೋಂ ಸ್ಟೇ ಅಸೋಸಿಯೇಷನ್ 2006ರಿಂದಲೂ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾಗಿ ನಿಯಮಗಳನ್ನು ಪಾಲಿಸಿಕೊಂಡು ಬಂದಿದೆ. ಹೋಂಸ್ಟೇ ನಡೆಸುತ್ತಿರುವವರಿಗೆ ಸದಸ್ಯತ್ವವನ್ನು ಪಡೆದು ಪ್ರವಾಸೋದ್ಯಮದ ನಿಯಮ ಪಾಲಿಸುವಂತೆ ಮನವಿ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಆದರೆ ಹಲವು ಹೋಂಸ್ಟೇಗಳು ಈಗಲೂ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಹೋಂಸ್ಟೇಗಳ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ನಿಯಮಗಳಿಲ್ಲದಿರುವುದರಿಂದ ಪೊಲೀಸರು ಕ್ರಮಕ್ಕೆ ಮುಂದಾಗುತ್ತಿಲ್ಲ. ಆದ್ದರಿಂದ ಸರ್ಕಾರ ಅಕ್ರಮ ಹೋಂಸ್ಟೇಗಳಿಗೆ ಕಡಿವಾಣ ಹಾಕಲು ಸೂಕ್ತ ರೀತಿಯಲ್ಲಿ ಹೋಂಸ್ಟೇ ನಿಯಮವನ್ನು ರೂಪಿಸಬೇಕೆಂದು ಆಗ್ರಹಿಸಿದರು.

ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಕೆ.ಎಂ.ಕರುಂಬಯ್ಯ ಮಾತನಾಡಿ, ಜಿಲ್ಲೆಯಲ್ಲಿ 2478 ಹೋಂಸ್ಟೇಗಳು ಪರವಾನಗಿ ಪಡೆದುಕೊಂಡಿವೆ. 2ರಿಂದ 3 ಸಾವಿರ ಹೋಂ ಸ್ಟೇಗಳು ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ. ಇವುಗಳ ವಿರುದ್ಧ ಪ್ರವಾಸೋದ್ಯಮ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿ ಸರಕಾರ ತಕ್ಷಣ ಉಪ ನಿರ್ದೇಶಕರನ್ನು ನೇಮಿಸಿ ಪ್ರವಾಸೋದ್ಯಮ ನಿಯಮ ರೂಪಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಮೀನಾ ಕಾರ್ಯಪ್ಪ, ಉಪಾಧ್ಯಕ್ಷ ನವೀನ್ ಅಂಬೆಕಲ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಮದನ್ ಸೋಮಣ್ಣ ಉಪಸ್ಥಿತರಿದ್ದರು.



ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ ಪದಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚುನಾವಣೆ ನಡೆಸದ ಸರ್ಕಾರದ ಧೋರಣೆ ಖಂಡಿಸಿ ಬಿಜೆಪಿ ಪ್ರತಿಭಟನೆ



ಸರಕಾರದ ಧೋರಣೆ ವಿರೋಧಿಸಿ ಬಿಜೆಪಿ ಪ್ರತಿಭಟನೆ ನಡೆಸಿತು.

ಮಡಿಕೇರಿ, ಏ.24–ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ಸ್ಥಳೀಯ ಸಂಸ್ಥೆಗಳಾದ ಜಿ.ಪಂ, ತಾ.ಪಂ ಮತ್ತು ಗ್ರಾ.ಪಂ ಚುನಾವಣೆಯನ್ನು ನಡೆಸದೆ ಪ್ರಜಾ ಪ್ರಭುತ್ವ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ತಾ.ಪಂ ಕಚೇರಿ ಎದುರು ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ತಕ್ಷಣ ಚುನಾವಣೆ ನಡೆಸುವಂತೆ ಆಗ್ರಹಿಸಿದರು.

ಚುನಾವಣೆ ನಡೆಸದ ಕಾಂಗ್ರೆಸ್ ಸರ್ಕಾರ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಜಿ.ಪಂ, ತಾ.ಪಂ ಮತ್ತು ಗ್ರಾ.ಪಂ ಕ್ಷೇತ್ರಗಳಿಗೆ ಅನುದಾನ ಸಮರ್ಪಕವಾಗಿ ಹಂಚಿಕೆಯಾಗದೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಆರೋಪಿಸಿದರು. ಹೊರಗಿನಿಂದ ಬಂದ ಅಧಿಕಾರಿಗಳಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಸ್ಥಳೀಯ ಜನಪ್ರತಿನಿಧಿಗಳು ಅಧಿಕಾರದಲ್ಲಿದ್ದರೆ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ನಡೆಯುತ್ತದೆ. ಆದ್ದರಿಂದ ಸರಕಾರ ಶೀಘ್ರ ಚುನಾವಣೆಯನ್ನು ನಡೆಸಿ ಜನರಿಗೆ ಅಧಿಕಾರವನ್ನು ನೀಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ವಕ್ತಾರ ತಳೂರು ಎ. ಕಿಶೋರ್ ಕುಮಾರ್, ಉಪಾಧ್ಯಕ್ಷ ಮುದ್ದಂಡ ಡೀನ್ ಬೋಪಣ್ಣ, ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ ಮಡಿಕೇರಿ ಗ್ರಾಮಾಂತರ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ, ನಗರ ಉಪಾಧ್ಯಕ್ಷ ಬಿ.ಕೆ.ಜಗದೀಶ್, ಬೊಳ್ಳಜಿರ ಬಿ.ಅಯ್ಯಪ್ಪ, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎ. ಹರೀಶ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ತಾಲೂಕು ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

ಮಹಿಳೆಯನ್ನು ಬೆದರಿಸಿ ಸರ ಅಪಹರಣ

ಕುಶಾಲನಗರ, ಏ.24–ಮಹಿಳೆಯ ದ್ವಿಚಕ್ರ ವಾಹನ ಅಡ್ಡಗಟ್ಟಿ ಆಕೆಯನ್ನು ಬೆದರಿಸಿ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಕೊಪ್ಪ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಕೂಡ್ಲೂರಿನ ಎಸ್‌ಎಲ್‌ಎನ್ ಸಂಸ್ಥೆ ಉದ್ಯೋಗಿ ಶೃತಿ ಎಂಬವರು ಕೆಲಸ ಮುಗಿಸಿ ಗುಡ್ಡೆನಹಳ್ಳಿಯಲ್ಲಿನ ತನ್ನ ಮನೆಯತ್ತ ತೆರಳುತ್ತಿದ್ದಾಗ ಮಾರ್ಗಮಧ್ಯೆ ಭಾರತ ಮಾತಾ ಡಿಗ್ರಿ ಕಾಲೇಜು ರಸ್ತೆಯಲ್ಲಿ ಪಲ್ಸರ್ ಬೈಕ್‌ನಲ್ಲಿ ಬಂದ ಆಗಂತುಕ ಮಹಿಳೆಯನ್ನು ಬೆದರಿಸಿ, 10 ಗ್ರಾಂ ಚಿನ್ನದ ಸರ ಕದ್ದು ಪರಾರಿಯಾಗಿದ್ದಾನೆ. ಈ ಬಗ್ಗೆ ಮಹಿಳೆ ನೀಡಿದ ದೂರಿನ ಮೇರೆಗೆ ಬೈಲಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಮಡಿಕೇರಿ ಏ.24–ಸೋಮವಾರಪೇಟೆ ಐಗೂರು ಫೀಡರ್‌ನಲ್ಲಿ ನಾಳೆ (ಶನಿವಾರ) ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕುಸುಬೂರು, ಕಾರೆಕೊಪ್ಪ, ಸಜ್ಜಳ್ಳಿ, ಯಡವಾರೆ, ಹೊಸತೋಟ, ಐಗೂರು, ಗರಗಂದೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕಾಂನ ಪ್ರಕಟಣೆಯಲ್ಲಿ ತಿಳಿಸಿದೆ.

ಕನ್ನಡ ನಾಡು–ನುಡಿಗೆ ಡಾ.ರಾಜ್ ಕೊಡುಗೆ ಅಪಾರ

ಚಾಮರಾಜನಗರ: ಕನ್ನಡ ನಾಡು, ನುಡಿಗೆ ಡಾ.ರಾಜ್‌ಕುಮಾರ್ ಅವರ ಕೊಡುಗೆ ಅವಿಸ್ಮರಣೀಯ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ವರನಟ ಡಾ.ರಾಜ್‌ಕುಮಾರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಡಾ.ರಾಜ್‌ಕುಮಾರ್ ಅವರು ನಮ್ಮ ಜಿಲ್ಲೆಯವರು ಎಂಬುದೇ ಹೆಮ್ಮೆಯ ವಿಚಾರ. 1929ರಲ್ಲಿ ದೊಡ್ಡಗಾಜನೂರಿನಲ್ಲಿ ಜನಿಸಿದ ಅವರು ರಂಗಭೂಮಿ ಕಲಾವಿದರಾಗಿ ಬಳಿಕ 1956ರಲ್ಲಿ ಬೇಡರ ಕಣ್ಣಪ್ಪ ಚಿತ್ರದ ಮೂಲಕ ಪಾದಾರ್ಪಣೆ ಮಾಡಿ ಸಿನಿಮಾ ಖ್ಯಾತಿ ಪಡೆದರು ಎಂದರು.

ಡಾ.ರಾಜ್‌ಕುಮಾರ್ ಅವರ ಕನ್ನಡ ಭಾಷೆಯಲ್ಲಿ ಬಿಟ್ಟು ಬೇರೆ ಯಾವುದೇ ಭಾಷೆಯಲ್ಲಿಯೂ ಅಭಿನಯಿಸದಿರುವುದು ವಿಶೇಷ. ಕನ್ನಡ ನಾಡು ನುಡಿ ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮೈಸೂರು ವಿವಿಯಿಂದ ಡಾಕ್ಟರೇಟ್ ಪಡೆದು ಡಾ.ರಾಜ್ಕುಮಾರ್ ಅವರು ಖ್ಯಾತ ನಟ ಹಾಗೂ ಗಾಯಕರೂ ಆಗಿದ್ದರು ಎಂದು ತಿಳಿಸಿದರು. ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಮಾತನಾಡಿ, ಡಾ.ರಾಜ್‌ಕುಮಾರ್ ಅವರು ಕನ್ನಡ ಭಾಷೆಗೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಹೆಚ್ಚು ಶಿಕ್ಷಣ ಪಡೆಯದಿದ್ದರೂ ಹೆಚ್ಚು ಸಂಪ್ರದಾಯ ಇತ್ತು. ಗೋಕಾಕ್ ಚಳವಳಿ ಮೂಲಕ ಕನ್ನಡ ಭಾಷೆಯ ಉಳಿವಿಗೆ ಶ್ರಮಿಸಿದ್ದರು. ಮೇರು ವ್ಯಕ್ತಿತ್ವ ಹೊಂದಿದ್ದ ಡಾ.ರಾಜ್‌ಕುಮಾರ್ ಅವರು ಕಲೆ, ಸಾಹಿತ್ಯ, ಸಂಗೀತಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ಚಂದ್ರು, ಎಡಿಸಿ ಜವರೇಗೌಡ, ರಮೇಶ್, ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಜಯಣ್ಣ, ವಾರ್ತಾ ಇಲಾಖೆಯ ಸುರೇಶ್, ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಇತರರಿದ್ದರು.



ವರನಟ ಡಾ.ರಾಜ್‌ಕುಮಾರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಬಿಸಿಲಿನ ತಾಪಕ್ಕೆ ಹಸು, ಎತ್ತು ಸಾವು

ಗುಂಡ್ಲುಪೇಟೆ,ಏ.24– ತಾಲೂಕಿನ ದೇಪಾಪುರ ಗ್ರಾಮದಲ್ಲಿ ಬಿಸಿಲಿನ ತಾಪಕ್ಕೆ ಒಂದು ಎತ್ತು ಹಾಗೂ ಹಾಲು ಕೊಡುತ್ತಿದ್ದ ಹಸು ಸಾವಿಗೀಡಾಗಿರುವ ಘಟನೆ ನಡೆದಿದೆ.

ಗುರುವಾರ ಸಂಜೆ ಜಮೀನಿನಲ್ಲಿ ಚೆನ್ನಾಗಿಯೇ ಮೇವು ತಿಂದು ಮನೆಗೆ ಬಂದಿದ್ದ ಗ್ರಾಮದ ಮಹದೇವಯ್ಯ ಎಂಬುವರಿಗೆ ಸೇರಿದ ಹಸು ಮತ್ತು ಎತ್ತುಗಳು ಶುಕ್ರವಾರ ನಸುಕಿನಲ್ಲಿ ಸಾವಿಗೀಡಾಗಿವೆ. ಬೆಳಗ್ಗೆ ಜಾನುವಾರುಗಳಿಗೆ ಮೇವು ಹಾಕಲು ಹೋದಾಗ ವಿಷಯ ಬೆಳಕಿಗೆ ಬಂದಿದ್ದು ಲಕ್ಷಾಂತರ ರೂಪಾಯಿಗಳ ನಷ್ಟ ಸಂಭವಿಸಿದೆ. ಬಿಸಿಲಿನ ತಾಪ ತಾಳಲಾರದೆ ಬಳಲಿ ಬಂದ ಹಸು ಮತ್ತು ಎತ್ತಿಗೆ ಸಕಾಲದಲ್ಲಿ ನೀರು ಸಿಗದೆ ಸಾವನ್ನಪ್ಪಿದೆ ಎಂದು ಪಶು ವೈದ್ಯರು ತಿಳಿಸಿದ್ದಾರೆ. ಹಾಲು ಉತ್ಪಾದನೆ ಹಾಗೂ ಎತ್ತುಗಳಿಂದಲೇ ಜೀವನೋಪಾಯ ನಡೆಸುತ್ತಿದ್ದ ಮಾಲೀಕರಿಗೆ ತೀವ್ರ ನಷ್ಟ ವುಂಟಾಗಿದ್ದು ಸರ್ಕಾರ ಪರಿಹಾರ ಕೊಡಬೇಕು ಎಂದು ಗ್ರಾಮಸ್ಥರಾದ ಗುರುಸ್ವಾಮಿ ಒತ್ತಾಯಿಸಿದ್ದಾರೆ.

ಪಶುವೈದ್ಯರ ಸೂಚನೆ: ಇತ್ತೀಚೆಗೆ ತಾಪಮಾನ ಹಾಗೂ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿರುವುದರಿಂದ ಮಾಲೀಕರು ತಮ್ಮ ರಾಸುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮಾದೇಶ್ ಸಲಹೆ ನೀಡಿದ್ದಾರೆ.

ಎಲ್ಲಾ ರೈತರು ಅಧಿಕ ಹಾಲು ಉತ್ಪಾದನೆಗಾಗಿ ಜರ್ಸಿ ಹಾಗೂ ಎಚ್‌ಎಫ್ ತಳಿಯ ಹಸುಗಳನ್ನು ಸಾಕುತ್ತಿದ್ದಾರೆ. ವಿದೇಶದಲ್ಲಿ ತಣ್ಣನೆಯ ವಾತಾವರಣದಲ್ಲಿರುವ ಈ ಸಂತತಿಗಳು ಬಿಸಿಲಿನ ತಾಪ ತಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಬಿಸಿ ಗಾಳಿ ಹಾಗೂ ಅಧಿಕ ತಾಪಮಾನದಿಂದ ರಾಸುಗಳು ಬಾಯಿಯ ಮೂಲಕ ಜೋರಾಗಿ ಉಸಿರಾಡುವುದರಿಂದ ಬೇಗನೆ ನಿರ್ಜಲೀಕರಣಕ್ಕೆ ತುತ್ತಾಗುತ್ತವೆ. ಆದ್ದರಿಂದ ಮಾಲೀಕರು ರಾಸುಗಳ ಪಕ್ಕದಲ್ಲಿ ನೀರು ಸಿಗುವಂತೆ ಇಡಬೇಕು. ಬೆಳಗ್ಗೆ 10 ಗಂಟೆಯ ನಂತರ ಹೊರಗೆ ಬಿಡದೆ ಕೊಟ್ಟಿಗೆ ಇಲ್ಲವೇ ನೆರಳಿನಲ್ಲಿ ಕಟ್ಟಿಹಾಕುವ ಜತೆಗೆ ಮೈಯಲ್ಲಿ ಜ್ವರ ಇದ್ದರೆ ನೀರು ಅದ್ದಿದ ಚೀಲ ಇಲ್ಲವೇ ಬಟ್ಟೆಯನ್ನು ಹೊದಿಸಿ ಅಧಿಕ ತಾಪಮಾನದಿಂದ ಪಾರುಮಾಡಬೇಕು, ಕೂಡಲೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಕೊಡಿಸಬೇಕು ಎಂದು ತಿಳಿಸಿದ್ದಾರೆ.



ತಡೆಗೋಡೆಗೆ ಕಾರು ಡಿಕ್ಕಿ: ಓರ್ವ ಸಾವು, 9 ಮಂದಿಗೆ ಗಾಯ



ಸಂತೋಷ್

ಹನೂರು: ತಾಲೂಕಿನ ಕೆಂಪಯ್ಯನ ಹಟ್ಟಿ ಗ್ರಾಮದ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಓರ್ವ ಸಾವನ್ನಪ್ಪಿ, 9 ಮಂದಿ ಗಾಯಗೊಂಡಿದ್ದಾರೆ.

ಮೃತರನ್ನು ಒಡೆಯರಪಾಳ್ಯ ಗ್ರಾಮದ ಸಂತೋಷ್ (30) ಎಂದು ಗುರುತಿಸಲಾಗಿದೆ.

ಒಡೆಯರಪಾಳ್ಯದ ಒಂದೇ ಕುಟುಂಬದವರು ತಮಿಳುನಾಡಿನ ಅಂಕಾಳಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಮುಗಿಸಿ ವಾಪಸ್ಸಾಗುತ್ತಿದ್ದ ವೇಳೆ ರಾಮಾಪುರ ಕೆಂಪಯ್ಯನ ಹಟ್ಟಿ ರಸ್ತೆಯಲ್ಲಿ ಕಾರು ನಿಯಂತ್ರಣ ತಪ್ಪಿ ಮೊದಲು ತಡೆಗೋಡೆಗೆ ಡಿಕ್ಕಿ ಹೊಡೆದು ಬಳಿಕ ವಿದ್ಯುತ್ ಕಂಬಕ್ಕೆ ಗುದ್ದಿದೆ. ಇದರಿಂದ ಕಾರಿನಲ್ಲಿದ್ದ ಎಲ್ಲರೂ ಗಾಯಗೊಂಡಿದ್ದಾರೆ.

ತೀವ್ರವಾಗಿ ಗಾಯಗೊಂಡ ನಂದಿನಿ, ಗೋವಿಂದನ್, ಮುನಿಯಮ್ಮ ಮುರುಗೇಶ್, ಮಂಜುಳಾ, ಶಿಲ್ಪಾ, ರತ್ನಮ್ಮ, ಕನಗವೇಲ್ ಹಾಗೂ ಸೂರ್ಯ ಅವರನ್ನು ಕೊಳ್ಳೇಗಾಲ ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರು ಕೆಆರ್.ಆಸ್ಪತ್ರೆಗೆ ರವಾನಿಸಲಾಗಿದೆ.

ತೀವ್ರವಾಗಿ ಗಾಯಗೊಂಡಿದ್ದ ಸಂತೋಷ್ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಘಟನೆಯ ಬಗ್ಗೆ ಮಾಹಿತಿ ತಿಳಿದ ತಕ್ಷಣ ರಾಮಾಪುರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೂರ್ವಜರ ಮೋಕ್ಷ ಪ್ರಾಪ್ತಿಗಾಗಿ ಗಂಗೆಯನ್ನೆ ಧರೆಗಿಳಿಸಿದ ಮಹಾ ಪುರುಷ ಭಗೀರಥ

ಚಾಮರಾಜನಗರ, ಏ.24–ತನ್ನ ಪೂರ್ವಜರ ಮೋಕ್ಷ ಪ್ರಾಪ್ತಿಗಾಗಿ ಸಾಕ್ಷಾತ್ ಗಂಗೆಯನ್ನೇ ಧರೆಗಿಳಿಸಿದ ಮಹಾನ್ ಪುರುಷ ಭಗೀರಥ ಮಹರ್ಷಿಗಳ ಸ್ಮರಣೆ ಇಂದಿಗೂ ಪ್ರಸ್ತುತವಾಗಿದೆ ಎಂದು ಶಾಸಕ ಸಿ. ಪುಟ್ಟ ರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸರಳವಾಗಿ ಹಮ್ಮಿಕೊಳ್ಳಲಾಗಿದ್ದ ಮಹರ್ಷಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮದ ದೀಪ ಬೆಳಗಿಸಿ, ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಪೂರ್ವಜರ ಬಗ್ಗೆ ಅಪಾರ ಗೌರವ, ನಂಬಿಕೆ ಇಟ್ಟಿದ್ದ ಮಹರ್ಷಿ ಭಗೀರಥರು ಅವರಿಗೆ ಮೋಕ್ಷ ದೊರಕಿಸಲು ಎಂತಹ ಸಂಕಷ್ಟಗಳು ಎದುರಾದರೂ ಉಗ್ರ ತಪಸ್ಸು ಮಾಡುವ ಮೂಲಕ ಎಡೆಬಿಡದ ಸತತ ಪ್ರಯತ್ನಗಳಿಂದ ದೇವಾನುದೇವತೆಗಳನ್ನು ಮೆಚ್ಚಿಸಿದರು. ಭಗೀರಥರ ಪ್ರಯತ್ನ ಈಗಲೂ ಪ್ರಚಲಿತದಲ್ಲಿದೆ. ಭಗೀರಥರು ಪುರಾಣ ಕಾಲಘಟ್ಟದ ವ್ಯಕ್ತಿಯಾಗಿದ್ದರೂ ಅವರ ಆದರ್ಶ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಹಾಗೂ ಅನುಸರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹರ್ಷಿ ಭಗೀರಥರ ಕುರಿತು ಉಪನ್ಯಾಸ ನೀಡಿದ ನಾಗವಳ್ಳಿಯ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಸೋಮಣ್ಣ ಅವರು ಮಾತನಾಡಿ ಭಗೀರಥರ ಜಯಂತಿಯು ಭೂಮಿಗೆ ಗಂಗಾವಾತರಣೆಯಾದ ಪುಣ್ಯದಿನವಾಗಿದೆ. ತಮ್ಮ ಮುತ್ತಾತರಿಗೆ ಮೋಕ್ಷ ನೀಡಲು ಸಾವಿರ ವರ್ಷಗಳ ಕಾಲ ತಪಗೈದು ಗಂಗೆಯನ್ನು ಭೂಮಿಗೆ ಕರೆತಂದ ಮಹಾನ್ ಸಿದ್ಧಿಪುರುಷರೆಂದರೆ ಅದು ಭಗೀರಥರು ಮಾತ್ರ. ಅವರ ಜೀವನ ಸಾಧನೆಗಳನ್ನು ಇಂದು ಮೆಲುಕು ಹಾಕುವ ಸುಸಂದರ್ಭವಾಗಿದೆ ಎಂದರು.

ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಸಿಇಓ ಮೋನಾ ರೋತ್, ಎಸ್ಪಿ ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ಜಿಲ್ಲಾಮಟ್ಟದ ಅಧಿಕಾರಿಗಳು, ಸಮಾಜದ ಮುಖಂಡರು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಇದ್ದರು.



ಮಹರ್ಷಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಗಣ್ಯರು.

ಮೇ 5 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ

ಚಾಮರಾಜನಗರ: ಗ್ರೀನ್‌ಬಡ್ಸ್ ಆಸ್ತಿ ಹರಾಜು ಮಾಡಿ, ಠೇವಣಿದಾರರಿಗೆ ಹಣ ಹಿಂದುರಿಗಿಸುವಂತೆ ಆಗ್ರಹಿಸಿ ಮೇ 5ರಂದು ಬೆಂಗಳೂರಿನಲ್ಲಿ ಗ್ರೀನ್‌ಬಡ್ಸ್ ಕಾರ್ಯಕರ್ತರು ಹಾಗೂ ಠೇವಣಿದಾರರಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಚಾಮರಾಜನಗರ ಜಿಲ್ಲಾಧ್ಯಕ್ಷ ಎಸ್.ಎಂ.ಶ್ರೀಕಂಠಪ್ರಸಾದ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಗ್ರೀನ್‌ಬಡ್ಸ್ ಕಾರ್ಯಕರ್ತರು ಹಾಗೂ ಠೇವಣಿದಾರ ಸಮಿತಿ ಜಿಲ್ಲಾ ಘಟಕದಿಂದ ನಡೆದ ಸಭೆಯಲ್ಲಿ ಮಾತನಾಡಿದರು.

ಗ್ರೀನ್‌ಬಡ್ಸ್ ಕಂಪನಿಯಲ್ಲಿ ಲಕ್ಷಾಂತರ ಮಂದಿ ಹಣ ಹೂಡಿಕೆ ಮಾಡಿ. ಮೋಸ ಹೋಗಿದ್ದಾರೆ. ಹಣ ಹಿಂಪಡೆಯುವ ಸಂಬಂಧ ಕಾರ್ಯಕರ್ತರು ಹಾಗೂ ಠೇವಣಿದಾರರ ಸಮಿತಿ ಅಸ್ತಿತ್ವಕ್ಕೆ ತರುವುದರ ಮೂಲಕ ರೈತ ಸಂಘಟನೆಗಳ ಜೊತೆಗೂಡಿ ಹೋರಾಟ ನಡೆಸಲಾಯಿತು. ನಮ್ಮ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ವಿಶೇಷ ಸಕ್ಷಮ ಪ್ರಾಧಿಕಾರ ರಚನೆ ಮಾಡಿ, ಗ್ರೀನ್‌ಬಡ್ಸ್ ಕಂಪನಿಯ ಶೇ.80 ರಷ್ಟು ಆಸ್ತಿಯನ್ನು ವಶಪಡಿಸಿಕೊಂಡಿದೆ. ಆದರೆ ಆಸ್ತಿಯನ್ನು ಹರಾಜು ಹಾಕಿ ಠೇವಣಿದಾರರಿಗೆ ಹಣ ಕೊಡಿಸುವ ಕಾರ್ಯ ಮಾಡಿಲ್ಲ. ಇದರಿಂದ ಕಾರ್ಯಕರ್ತರು ಆತಂಕ ಪಡುವ ಸ್ಥಿತಿ ಎದುರಾಗಿದೆ ಎಂದರು.

ರಾಜ್ಯ ಸಕ್ಷಮ ಪ್ರಾಧಿಕಾರ ವಶಪಡಿಸಿಕೊಂಡಿರುವ ಆಸ್ತಿಯನ್ನು ಹರಾಜು ಮಾಡುವ ಮೂಲಕ ಠೇವಣಿದಾರರಿಗೆ ಹಣಕೊಡಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಜಗದೀಶ್, ನಂಜನಗೂಡು ತಾಲೂಕು ಘಟಕದ ತಗಡೂರು ಮಹದೇವಪ್ಪ ಇದ್ದರು.



ಮಹಡಿಯಿಂದ ಬಿದ್ದು ಕೂಲಿಕಾರ್ಮಿಕ ಸಾವು



ಕೊಳ್ಳೇಗಾಲ, ಏ.24– ತಾಲೂಕಿನ ಜಿನಕಹಳ್ಳಿ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿದ್ದ ಮನೆಯ ಕಟ್ಟಡದ ಮೇಲಿಂದ ಕೆಳಗೆ ಬಿದ್ದು ಕೂಲಿ ಕಾರ್ಮಿಕ ಸಾವನ್ನಪ್ಪಿರುವ ಘಟನೆ ನಡೆದಿದೆ.

ಯಳಂದೂರು ತಾಲೂಕಿನ ಅಗರ ಗ್ರಾಮದ ಎಲೆಕ್ಟ್ರಿಕಲ್ ಕೂಲಿ ಕಾರ್ಮಿಕ ಮಹೇಶ್(47) ಎಂಬಾತ ಮೃತ್ತ ವ್ಯಕ್ತಿ.

ಈತ ಜಿನಕನಹಳ್ಳಿ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿನ ಮನೆಯ ಕೂಲಿಕೆಲಸಕ್ಕೆ ತೆರಳಿ ಮನೆಯ ಹತ್ತು ಅಡಿ ಕಟ್ಟಡದ ಮೇಲೆ ಕೆಲಸ ಮಾಡುತ್ತಿರುವ ವೇಳೆ ಅಯತಪ್ಪಿ ಕೆಳಗಡೆ ಬಿದ್ದು ತಲೆ ಭಾಗ ತೀವ್ರವಾಗಿ ಪೆಟ್ಟಾಗಿದ್ದು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಸಾವನ್ನಪ್ಪಿದ್ದು ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ತೊಂಡವಾಡಿಯಲ್ಲಿ ವೈಭವದ ಬಸವೇಶ್ವರ ಜಯಂತಿ

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದಲ್ಲಿ ಬಸವೇಶ್ವರ ಜಯಂತಿಯನ್ನು ಗ್ರಾಮಸ್ಥರು ವೈಭವದ ಮೆರವಣಿಗೆ ಮೂಲಕ ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು. ಕಲಾತಂಡಗಳು, ಪೂಜಾ ಕುಣಿತ ಮತ್ತು ಬಸವೇಶ್ವರ ವೇಷಧಾರಿಗಳು ಮೆರವಣಿಗೆಗೆ ಮೆರುಗು ನೀಡಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ

ತಕ್ಷಣ ಬೇಕಾಗಿದ್ದಾರೆ ಹುಡುಗಿಯರು ಟೆಲಿಕಾಲರ್ಸ್ (11000)+(Incentive) ಟೀಮ್ ಲೀಡರ್ (ಸಂಬಳ – 15000) ಸ್ಥಳ : ಚಾಮುಂಡಿಪುರಂ ಮತ್ತು ಎನ್ ಆರ್ ಮೊಹಲ್ಲಾ, ಹುಡುಗರು ಬೇಕಾಗಿದ್ದಾರೆ. Field Executive (ಸಂಬಳ – 17000)+(Incentive) Team Leader - 20000, Team ಮ್ಯಾನೇಜರ್ – 25000

81500 05111

ವೃದ್ಧಾಶ್ರಮ

ನಿಮ್ಮ ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಜಾಗದಲ್ಲಿ ಇರಿಸಲು ನಮ್ಮನ್ನು ಇಂದೇ ಸಂಪರ್ಕಿಸಿ, ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ.

9916905188

ತಕ್ಷಣ ಬೇಕಾಗಿದ್ದಾರೆ

ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.

9620777819

ಸದ್ಗುರು ಮ್ಯಾರೇಜಸ್

ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ,

9448229184
7899625268

ತಕ್ಷಣ ಬೇಕಾಗಿದ್ದಾರೆ

ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : ಸೆಕ್ಯೂರಿಟಿ ಸೂಪರ್‌ವೈಸರ್ : 24,000/- 8 ಗಂಟೆ ಸೆಕ್ಯೂರಿಟಿ ಗಾರ್ಡ್: 22,000/- 8 ಗಂಟೆ ಊಟ, ತಿಂಡಿ ಸೌಲಭ್ಯವಿರುತ್ತದೆ.

9620777819

ಬೇಕಾಗಿದ್ದಾರೆ

PGಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ ವಸತಿ ಇರುತ್ತದೆ. ಸಂಪರ್ಕಿಸಿ

9535744143
9900944982

TV ಕೆಟ್ಟಿದೆಯೇ ?

LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.

Teju Electronics, ಅಗ್ರಹಾರ
Mob: 9342114069

ಜಮೀನು ನೋಡಿಕೊಳ್ಳಲು ಬೇಕಾಗಿದ್ದಾರೆ

ಮೈಸೂರಿನ ಆರ್.ಟಿ. ನಗರದ ಸಮೀಪ ಜಮೀನು ನೋಡಿಕೊಂಡು ಇರಲು ಮತ್ತು ಕೆಲಸ ಮಾಡಲು ಅಲ್ಲಿಯೇ ಉಳಿದುಕೊಂಡು ಕೆಲಸ ಮಾಡುವ ಕುಟುಂಬ(ಫ್ಯಾಮಿಲಿ) ಅಥವಾ ವ್ಯಕ್ತಿಗಳು ಬೇಕಾಗಿದ್ದಾರೆ. ಸಂಬಳ ಮಾಹೆ 16000(ವಸತಿ ಉಚಿತ) ಸಂಪರ್ಕಿಸಿ

8762071533

ಬೇಕಾಗಿದ್ದಾರೆ

ಮಿನರಲ್ ವಾಟರ್ ಸಪ್ಲೆ ಮಾಡಲು TATA ACE ವಾಹನ ಓಡಿಸಲು ಡ್ರೈವರ್ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸಂಪರ್ಕಿಸಿ

9611073939

ಸೈಟ್ ಮಾರಾಟಕ್ಕಿದೆ

30x40 E/F DTCP "A" ಖಾತಾ ಸೊಸೈಟಿ ಸೈಟು ಮಾರಾಟಕ್ಕಿದೆ 21 ಲಕ್ಷಗಳು, ನಂಜುಂಡೇಶ್ವರನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು

9972557534
9742198093

20x30 ಅಳತೆಯ ಸೈಟ್ ಮಾರಾಟಕ್ಕಿದೆ

ಇಲವಾಲದ ಬಸ್ ನಿಲ್ದಾಣದಿಂದ 1 k.m. ಅಂತರದಲ್ಲಿರುವ ಕಟೀಲ್‌ನಗರ D.T.C.P. ಬಡಾವಣೆಯಲ್ಲಿ ಡೈರೆಕ್ಟ್ ಓನರ್ ವ್ಯಾಪಾರ ಬೆಲೆ 20 ಲಕ್ಷ ನೆಗೋಷಿಯಬಲ್ ಸಿಪಾಯಿ ನಂಜುಂಡಸ್ವಾಮಿ ಹೆಚ್.ಎಸ್.

9483862050

ತಕ್ಷಣ ಬೇಕಾಗಿದ್ದಾರೆ

ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (SSLC, PUC, Any Degree and Diploma Pass or Fail) Company : Auto Motive Axle Ltd, 1) SSLC - 16100/-, 2) ITI Any Trade - 18,100/- 3) ITI Fail : 16,100/-, 4) Any degree & Diploma Pass - 20,200/- (Net Pay) (Shift tiem - 1st Shifte and General Shift) ಸೌಲಭ್ಯತೆ : ESI, PF ಮತ್ತು Canteen, Age Limit : 18 ರಿಂದ 30 ವರ್ಷ Married & Unmaried

Contact: 7019822622, 7019380847, 9353430078

ತಕ್ಷಣ ಬೇಕಾಗಿದ್ದಾರೆ

ಕೆಂಪಮ್ಮ ಚೌಡೇಗೌಡ ಪೆಟ್ರೋಲ್ ಬಂಕ್ ಹೊಸಹುಂಡಿ ಗೇಟ್, ಮೈಸೂರು 2pm- 10pm, Salary- 12,000/-

9900339977

Impulse Job's

Age (18-24) Project Trainee ಗಳಾಗಿ 10th, PUC, ಮೇಲ್ಪಟ್ಟ ಯುವಕ ಯುವತಿಯರು, Earn(10800/- ರಿಂದ 20400/-) PM, ಹೊಸಬರಿಗೆ ಆದ್ಯತೆ ತಮ್ಮ ವಿವರಗಳೊಂದಿಗೆ ನೇರ ಸಂಪರ್ಕಿಸಿ, ಶುಲ್ಕವಿರುವುದಿಲ್ಲ, ಮೈಸೂರು Call... (9AM to 5PM)

9342827788
6364219821

ಅಲಿನೇಶನ್ ಜಮೀನು ಕಡಿಮೆಗೆ ಬಾಡಿಗೆಗಿದೆ

ಗದ್ದಿಗೆ ಸಿಗ್ನಲ್‌ನಿಂದ 4 ಕಿಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ 1 1/4 ಎಕರೆ ಅಲಿನೇಶನ್ ಜಮೀನು ರೆಸಾರ್ಟ್, ಶಾಲೆ, ಇತರೆ ಉದ್ದೇಶಕ್ಕೆ ಚದರಡಿಗೆ 99 ಪೈಸೆಯಂತೆ ಬಾಡಿಗೆಗಿದೆ. ಸಂಪರ್ಕಿಸಿ

8197609290

ಸೈಟು ಮಾರಾಟಕ್ಕಿದೆ

ಪೂರ್ವದಿಕ್ಕಿನ ಸೈಟು ಮಾರಾಟಕ್ಕಿದೆ ಕಡಕೊಳದಲ್ಲಿ 30x40 ಆಸಕ್ತಿ ಉಳ್ಳವರು ಸಂಪರ್ಕಿಸಿ

9845852613

ತಕ್ಷಣ ಬೇಕಾಗಿದ್ದಾರೆ

ರಾಣಿ ಮದ್ರಾಸ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ : 20500+W/o (8hrs) ಊಟ, ತಿಂಡಿ ಸೌಲಭ್ಯವಿರುತ್ತದೆ.

9880727819
9620667819

ಬೇಕಾಗಿದ್ದಾರೆ

ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
ಕುವೆಂಪುನಗರದಲ್ಲಿ
ಬೆಳಿಗ್ಗೆ 6 ರಿಂದ ಸಂಜೆ 3
ಮಧ್ಯಾಹ್ನ 1 ರಿಂದ ರಾತ್ರಿ 10

9986758555

RAI ESTATES

MUDA APPROVED · RERA APPROVED · 90% · E-KHATA

ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್‌ಗಳನ್ನು ಕೊಂಡುಕೊಳ್ಳಿ

9448181488
10, New Sayyaji Rao Road, Bamboo Bazar, Mysuru - 570 001

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

Mob: 9964733988

ಕೆಲಸಕ್ಕೆ ಬೇಕಾಗಿದ್ದಾರೆ

ನೇಮ್‌ಪ್ಲೇಟ್ ಕೆಲಸಕ್ಕಾಗಿ. ಹುಡುಗರು
ವಯೋಮಿತಿ : 18 ರಿಂದ 30
ಸಂಬಳ : 10K + 2K
ಸ್ಥಳ : ಅಗ್ರಹಾರ & ಶ್ರೀರಾಂಪುರ
ಸಮಯ ಬೆಳಿಗ್ಗೆ 10:00 ರಿಂದ ಸಂಜೆ 7:30 ರವರೆಗೆ

95132 20070

ಬೇಕಾಗಿದ್ದಾರೆ

* ಕಂಪ್ಯೂಟರ್‌ನಲ್ಲಿ ಕೆಲಸ ಮಾಡಿ 2 ವರ್ಷಗಳ ಅನುಭವವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
* ಯರಗನಹಳ್ಳಿ, ವಿದ್ಯಾನಗರ, ಅಲನಹಳ್ಳಿ ಲೇಔಟ್, ಸಿದ್ಧಾರ್ಥ ಲೇಔಟ್, ನಜರ್‌ಬಾದ್, ಕುರುಬಾರಹಳ್ಳಿಯಲ್ಲಿರುವವರಿಗೆ ಮೊದಲ ಆದ್ಯತೆ.
* ರಿಟೈರ್ಡ್, ಹೌಸ್‌ವೈಫ್, ಸೆಲ್ಫ ಎಂಪ್ಲಾಯೀಸ್‌ಗೆ ಪಾರ್ಟ್ ಟೈಂ ಬಿಸಿನೆಸ್ ಆಪರ್ಚುನಿಟಿ ಇದೆ.

9902062957
7795712847

ಕೆಲಸಕ್ಕೆ ಬೇಕಾಗಿದ್ದಾರೆ

ಮೈಸೂರು ನಗರದ ಸುತ್ತ ಮುತ್ತ ನಗರದ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ, ಸ್ಕೂಲ್‌ಗಳಲ್ಲಿ, ಹಾಸ್ಪಿಟಲ್‌ಗಳಲ್ಲಿ ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡಲು ಶ್ರೀರಂಗಪಟ್ಟಣ, ಮೈಸೂರು ಶಾರದೇವಿ ನಗರ, ಹೆಬ್ಬಾಳ್, ವಿಜಯನಗರ, ಮೇಟಗಳ್ಳಿ ಸ್ಥಳಗಳಲ್ಲಿ ಕೆಲಸ ಮಾಡಲು ತಕ್ಷಣ ಸೆಕ್ಯೂರಿಟಿ, ಹೌಸ್ ಕೀಪಿಂಗ್, Helperಗಳು, ಸ್ಕೂಲ್ ಬಸ್ attender ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. (ಶ್ರೀ ರಂಗಪಟ್ಟಣ ಸೆಕ್ಯೂರಿಟಿಗೆ ವಸತಿ ಊಟ ವ್ಯವಸ್ಥೆ ಇದೆ) ESI & PF ಇದೆ.

ಸಂಪರ್ಕಿಸಿ: 7795367205, 9611208553, 9738153553

ಸುವರ್ಣ ಯಾತ್ರಾ

9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5/26
7 ದಿನಗಳ ಭೂತನ್ ಪ್ರವಾಸ 8/5/26
13 ದಿನಗಳ ಚಾರ್ ಧಾಮ್ ಪ್ರವಾಸ 26/5/26

9008381022
9480843945

DOCUMENT LOST

I, Srinivasan T, have lost my MUDA Property Allotment & Possession Certificate Copy of Site No.2309, Vijayanagar 2nd Stage, Mysuru-17 of MUDA Property No.17751, ADM-22/88-89. Finders please call Mob: 9343774921

ಬೋಳು ತಲೆಯ ಸಮಸ್ಯೆಯೇ?



ಕಿಮೊಥೆರಪಿ ಚಿಕಿತ್ಸೆಗೆ ಒಳಪಟ್ಟಿರುವ ರೋಗಿಗಳಿಗೆ ಪ್ರಥಮತ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING
574, 9th Cross, Arikethana Road, kuvempunagar, Mysuru
MYSURU 9591311161 MANGALORE 9901910161

PRATHAM

is looking for the Content Training Associate, DTP Operator, Team Leader for the Mysore location. Programme focuses on teaching primary school children. Qualification: MSW / Any Degree with strong technical skills. Contact:

Mob: 9535696842

ತಕ್ಷಣ ಬೇಕಾಗಿದ್ದಾರೆ

ಎಲೆಕ್ಟ್ರಾನಿಕ್ಸ್ ಕಂಪನಿ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಕೆಲಸಕ್ಕೆ ಬೇಕಾಗಿದ್ದಾರೆ. ಡಿಪ್ಲೊಮಾ / ITI / PUC / SSLC ವೇತನ: 16720/-

Mob: 7829089831

ತಿ.ನರಸೀಪುರದಲ್ಲಿ

30x61 ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಾರ್ವಜನಿಕ ಆಸ್ಪತ್ರೆ ಮುಖ್ಯ ರಸ್ತೆ, ಲಿಟಲ್ ಫ್ಲವರ್ ಕಾನ್ವೆಂಟ್ ಪಕ್ಕ, ಖಾಸಗಿ ಬಸ್ ನಿಲ್ದಾಣದ ಹತ್ತಿರ,

30x60(1800 Sqft) ಹಾಲ್ ಬಾಡಿಗೆಗೆ/ಭೋಗ್ಯಕ್ಕೆ ದೊರೆಯುತ್ತದೆ.

9448390643
6366511883

HOUSE FOR SALE

30X50 -two bed room, attached bathroom - solar, fully loaded KHB NISARGA LAYOUT ILAVALA - 69 LAKH'S

Ph : 9379655551

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7975101020

ಬೇಕಾಗಿದ್ದಾರೆ

ಧಾರ್ಮಿಕ ಟ್ರಸ್ಟ್‌ಗೆ 300+ ಅರೆಕಾಲಿಕ (part time) SSLC/PUC/ ಪದವೀಧರರು Work From Home ವೇತನ: ಕಾರ್ಯಕ್ಷಮತೆ ಆಧಾರಿತ ಗೆ ಅರ್ಜಿಯನ್ನು ಕಳುಹಿಸಿ gautamatrst@gmail.com (ವಿವರಗಳು ಇಮೇಲ್ ಮೂಲಕ)

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಸೈಟುಗಳು ಮಾರಾಟಕ್ಕಿವೆ

ಟಿ.ನರಸೀಪುರ ಮೇನ್ ರೋಡ್ ಹತ್ತಿರ 30x50 corner, 30x50 South, 30x50 West. ಕಮರ್ಷಿಯಲ್ East 40x60. Alanahalli Ring Road 40x40. LBS Layout 40x60 West. Contact:

Mob: 9187593627

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

8197383645, 9008711654

N/E Corner Ground Floor only out of three floors available for sale. 34x70 house with 10feet free space on all 3 sides Jeevanbhima nagara. Bengaluru 2.5 Cr

9449448797

ಚಾಲಕರು ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ ಸಂಸ್ಥೆಗೆ ಟ್ರೈಲರ್ ವಾಹನಗಳಿಗೆ (18 ಚಕ್ರದ) ಅನುಭವಿ ಚಾಲಕರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನದೊಂದಿಗೆ ಇಎಸ್ಐ ಮತ್ತು ಪಿಎಫ್ ಸೌಲಭ್ಯಗಳಿವೆ. ಸಂಪರ್ಕಿಸಿ:

6366227104
9740437200

FOR SALE

2 & 3 BHK New Apartments @ Ramakrishna Nagar.
30x50, 50x80 Sites @ 50Ft & 60Ft Road Approach Next to RT Nagar, Brahmins Layout Attach
20x30, 30x40, 30x50 Sites Near Rainbow School, Bogadi

PRAKRUTHI PROPERTIES
95386 90359, 90359 90359

FOR SALE

40x60 E/F MUDA auction site @ Vijayanagar 4th Stage, 40x70, N/E Corner site @ Srirampura, 10 acres agriculture land and farm house @ Talakadu.

7411363509, 9945019509

FOR SALE

Semi-Commercial Corner Site@JP Nagar
40x60 Site@ 80ft Rd Dattgalli
2 BHK APARTMENT & 2 BHK HOUSE NR INFOSYS, BELGOLA
40x60 Commercial Property @ 80ft Road, Srirampura
23x35 G+1 House @ Srirampura
20x30 Site @ VRL Lyt, HD Kote Rd

PRAKRUTHI PROPERTIES
95386 90359, 90359 90359

SITE FOR SALE

30x40 W/F, Jnanaganga House Building, Dhanagalli 'B' Block, R.K. Layout. 30x40 East-South corner (980 sq.ft.). Gurur Main Road, Opp. Ramabai Nagar.

Mob: 98454 11228

ಶುದ್ಧ ಗಾಣದ ಎಣ್ಣೆ ದೊರೆಯುತ್ತದೆ

ಚೆನ್ನಮ್ಮ ಅಜ್ಜಿ ಗಾಣದ ಎಣ್ಣೆ ಕರ್ನಾಟಕಾದ್ಯಂತ ಉಚಿತ (Free) ಹೋಮ್ ಡೆಲಿವರಿ ಮಾಡಿಕೊಡಲಾಗುತ್ತದೆ.

Mob: 9900993370

JNANAJYOTHI VIDYALAYA

BEERIHUNDI. (High School)
WANTED TEACHERS
English Teacher-1, Social science-1
Immediately Contact-

9845390377
8197057626

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ (ಹಿನಕಲ್, ಒಂಟಿಕೊಪ್ಪಲ್, ಎಲೆತೋಟ, ಸಿಟಿ)
2) ಗಾರ್ಡನ ಕೆಲಸಕ್ಕೆ – ಮಹಿಳೆಯರು (ಮೇಟಗಳ್ಳಿ)

9731663856
7795162227

ವಧು-ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)

9343175000



SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ

ಇಸ್ಕಾನ್ ಮೈಸೂರುಗೆ: ಮನೆ ಸ್ವಚ್ಛತೆ – 2, ಶೂ ಸ್ಟ್ಯಾಂಡ್ –1 ಶೌಚಾಲಯ (ಪುರುಷ) –3, ಭದ್ರತಾ ಸಿಬ್ಬಂದಿ – 5, ಅನುಭವಿಗಳಿಗೆ ಆದ್ಯತೆ, ಸಂಬಳ: ಎನ್‌ಜಿಒ ಸಮಾನ, ಸೌಲಭ್ಯ: ಉಚಿತ ಅನ್ನದಾಸೋಹ, ಸಂಪರ್ಕ:

8496915162
6364554306

ಬಸ್ ಚಾಲಕರು ಬೇಕಾಗಿದ್ದಾರೆ

ಮೈಸೂರಿನ ವಿಜಯನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶಾಲೆಗೆ ಬಸ್ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ

9483670193

ಮನೆ ಮಾರಾಟಕ್ಕಿದೆ

ಮುಡಾ ಲಲಿತಾದ್ರಿನಗರ ದಕ್ಷಿಣ ಬಡಾವಣೆ ಮೈಸೂರು. 60'x40'(ಉತ್ತರ) ಅಳತೆಯ ನಿವೇಶನದಲ್ಲಿ ಇತ್ತೀಚೆಗೆ ನಿರ್ಮಿಸಲಾದ 1465 ಚ.ಅಡಿ ಮನೆ ಮಾರಾಟಕ್ಕಿದೆ. ಮೂಲ ಮಾಲೀಕರಿಂದಲೇ ಮಾರಾಟ, ಎಲ್ಲಾ ದಾಖಲೆಗಳು ಲಭ್ಯವಿದೆ. ಸಂಪರ್ಕಿಸಿ.

9740750988
9740729840

ಬೇಕಾಗಿದ್ದಾರೆ

ಹುಡುಗರು, ಹುಡುಗಿಯರು ಸೆಕ್ಯೂರಿಟಿ ಗಾರ್ಡ್ & ಹೌಸ್ ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.

7411646663
9353046663

SITE FOR SALE

In hebbal infosys 7 Acres JV land MUDA approved layout sites for sales. 40x60 E/N Facing only available, Sq.ft 3500/-, Limited Sites only available,

9380142389

ಸೈಟು ಬೇಕಾಗಿದೆ

ಸಿದ್ಧಾರ್ಥನಗರ ವಿನಯಮಾರ್ಗ ಮುಖ್ಯರಸ್ತೆ ಅಥವಾ ಡಿ.ಸಿ. ಆಫೀಸ್ ಮುಖ್ಯರಸ್ತೆಯಲ್ಲಿ ಖಾಲಿ ಜಾಗ (ಸೈಟ್) ಸುಮಾರು 4000 ದಿಂದ 6000 ಅಡಿಗಳು ಬಾಡಿಗೆಗೆ ಅಥವಾ ಭೋಗ್ಯಕ್ಕೆ ಬೇಕಾಗಿರುತ್ತದೆ. ಸಂಪರ್ಕಿಸಿ

9538362666

ಸೈಟು ಮಾರಾಟಕ್ಕಿದೆ

30x50(ರವಿನ್ಯೂ) ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ಹಿಂಭಾಗ)

9886651605

ಬೇಕಾಗಿದ್ದಾರೆ

ಹಿನಕಲ್, ಸಿದ್ಧಾರ್ಥನಗರ, ಬಂಬೂಬಜಾರ್ ಮತ್ತು ರಾಮಸ್ವಾಮಿ ಸರ್ಕಲ್ ಹತ್ತಿರ, ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ :

9380990535

ಅಮೃತಧಾರೆ ವೃದ್ಧಾಶ್ರಮ

(ಸಸ್ಯಾಹಾರಿಗಳಿಗೆ ಮಾತ್ರ)
ವಯಸ್ಸಾದ ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ : ಪ್ರವೀಣಾ

9880277198
7892317304

ಬೇಕಾಗಿದ್ದಾರೆ

ಕುವೆಂಪುನಗರದ ಪಾರ್ಸಲ್ ಹೋಟೆಲ್‌ಗೆ ಹಿಟ್ಟು ಕಲಸುವವರು ಬೇಕಾಗಿದ್ದಾರೆ. ತಿಂಗಳಿಗೆ 15000/– ಸಂಬಳದೊಂದಿಗೆ ಊಟ, ವಸತಿ ಉಚಿತ, ಸಮಯ : ಬೆಳಿಗ್ಗೆ 10 ರಿಂದ 3 ಸಾಯಂಕಾಲ – 6 ರಿಂದ 10 pm

7204404170

WANTED TEACHING STAFF

for reputed institution (Experience Preferred) for all subjects.Transport facilities available. Drop your resume through WhatsApp, Contact no:

8971577685
9980631121

SITE FOR SALE

GSS Layout (Jayapura) 30x50 East Face (2 Sites) Price : 25 lakhs. Per, Sites

9481316084
8050989120

ಕೆಲಸಕ್ಕೆ ಬೇಕಾಗಿದ್ದಾರೆ

ಹಾಸ್ಪಿಟಲ್ ಅಲ್ಲಿ ಹೌಸ್ಕೀಪಿಂಗ್ ಕೆಲಸ ಮಾಡಲು ಮಹಿಳೆಯರು ಹಾಗೂ ವಾರ್ಡ್ ಬಾಯ್ ಬೇಕಾಗಿದ್ದಾರೆ. ಸೆಕ್ಯೂರಿಟಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.

9060106667, 9900663249, 9535296835, 9880116412

ಹೊಸ ಮನೆ ಮಾರಾಟಕ್ಕಿದೆ

30x40 - 4 BHK ಜಿಮ್ ರೂಮ್ ಕೂಡ ಇದೆ. ವಿಳಾಸ : ಶ್ರೀರಾಂಪುರ 2ನೇ ಹಂತ, ರಿಂಗ್ ರೋಡ್, ಪ್ರೀತಿ ಲೇಔಟ್ ಹತ್ತಿರ, ಮೈಸೂರು

9945615736
Site- West face, Door-North face

ಬಾಡಿಗೆಗೆ

1) ಮನೆ 2 BHK (unfurnished) ಪೂರ್ವದಿಕ್ಕು
2) ಅಂಗಡಿ 7x8 ಅಳತೆ ಪೂರ್ವದಿಕ್ಕು(ಗಲ್ಲಿಯಲ್ಲಿದೆ)
ಕೃಷ್ಣಮೂರ್ತಿಪುರಂ

9900391611

ಕೆಲಸಕ್ಕೆ ಬೇಕಾಗಿದ್ದಾರೆ

ಸೇಲ್ಸ್ ಗರ್ಲ್ ಮತ್ತು ಸೇಲ್ಸ್ ಬಾಯ್ಸ್
ಸಂಪರ್ಕಿಸಿ : ಪಯೋನೀರ್ ಸ್ಪೋರ್ಟ್ಸ್ ಪಂಚಮಂತ್ರ ರಸ್ತೆ, ಮೈಸೂರು

9980151488
9886324288

FOR SALE

40x60 NORTH FACING Near Rotary School, Dattagalli MUDA Approved

9480606154, 9448324232

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ & ಹೌಸ್‌ಕೀಪಿಂಗ್ ಫೀಲ್ಡ್ ಆಫೀಸರ್ ಮೈಸೂರಿನ ಸುತ್ತ ಕೆಲಸ ನಿರ್ವಹಿಸಲು 4–5 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕ್ಯಾಶಿಯರ್ ಕೆಲಸಕ್ಕೆ 2–3 ವರ್ಷ ಅನುಭವವಿರುವ ಮಹಿಳೆಯರು ಬೇಕಾಗಿದ್ದಾರೆ. ಹೆಬ್ಬಾಳಿನಲ್ಲಿರುವ ಸಾಫ್ಟ್‌ವೇರ್ ಕಂಪನಿಗೆ ಹೌಸ್‌ಕೀಪಿಂಗ್ ಸೂಪರ್‌ವೈಸರ್ & ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ:

7338676999
9606970941

ಬೇಕಾಗಿದ್ದಾರೆ

ಟ್ರೋಫಿ ಶಾಪ್ ನಲ್ಲಿ ಸ್ಟಿಕರ್ ಕಟಿಂಗ್, ಪೇಸ್ಟಿಂಗ್ ಮತ್ತು ಸ್ಟಾಕ್ ಮೇಂಟೈನ್ ಮಾಡಲು ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ಕನ್ನಡ ಓದಲು ಮತ್ತು ಬರೆಯಲು ಬರಬೇಕು ಸಂಬಳ 8000 ದಿಂದ 12000

9972827814
9741418376
ರಾಮಸ್ವಾಮಿ ಸರ್ಕಲ್ ಹತ್ತಿರ, ಮೈಸೂರು

ಕಾರ್ ಡ್ರೈವರ್ / ಚಾಲಕರು ಬೇಕಾಗಿದ್ದಾರೆ

ಭಾನುವಾರ ರಜೆ ಹಾಗೂ ಉತ್ತಮ ಸಂಬಳ.

Mob: 9916823834

Wanted female Office Assistant for our Audit Office - 1 post

Education qualification: PUC plus computer knowledge is essential, preferable to Hebbal surroundings area. Mob: 9740285064. Address: Nagarajegowda M.Com. (CA), Auditor & Tax Consultant, No. 240, 2nd Floor, Vijayanagar Rly Colony Main Road, Near Surya Bakery, Hebbal, Mysore-16

COMMERCIAL SITE FOR SALE

#780, 40x60 ರಾಜಕುಮಾರ್ ರಸ್ತೆಯಿಂದ VTU College Bus route ನಲ್ಲಿ 60 ft. ರಸ್ತೆಗೆ ಇದೆ.

Mob: 8971134052

ಸೈಟು ಬೇಕಾಗಿದೆ

ವಿಜಯನಗರ 1,2,3 ಹಾಗೂ 4ನೇ ಹಂತದಲ್ಲಿ 30x40 or 40x60 ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಮಾಲೀಕರು ನೇರವಾಗಿ ಸಂಪರ್ಕಿಸಬಹುದು.

9008173060, 9900263372

ಸೈಟು ಬೇಕಾಗಿದೆ

ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, JSS ಲೇಔಟ್, ನಿರ್ಮಾಣ್ ಲೇಔಟ್, ಬಸವೇಶ್ವರ ಲೇಔಟ್, ಸಪ್ತಮಾತೃಕೆ, LBS ಲೇಔಟ್, ವರುಣ, ವಾಜಮಂಗಲ, ವರಕೋಡು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ.

9686071750

FOR SALE

ವಿವೇಕಾನಂದನಗರ ಮನೆ 20x30, 40x60 KHB 30x40 Site ಕಂದಾಯನಗರ 30x40 Site

9008711654

SITE FOR SALE

30x40 West Facing Hebbal 2nd Stage Behind CITB Choultry

8453953435
9964449729

ಬೇಕಾಗಿದ್ದಾರೆ

ಹೋಟೆಲ್ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಕೌಂಟರ್ ದೋಸೆ ಭಟ್ಟರು, ಚೈನೀಸ್ ಕಟ್ಟಿಂಗ್

8550074110

FOR SALE

NF 13x33" 1 BHK GF Akshaya Bhandar Backside

9916615365

NOT GETTING YOUR STAR OF MYSORE & ಮೈಸೂರು ಮಿತ್ರ
Call:
98452-96447
99003-82840

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ವಿಕಲಚೇತನರಿಗೆ ಸಾಧನ ಸಲಕರಣೆ ವಿತರಣೆ

ರಾಜ್ಯ ಸರ್ಕಾರ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ: ಕೇಂದ್ರ ಸಚಿವ ಹೆಚ್‌ಡಿಕೆ

ಕೆ.ಆರ್.ನಗರ, ಏ.24– ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಇಂದು ನಡೆಯುತ್ತಿರುವ ವಿವಿಧ ಕಾರ್ಯಕ್ರಮಗಳಿಗೆ ಸಂಸದರ ನಿಧಿಯಿಂದ 20 ಕೋಟಿ ಅನುದಾನ ನೀಡಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ತಾಪಂ ಕಚೇರಿ ಆವರಣದಲ್ಲಿ ಸಂಸದರ ನಿಧಿಯಿಂದ 126 ವಿಕಲಚೇತನರಿಗೆ ವ್ಹೀಲ್ ಚೇರ್, ತ್ರಿಚಕ್ರ ಸೈಕಲ್, ವಾಕಿಂಗ್ ಸ್ಟಿಕ್, ಶ್ರಾವಣ ಸಾಧನ ವಿತರಣೆ ಹಾಗೂ 155 ಅಗತ್ಯ ಸಾಧನ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅಭಿವೃದ್ಧಿ ಕಡೆ ಗಮನ ಹರಿಸದೆ ಜನ ಸಾಮಾನ್ಯರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿವಿಧ ಅಭಿವೃದ್ಧಿ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಯುವಕರಿಗೆ ಉದ್ಯೋಗ ನೀಡುತ್ತಿಲ್ಲ ಈ ಸರ್ಕಾರಕ್ಕೆ ಮಾನವೀಯ ಮೌಲ್ಯಗಳು ಬೇಡವಾಗಿದೆ ಎಂದರು.

ನಾನು ಮೊದಲ ಬಾರಿಗೆ 2006ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಒಂದು ಸಾವಿರ ವಿಕಲಚೇತನರಿಗೆ ಉದ್ಯೋಗ ಕೊಡಿಸಿದ್ದೆ. ಆದರೆ ಉದ್ಯೋಗ ಖಾಯಂ ಮಾಡದೇ ಇದ್ದಾಗ ಮತ್ತೆ 2ನೇ ಅವಧಿಗೆ ಸಿಎಂ ಆಗಿದ್ದ ವೇಳೆ ಒಂದು ಸಾವಿರ ನೌಕರರ ಉದ್ಯೋಗ ಖಾಯಂಗೊಳಿಸಿದೆ. ಆ ಕುಟುಂಬಗಳು ಇಂದಿಗೂ ನೆನಪಿಸಿಕೊಳ್ಳುತ್ತಾರೆ ಎಂದರು.

ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸಿ: ಕೇಂದ್ರ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಧಿಕಾರಿಗಳು ಅತ್ಯಂತ ದಕ್ಷತೆ ಮತ್ತು ಕ್ಷಮತೆಯಿಂದ ಕೆಲಸ ಮಾಡಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.


ಕೆ.ಆರ್.ನಗರದ ತಾಪಂ ಆವರಣದಲ್ಲಿ ವಿಕಲಚೇತನರಿಗೆ ವ್ಹೀಲ್‌ಚೇರ್, ತ್ರಿಚಕ್ರ ಸೈಕಲ್, ವಾಕಿಂಗ್ ಸ್ಟಿಕ್, ಶ್ರಾವಣ ಸಾಧನ ಸೇರಿದಂತೆ ಇನ್ನಿತರ ಸಾಧನಗಳನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿತರಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಕೇಂದ್ರ ಸರ್ಕಾರ ವಿಕಲಚೇತನರಿಗೆ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ವಿಕಲಚೇತನರಿಗೆ ಅನುಕಂಪದ ಅಗತ್ಯವಿಲ್ಲ. ಅವರನ್ನು ಸಬಲೀಕರಣ ಮಾಡುವ ಅಗತ್ಯ ಬಹಳಷ್ಟಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಈ ಕಾರ್ಯಕ್ರಮಗಳನ್ನು ಪ್ರತಿಯೊಬ್ಬ ಫಲಾನುಭವಿಗೂ ಮುಟ್ಟಿಸಬೇಕಾದ ಕರ್ತವ್ಯ ಅಧಿಕಾರಿಗಳದ್ದು ಎಂದರು.

ಈಗಾಗಲೇ ಮಂಡ್ಯದಲ್ಲಿ ಅನೇಕ ವಿಕಲಚೇತನರಿಗೆ ಸೌಲಭ್ಯಗಳನ್ನು ವಿತರಿಸಲಾಗಿದೆ. 60 ಲಕ್ಷ ವೆಚ್ಚದಲ್ಲಿ 40 ಫಲಾನುಭವಿಗಳಿಗೆ ಬ್ಯಾಟರಿ ಚಾಲಿತ ತ್ರಿಚಕ್ರ ವಾಹನಗಳನ್ನು ವಿತರಿಸಲಾಗಿದೆ. ಹಾಗೆಯೇ ವಿವಿಧ ಸಿಎಸ್‌ಆರ್ ಮೂಲಗಳ ನೆರವಿನಿಂದ 365 ಹೆಚ್ಚು ವಿಕಲಚೇತನರಿಗೆ ಬ್ಯಾಟರಿ ಚಾಲಿತ ವಾಹನವನ್ನು ನೀಡಲಾಗಿದೆ ಎಂದರು.

ಕೆ.ಆರ್.ನಗರ ಸೇರಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಪರ ಕೆಲಸಗಳನ್ನು ಕೈಗೊಳ್ಳಲಾಗಿದೆ. ಸಿಎಸ್‌ಆರ್ ನಿಧಿ ಅನುದಾನ ಅಡಿ ಅನೇಕ ಶಾಲೆಗಳಿಗೆ ನೂತನ ಕಟ್ಟಡಗಳ ನಿರ್ಮಾಣ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಇದೇ ವೇಳೆ ವಿಕಲಚೇತನರಿಗೆ ಹತ್ತು ಹಲವು ರೀತಿ ಸರ್ಕಾರದ ಸವಲತ್ತುಗಳನ್ನು ತಲುಪಿಸುತ್ತಿದ್ದ ಸಮಾಜ ಸೇವಕ ಕೆ.ಎಲ್.ಹೇಮಂತ್ ಅವರನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸನ್ಮಾನಿಸಿದರು. ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ವಿಕಲಚೇತನರು ಅಭಿನಂದಿಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕರಾದ ಅಶ್ವಿನ್, ಕೆ.ಮಹದೇವ್, ನಾಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಜಿಪಂ ಮಾಜಿ ಸದಸ್ಯರಾದ ಎಂ.ಟಿ.ಕುಮಾರ್, ಅಚ್ಯುತಾನಂದ್, ಅಮಿತ್ ದೇವರಹಟ್ಟಿ, ಸಿ.ಜೆ.ದ್ವಾರಕೀಶ್, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ಜೆಡಿಎಸ್ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮೀ, ವಕೀಲ ಅಂಕನಹಳ್ಳಿ ತಿಮ್ಮಪ್ಪ ಹುಣಸೂರು ಉಪವಿಭಾಗಾಧಿಕಾರಿ ಕಾವ್ಯರಾಣಿ, ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ, ತಾಪಂ ಇಓ ಕುಲದೀಪ್, ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ರಾಘವೇಂದ್ರ ಸಿಡಿಪಿಓ ಅಣ್ಣಯ್ಯ ಸೇರಿದಂತೆ ಅನೇಕರಿದ್ದರು.

ಸಾಲಿಗ್ರಾಮ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಡೇರಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ಅಭಿನಂದಿಸಿದರು.

ಭೇರ್ಯ, ಏ.24– ಸಾಲಿಗ್ರಾಮ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಆರ್.ಮಹೇಂದ್ರ, ಉಪಾಧ್ಯಕ್ಷರಾಗಿ ದಾಸಿ ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಏ.12ರಂದು ಡೇರಿಯ 12 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಸಂಘದ ಆವರಣದಲ್ಲಿ ನಡೆದ ನೂತನ ವರಿಷ್ಠರ ಆಯ್ಕೆ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಆರ್.ಮಹೇಂದ್ರ, ಉಪಾಧ್ಯಕ್ಷ ಸ್ಥಾನಕ್ಕೆ ದಾಸಿ ಮಹೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಅಭಿವೃದ್ಧಿ ಅಧಿಕಾರಿ ಎಸ್.ರವಿ ಪ್ರಕಟಿಸಿದರು. ಸಂಘದ ಕಾರ್ಯದರ್ಶಿ ಎಸ್.ಡಿ.ಚೇತನ್ ಸಹಕಾರ ನೀಡಿದರು.

ಈ ವೇಳೆ ನಿರ್ದೇಶಕರಾದ ಎಸ್.ಕೆ. ಮಧುಚಂದ್ರ, ಸೀತಣ್ಣ, ಜಗದೀಶ್, ಎಸ್.ಆರ್.ಲೋಕೇಶ್, ಪಾಪಣ್ಣ, ಶಶಿಕುಮಾರ್, ಅರುಣ್ ಕುಮಾರ್, ರಾಮನಾಯಕ, ರಾಣಿ, ಅಶ್ವಿನಿ ಇದ್ದರು.

ಇದೇ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್, ಸಾಲಿಗ್ರಾಮ ಸೇರಿದಂತೆ ಅವಳಿ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘ ಚುನಾವಣೆಯಲ್ಲಿ ಬಹುತೇಕ ಜೆಡಿಎಸ್ ಬೆಂಬಲಿತರು ಆಯ್ಕೆಯಾಗುತ್ತಿರುವುದು ಸಂತಸ ತಂದಿದೆ. ಕ್ಷೇತ್ರದಲ್ಲಿ ಈಗಾಗಲೇ 3 ವರ್ಷಗಳಲ್ಲಿ ಆಡಳಿತ ವಿರೋಧಿ ಅಲೆ ಎದ್ದಿದ್ದು ಜನ ಸಾಮನ್ಯರು ಕ್ಷೇತ್ರದ ಮಾಜಿ ಸಚಿವರಾದ ಸಾ.ರಾ.ಮಹೇಶ್ ಅವರಿಗೆ ಬೆಂಬಲ ವ್ಯಕ್ತಪಡಿಸಿ ಜೆಡಿಎಸ್ ಪಕ್ಷ ಸೇರುತ್ತಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಮುಖಂಡರಾದ ಸಾ.ರಾ. ಸತೀಶ್, ಬಿಡಿಎಸ್ ಸುನೀಲ್, ಎಸ್.ಕೆ. ಜಯರಾಮ್, ಮಾಜಿ ನಿರ್ದೇಶಕ ಅಯ್ಯಪ್ಪ, ಪಿಎಸಿಎಸ್ ಮಾಜಿ ಅಧ್ಯಕ್ಷ ಸತೀಶ್, ಪಾಪಣ್ಣ ನಿರ್ದೇಶಕ ಅನಂತ್ ಕುಮಾರ್, ಜೆಡಿಎಸ್ ಮುಖಂಡ ಉದಯ್ ಕುಮಾರ್, ಮೀನು ಶಿವು ಮೊದಲಾದವರು ಇದ್ದರು.

ಗಾಣಿಗ ಸಮುದಾಯ ಭವನದ

ಮುಂದುವರೆದ ಕಾಮಗಾರಿಗೆ ಗುದ್ದಲಿ ಪೂಜೆ

ಹುಣಸೂರು, ಏ.24– ಸಣ್ಣ ಪುಟ್ಟ ಸಮುದಾಯಗಳು ಯಾವುದೇ ಗೊಂದಲ ಮಾಡಿಕೊಳ್ಳದೇ ಸಮುದಾಯದ ಅಭಿವೃದ್ಧಿಗೆ ಮುಂದಾಗಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಗಣೇಶನ ಗುಡಿ ಬೀದಿಯಲ್ಲಿ ಗಾಣಿಗ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಮುದಾಯದವರ ಒಗ್ಗಟ್ಟಿನ ಕೊರತೆಯಿಂದಾಗಿ ಭವನದ ಕಾಮಗಾರಿ ಅನೇಕ ವರ್ಷಗಳಿಂದ ಅರ್ಧಕ್ಕೆ ನಿಂತಿದ್ದು, ಮುಂಬರುವ ಜನವರಿ ವೇಳೆಗೆ ಪೂರ್ಣಗೊಳಿಸಿ ಸಮುದಾಯದ ಬಳಕೆಗೆ ನೀಡಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ಹೆಚ್.ಡಿ.ದೇವೇಗೌಡರ ರಾಜ್ಯಸಭಾ ನಿಧಿ 20 ಲಕ್ಷ, ಎಂಎಲ್‌ಸಿ ಹೆಚ್.ವಿಶ್ವನಾಥ್ ಅವರ 20 ಲಕ್ಷ ಸೇರಿದಂತೆ 40 ಲಕ್ಷ ವೆಚ್ಚದಲ್ಲಿ ಕಾಮಗಾರಿ ಆರಂಭಿಸಿ ಇನ್ನುಳಿದ ಹಣವನ್ನು ನನ್ನ ಶಾಸಕರ ನಿಧಿಯಿಂದ ನೀಡಿ ಸಮುದಾಯ ಭವನ ಕಾಮಗಾರಿ ಪೂರ್ಣಗೊಳಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಕರೆತಂದು ಭವನವನ್ನು ಅದ್ದೂರಿಯಾಗಿ ಉದ್ಘಾಟಿಸೋಣ ಎಂದರು.


ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಎಂಎಲ್‌ಸಿ ಹೆಚ್.ವಿಶ್ವನಾಥ್ ಮಾತನಾಡಿ, ಸಮುದಾಯದ ಸಾಮರಸ್ಯದ ಕೊರತೆಯಿಂದ ಮತ್ತು ಪ್ರತಿಷ್ಠೆಯ ಕಿನ್ನತೆಯಿಂದ ಸಮುದಾಯ ಭವನವು ಕಳೆದ 25 ವರ್ಷಗಳಿಂದ ಪೂರ್ಣಗೊಳ್ಳದೇ ಅರ್ಧಕ್ಕೆ ನಿಂತಿದೆ. ಭವನದ ಕಾಮಗಾರಿ ಆರಂಭಕ್ಕೆ 20 ಲಕ್ಷ ರೂ. ನೀಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ನೀಡುವೆ ಎಂದು ತಿಳಿಸಿದ್ದೆ. ಅದರೆ ಸಮಾಜದವರ ಸಾಮರಸ್ಯ ಕೊರೆತೆಯಿಂದಾಗಿ ಕಾಮಗಾರಿ ಪ್ರಾರಂಭವಾಗಲಿಲ್ಲ. ಇದೀಗ ಕಾಮಗಾರಿ ಪುನಾರಂಭಿಸಲು ಮುಂದಾಗಿದ್ದೀರಾ. ಹಣವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗಾಣಿಗ ಸಮಾಜದ ಜಿಲ್ಲಾಧ್ಯಕ್ಷ ಕೆ.ಸಿ.ಉಮೇಶ್, ತಾಲೂಕು ಅಧ್ಯಕ್ಷ ಇಂಟಕ್ ರಾಜು, ಕಾರ್ಯದರ್ಶಿ ಹೆಚ್.ಟಿ.ಬಾಬು, ಉಪಾಧ್ಯಕ್ಷ ಡಿ.ಎಸ್. ಮಹದೇವು, ಮಾಜಿ ಕಾರ್ಯದರ್ಶಿ ಕೆ.ಟಿ. ನಾಗರಾಜು, ಪೌರಾಯುಕ್ತೆ ಮಾನಸ, ಮಾಜಿ ನಗರಸಭಾ ಸದಸ್ಯ ಶರವಣ, ಮನುಕುಮಾರ್, ಸಂತೋಷ್, ಅಜಯ್, ಮಹೇಶ್, ಸುರೇಶ್, ಪ್ರಸಾದ್, ಚಿನ್ನಸ್ವಾಮಿ, ಶಿವಪ್ಪ, ಇತರರಿದ್ದರು.

ದೇವಾಲಯಗಳು ಮನುಷ್ಯನ ಶಾಂತಿ, ನೆಮ್ಮದಿಯ ತಾಣಗಳು

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ನಂಜನಗೂಡು, ಏ.24– ದೇವಾಲಯಗಳು ಭಾರತೀಯ ಸಂಸ್ಕೃತಿ, ಕಲೆಯ ಕೇಂದ್ರಗಳಾಗಿದ್ದು, ಮನುಷ್ಯನಿಗೆ ದೈವಿಕ ಶಕ್ತಿಯ ಜೊತೆಗೆ ಮಾನಸಿಕ ಶಾಂತಿ, ನೆಮ್ಮದಿ, ಆಶ್ರಯ ನೀಡುವ ತಾಣಗಳಾಗಿವೆ ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ವಳಗೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಶನೀಶ್ವರ ಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮನುಷ್ಯನಿಗೆ ದೇವರಲ್ಲಿ ವಿಶ್ವಾಸವಿದ್ದಲ್ಲಿ ಮಾತ್ರ ಅವನು ಮಾನಸಿಕವಾಗಿ ಸುಖ, ಶಾಂತಿ, ಸಮೃದ್ಧಿಯಿಂದ ಇರಲು ಸಾಧ್ಯ. ನಮ್ಮ ಹಿರಿಯರು ಪ್ರಕೃತಿ, ಹರಿಯುವ ನೀರನ್ನು ದೇವರೆಂದು ಪೂಜಿಸುತ್ತಾ ಬಂದಿದ್ದಾರೆ. ಪ್ರಕೃತಿ ಮನುಷ್ಯನ ಜೀವನ, ಮನಸ್ಸನ್ನು ಪರಿಶುದ್ಧವಾಗಿಸುತ್ತದೆ. ಆದ್ದರಿಂದಲೇ ನಮ್ಮ ಹಿರಿಯರು ದೇವರ ಹೆಸರಿನಲ್ಲಿ ಮನುಷ್ಯನನ್ನು ಪ್ರಕೃತಿಯಲ್ಲಿ ಲೀನವಾಗಿಸುವ ಪ್ರಯತ್ನ ನಡೆಸಿದ್ದಾರೆ. ದೇವರ ಪೂಜೆ ಮಾಡುವುದು ಹೊರಗಿನ ಐಶ್ವರ್ಯ ಶ್ರೀಮಂತಿಕೆ ತೋರ್ಪಡಿಸಲು ಅಲ್ಲ. ನಮ್ಮ ಆಂತರಿಕ ಶಾಂತಿ ಮತ್ತು ನೆಮ್ಮದಿಗಾಗಿ ದೇವರನ್ನು ಪೂಜಿಸಬೇಕು. ಮನುಷ್ಯನಿಗೆ ಮಾನಸಿಕ ಶಾಂತಿ ಮುಖ್ಯ. ಮನುಷ್ಯನ ಶಾಂತಿ ನೆಮ್ಮದಿಗಾಗಿ ದೇಶದಲ್ಲಿ ಸಹಸ್ರಾರು ವರ್ಷಗಳಿಂದಲೂ ಸಹ ದೇವಾಲಯದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ತಾಲೂಕಿನ ವಳಗೆರೆಯಲ್ಲಿ ನೂತನವಾಗಿ ನಿರ್ಮಿಸಿರುವ ಶನೇಶ್ವರ ದೇವಾಲಯದ ಮೂಲಕ ಎಲ್ಲರೂ ದುಶ್ಚಟಗಳಿಂದ ದೂರವಿದ್ದು, ಶಾಂತಿ, ನೆಮ್ಮದಿಯಿಂದ ಸಹಬಾಳ್ವೆ ನಡೆಸಬೇಕು ಎಂದು ಕರೆ ನೀಡಿದರು.


ಕಾರ್ಯಕ್ರಮವನ್ನು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ದೇವಾಲಯ ಉದ್ಘಾಟನೆ ಅಂಗವಾಗಿ ಕಳೆದ 3 ದಿನಗಳಿಂದ ಹೋಮ ಹವನ, ಕಳಸ ಪ್ರತಿಷ್ಠಾಪನೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಲಾಯಿತು. ಸಂಸದ ಯದುವೀರ್, ಮಾಜಿ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿದ್ದರು.

ಸಮಾರಂಭದಲ್ಲಿ ದೇವನೂರು ಮಠದ ಮಹಾಂತ ಸ್ವಾಮೀಜಿ, ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಶಾಸಕ ಹೆಚ್.ಎಂಗಣೇಶ್‌ಪ್ರಸಾದ್, ಕಾಂಪ್ರೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ರೈತ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಸೇರಿದಂತೆ ಹಲವಾರು ಮಠದ ಹರ ಗುರುಚರ ಮೂರ್ತಿಗಳು ಮತ್ತು ಶನೇಶ್ವರ ಸ್ವಾಮಿ ಸೇವಾ ಟ್ರಸ್ಟ್ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

> “ನೀವು ಬದುಕಿ ಬೇರೆಯವರನ್ನು ಸಹ ಬದುಕಲು ಬಿಡಿ ಎಂಬುದು ಶ್ರೇಷ್ಠ ಧರ್ಮವಾಗಿದ್ದು, ನಾವೆಲ್ಲರೂ ಬಸವಣ್ಣನವರ ಧರ್ಮದ ಸಂದೇಶಗಳನ್ನು ಅರ್ಥೈಸಿಕೊಳ್ಳಬೇಕು. ಪ್ರಮುಖವಾಗಿ ಭಕ್ತಿಯಿಂದ ದೇವರನ್ನು ಪೂಜಿಸಬೇಕೆ ಹೊರತು ಭಯದಿಂದ ಪೂಜಿಸಬಾರದು. ನಮ್ಮ ತನು ಮನವನ್ನು ಸಂತೈಸುವಂತೆ ದೇವರನ್ನು ಪೂಜಿಸು ಎಂದು ಧರ್ಮ ಹೇಳುತ್ತದೆ. ಆದ್ದರಿಂದ ನಾವೆಲ್ಲರೂ ಮನಸ್ಸನ್ನು ಕೇಂದ್ರೀಕರಿಸುವ ಆಚರಣೆಗಳನ್ನು ಆಚರಣೆಗೆ ತರಬೇಕು ನಾವೆಲ್ಲರೂ ಒಂದಾಗಿ ಸಹಬಾಳ್ವೆ ನಡೆಸಬೇಕು. – ಮಾಧುಸ್ವಾಮಿ, ಶಾಸಕ.

ಹೆಚ್‌ಡಿಕೆ ಕೈಯಲ್ಲಿ 'ಮೈಸೂರು ಮಿತ್ರ'



ಕೆ.ಆರ್.ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು 'ಮೈಸೂರು ಮಿತ್ರ' ಪತ್ರಿಕೆ ಓದುವುದರಲ್ಲಿ ತಲ್ಲೀನರಾಗಿರುವುದು. ಈ ವೇಳೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಇದ್ದಾರೆ.

ವಾಯು ವಿಹಾರಕ್ಕೆ ತೆರಳಿದ್ದ ಇಬ್ಬರ ಮೇಲೆ ಕಾಡಾನೆ ದಾಳಿ

ಹೆಚ್.ಡಿ.ಕೋಟೆ, ಏ.24– ವಾಯು ವಿಹಾರಕ್ಕೆ ತೆರಳಿದ್ದ ಇಬ್ಬರ ಮೇಲೆ ಕಾಡಾನೆ ದಾಳಿ ನಡೆಸಿರುವ ಘಟನೆ ತಾಲೂಕಿನ ಹಂಪಾಪುರ ಗ್ರಾಮದ ಬಳಿ ಶುಕ್ರವಾರ ಮುಂಜಾನೆ ನಡೆದಿದೆ.

ತಾಲೂಕಿನ ಹಂಪಾಪುರ ಗ್ರಾಮದ ನಿವಾಸಿ ಸಿದ್ದೇಗೌಡ, ಮೈಸೂರು ತಾಲೂಕಿನ ಮದ್ದೂರು ಗ್ರಾಮದ ನಿವಾಸಿ ಮರಿಲಿಂಗ ಗಾಯಗೊಂಡವರು. ಶುಕ್ರವಾರ ಬೆಳಗ್ಗೆ ಸಿದ್ದೇಗೌಡ ಹಾಗೂ ಮರಿಲಿಂಗ ಅವರು ವಾಯುವಿಹಾರಕ್ಕೆ ತೆರಳಿದ್ದ ವೇಳೆ ಏಕಾಏಕಿ ಕಾಡಾನೆ ದಾಳಿ ನಡೆಸಿದೆ. ಈ ವೇಳೆ ಭಯಗೊಂಡ ಸಿದ್ದೇಗೌಡ, ಮರಿಲಿಂಗ ಸ್ಥಳದಿಂದ ಓಡಲು ಯತ್ನಿಸಿದರಾದರೂ ಸಾಧ್ಯವಾಗದೇ ಕೆಳಗೆ ಬಿದ್ದಿದ್ದಾರೆ. ಈ ಸಂದರ್ಭ ಆನೆ ತನ್ನ ಸೊಂಡಲಿನಿಂದ ದಾಳಿ ನಡೆಸಿ ಗಾಯಗೊಳಿಸಿದ್ದು, ಇವರ ಚೀರಾಟದಿಂದ ಆನೆ ಸ್ಥಳದಿಂದ ಪರಾರಿಯಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಪ್ರಾದೇಶಿಕ ಅರಣ್ಯಾಧಿಕಾರಿ ರವಿಕುಮಾರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಗಾಯಾಳುಗಳನ್ನು ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಿದ್ದಾರೆ.

5.08 ಎಕರೆ ಭೂಮಿ ರೇಷ್ಮೆ ಇಲಾಖೆಗೆ ಹಸ್ತಾಂತರ

ಸರ್ಕಾರದ ನಿರ್ಧಾರಕ್ಕೆ ಕೆ.ರಾಜು ಸ್ವಾಗತ



ತಿ.ನರಸೀಪುರ, ಏ.24– ಪಟ್ಟಣದ ರೇಷ್ಮೆ ನೂಲು ತಯಾರಿಕಾ ಘಟಕದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಕ್ರೀಡಾಂಗಣ ಕಾಮಗಾರಿ ಕೈಬಿಟ್ಟು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ವರ್ಗಾಯಿಸಿದ್ದ 5.08 ಎಕರೆ ಭೂಮಿಯನ್ನು ಮತ್ತೆ ರೇಷ್ಮೆ ಇಲಾಖೆಗೆ ನೀಡುವಂತೆ ಅಧಿಕೃತ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಕನ್ನಡ ಸೇನೆ–ಕನ್ನಡ ಸಂಘಟನೆ ತಾಲೂಕು ಅಧ್ಯಕ್ಷ ಭೈರಾಪುರ ಕೆ.ರಾಜು ಸ್ವಾಗತಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಈ ಐತಿಹಾಸಿಕ ನಿರ್ಧಾರದಿಂದ ಕಾರ್ಮಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಸರ್ಕಾರವು ಕಾರ್ಮಿಕರ ಹಿತ ಕಾಪಾಡಲು ಕೈಗೊಂಡ ಸಮಯೋಚಿತ ನಿರ್ಧಾರ ನಿಜಕ್ಕೂ ಶ್ಲಾಘನೀಯ. ಇದಕ್ಕಾಗಿ ನಮ್ಮ ಸಂಘಟನೆ ವತಿಯಿಂದ ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವರು ಹಾಗೂ ಶಾಸಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಪಟ್ಟಣದ ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಕಾರ್ಮಿಕರು ಹಾಗೂ ಸಾರ್ವಜನಿಕರು, ವಿವಿಧ ಸಂಘಟನೆಗಳು, ಪರಿಸರವಾದಿಗಳ ವಿರೋಧದ ನಡುವೆ ಸರ್ಕಾರ ಕ್ರೀಡಾಂಗಣ ನಿರ್ಮಿಸಲು ಮುಂದಾಗಿತ್ತು. ಈ ಸಂಬಂಧ 5.08 ಎಕರೆ ಜಾಗವನ್ನು ಸಂಬಂಧಿಸಿದ ಕ್ರೀಡಾ ಇಲಾಖೆಗೆ ವರ್ಗಾವಣೆ ಮಾಡಿತ್ತು ಈ ನಡೆ ಖಂಡಿಸಿ ಫ್ಯಾಕ್ಟರಿ ಆವರಣದಲ್ಲಿ ಅನೇಕ ಸಂಘಟನೆಗಳ ಮುಖ್ಯಸ್ಥರು, ಪರಿಸರವಾದಿಗಳು, ಕನ್ನಡ ಸೇನೆ–ಕರ್ನಾಟಕ ಸಂಘಟನೆ ಹಾಗೂ ಕಾರ್ಮಿಕರು ಸರಣಿ ಪ್ರತಿಭಟನೆಗಳನ್ನು ನಡೆಸಿದ್ದರು.

ವಿಪಕ್ಷ ನಾಯಕ ಆರ್.ಅಶೋಕ್, ಸಂಸದ ಯದುವೀರ್, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎನ್. ಮಹೇಶ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಬಾಲರಾಜು ಸೇರಿದಂತೆ ವಿವಿಧ ರಾಜಕೀಯ ಮುಖಂಡರು ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ್ದರೆ, ಪುರಸಭೆ ಮಾಜಿ ಸದಸ್ಯ ಆರ್. ಅರ್ಜುನ್, ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಪ್ರತಿಭಟನೆ ತಾರಕಕ್ಕೇರುತ್ತಿದ್ದಂತೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸ್ಥಳ ಪರಿಶೀಲಿಸಿ ಮತ್ತೊಂದು ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ವಿಧಾನಸಭೆ ಅಧಿವೇಶನದಲ್ಲಿ ಆರ್.ಅಶೋಕ್ ಈ ಬಗ್ಗೆ ವಿಷಯ ಪ್ರಸ್ತಾಪಿಸಲಾಗಿ ಸಚಿವ ಕೆ.ವೆಂಕಟೇಶ್ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟಿರುವುದಾಗಿ ಅಧಿಕೃತವಾಗಿ ಘೋಷಿಸಿದ್ದರು. ಈಗ ಸರ್ಕಾರವು ಅಧಿಕೃತವಾಗಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಗೆ ನೀಡಿದ್ದ 5.08 ಎಕರೆ ಜಾಗವನ್ನು ಹಿಂಪಡೆದು ರೇಷ್ಮೆ ಇಲಾಖೆ ಸುಪರ್ದಿಗೆ ನೀಡುವಂತೆ ಆದೇಶಿಸಿರುವುದರಿಂದ ಕಾರ್ಮಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಪರಿಸರವಾದಿಗಳು, ರೈತ ಸಂಘಟನೆ ಮುಖ್ಯಸ್ಥರು ಹಾಗೂ ಎಲ್ಲಾ ಸಂಘಟನೆ ಸದಸ್ಯರಿಗೆ ಕನ್ನಡ ಸೇನೆ–ಕರ್ನಾಟಕ ಅಭಿನಂದನೆ ಸಲ್ಲಿಸುತ್ತದೆ ಎಂದು ತಾಲೂಕು ಅಧ್ಯಕ್ಷ ಕೆ.ರಾಜು ತಿಳಿಸಿದ್ದಾರೆ.

ಬಿಜಿಎಸ್ ಶಾಲೆಗೆ ಶೇ.100ರಷ್ಟು ಫಲಿತಾಂಶ



ತಿ.ನರಸೀಪುರ, ಏ.24– ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಬಿಜಿಎಸ್ ಶಾಲೆಗೆ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆ ಬರೆದಿದ್ದ ಎಲ್ಲಾ 32 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 18 ಅತ್ಯುನ್ನತ ಶ್ರೇಣಿ 9 ಪ್ರಥಮ ಮತ್ತು ಐವರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಪೈಕಿ ದೀಕ್ಷಾ ಪಟೇಲ್.ಎಂ 617 (ಶೇ.98.72) ಅಂಕಗಳಿಸಿ ತಾಲೂಕಿಗೆ 3ನೇ ಸ್ಥಾನ ಹಾಗೂ ಶಾಲೆಗೆ ಪ್ರಥಮ ಸ್ಥಾನ, ಮಾನಸ ಸಿ.ಎಸ್. 600 (ಶೇ.96) ಅಂಕಗಳಿಸಿ ದ್ವಿತೀಯ ಸ್ಥಾನ, ಕೀರ್ತನ ವಿ.ಸಿ 599 (ಶೇ.95.84) ಅಂಕಗಳಿಸಿ ಶಾಲೆಗೆ ತೃತೀಯ ಸ್ಥಾನ ಪಡೆದಿದ್ದು, ಚಂದನ 592 (ಶೇ.94.72), ಮಾನಸ 586 (ಶೇ.93.76), ವಿದ್ಯಾಶ್ರೀ 585 (ಶೇ.93.6), ಭೂಮಿಕಾ 582 (ಶೇ.93.12), ಯಶ್ವಿನ್ ದೇವ್ ಪ್ರಸಾದ್ ಡಿ 579 (ಶೇ.92.64), ಪೂರ್ವಿ 572 (ಶೇ.91.52), ಸಂಗೀತ 568(ಶೇ.90.88) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಉತ್ತಮ ಫಲಿತಾಂಶಕ್ಕೆ ಕಾರಣರಾದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಶ್ರೀಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ ಅಭಿನಂದಿಸಿದ್ದಾರೆ.

ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಶೇ.100 ಫಲಿತಾಂಶ



ತಿ.ನರಸೀಪುರ, ಏ.24– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಸೋಮನಾಥಪುರದ ಕುಳ್ಳನ ಕೊಪ್ಪಲು ಗ್ರಾಮದ ಆರೋಹಣ ಸೆಂಟ್ರಲ್ ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ತಿಳಿಸಿದ್ದಾರೆ.



ಶಾಲೆಯ ಧೃತಿಗೌಡ(587) 93.6%, ಕುಸುಮ.ಎಂ (576)92.16%, ಭೂಮಿಕಾ.ಎಂ (575) 92%, ಹರ್ಷಿತಾ.ಎಂ (571)91.36%, ಮನೋಜ್.ಆರ್ (550)88%, ಗೌರವ್.ವಿ (540)86.4% ಫಲಿತಾಂಶದೊಂದಿಗೆ ಅತ್ಯುತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲರು ಮತ್ತು ಶಿಕ್ಷಕ ವೃಂದ ಅಭಿನಂದಿಸಿದೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಹೆಚ್.ಡಿ.ಕೋಟೆ ಪ್ರಥಮ

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾಹಿತಿ

ಹೆಚ್.ಡಿ.ಕೋಟೆ, ಏ.24– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಶೇ.96.80ರಷ್ಟು ಫಲಿತಾಂಶ ಪಡೆಯುವ ಮೂಲಕ ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ತಿಳಿಸಿದರು.

ಪಟ್ಟಣದ ಪರ್ತಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ 1427 ವಿದ್ಯಾರ್ಥಿಗಳು, 1544 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 2971 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 2876 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 95 ಮಕ್ಕಳು ಅನುತ್ತೀರ್ಣರಾಗಿದ್ದಾರೆ.

ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ 2335 ಮಂದಿ ಪರೀಕ್ಷೆ ಎದುರಿಸಿದ್ದು, 2248 ಮಂದಿ ಉತ್ತೀರ್ಣರಾಗಿ ಶೇ.96.27 ಫಲಿತಾಂಶ ಬಂದಿದೆ. ಪಟ್ಟಣ ಪ್ರದೇಶದಲ್ಲಿ ಸರಗೂರು ಮತ್ತು ಹೆಚ್.ಡಿ.ಕೋಟೆ ಸೇರಿ 636 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 628 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.98.74 ರಷ್ಟು ಫಲಿತಾಂಶ ಬಂದಿದೆ ಎಂದರು.

ತಾಲೂಕಿನ ಕಂಚಮಳ್ಳಿ, ಜಿ.ಬಿ.ಸರಗೂರು, ಸರಗೂರು ಬಾಲಕರ ಶಾಲೆ, ದಡದಹಳ್ಳಿ, ಎಂ.ಸಿ.ತಳಲು, ಡಿ.ಬಿ.ಕುಪ್ಪೆ, ಕೆಂಚನಹಳ್ಳಿ, ಗಾಂಧಿನಗರ, ಸೊಳ್ಳೇಪುರದ ಏಕಲವ್ಯ, ಹಿರೇಹಳ್ಳಿ ಕಿತ್ತೂರು ಚೆನ್ನಮ್ಮ, ಅಂತರಸಂತೆ ಮೊರಾರ್ಜಿ ದೇಸಾಯಿ ಶಾಲೆಗಳು ಸೇರಿ 14 ಶಾಲೆಗಳು ಶೇ.100 ರಷ್ಟು ಫಲಿತಾಂಶ ಪಡೆದಿವೆ.



ಸುದ್ದಿಗೋಷ್ಠಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿದರು.

ತಾಲೂಕಿನಲ್ಲಿ 7 ಅನುದಾನಿತ ಶಾಲೆಗಳಿದ್ದು ಶೇ.97.90% ಫಲಿತಾಂಶ ದೊರತಿದೆ. ಮೇಟಿಕುಪ್ಪೆ ಗ್ರಾಮದ ಜೆಎಸ್‌ಎಸ್ ಮತ್ತು ಸೆಂಟ್ ಮೇರಿಸ್ ಶಾಲೆಗೆ ಶೇ.100 ಫಲಿತಾಂಶ ಬಂದಿದೆ.

ಅನುದಾನ ರಹಿತ 24 ಶಾಲೆಗಳಿದ್ದು, ಶೇ.96.56% ಫಲಿತಾಂಶ ಬಂದಿದೆ. ಚಂದ್ರಮೌಳೇಶ್ವರ, ಲಯನ್ಸ್ ಸರಗೂರು, ಚೇತನ ಆಲನಹಳ್ಳಿ, ಪಟ್ಟಣದ ಆದಿಚುಂಚನಗಿರಿ, ಯರಹಳ್ಳಿ ತಾರಕ ಶಾಲೆ, ಸೆಂಟ್ ಥಾಮಸ್ ಹೊನ್ನಮ್ಮನಕಟ್ಟೆ, ಜೆಎಸ್‌ಎಸ್ ಸರಗೂರು, ಪಟ್ಟಣದ ಸೇಂಟ್ ಮೇರಿಸ್, ಅನ್ವಯ ಪಬ್ಲಿಕ್, ಬಿ.ಮಟಕೆರೆ ಚತುರ್ಮುಖ ಶಾಲೆ, ಹಂಪಾಪುರದ ಸೆಂಟ್ ಪೋಲ್ ಶಾಲೆ ಶೇ.100 ಫಲಿತಾಂಶ ದೊರತಿದೆ ಎಂದರು.

ತಾಲೂಕಿನ ಅಣ್ಣೂರು ಹೊಸಹಳ್ಳಿ ಗ್ರಾಮದ ನಿವಾಸಿ, ಪಟ್ಟಣದ ಆದರ್ಶ ಶಾಲೆಯ ವಿದ್ಯಾರ್ಥಿನಿ ವೇದಶ್ರೀ(618) ತಾಲೂಕಿಗೆ ಪ್ರಥಮ, ಹ್ಯಾಂಡ್ ಪೋಸ್ಟ್ ನಿವಾಸಿ, ಆದರ್ಶ ಶಾಲೆಯ ಲಿಖಿತಾ ಮತ್ತು ಆದಿತ್ಯ, ಸೊಳ್ಳೇಪುರ ಏಕಲವ್ಯ ಶಾಲೆಯ ಆದಿತ್ಯ (614) ದ್ವಿತೀಯ, ಸೇಂಟ್ ಮೇರಿಸ್‌ನ ದರ್ಶಿನಿ ಮತ್ತು ಸರಗೂರಿನ ಪ್ರಗತಿ ಶಾಲೆಯ ನಿಸರ್ಗ (611) ತೃತೀಯ ಸ್ಥಾನ ಪಡೆದಿದ್ದಾರೆ ಎಂದರು.

ಒಟ್ಟಾರೆ ತಾಲೂಕಿನ 21 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಕನ್ನಡದಲ್ಲಿ 25 ವಿದ್ಯಾರ್ಥಿಗಳು 125 ಅಂಕ ಪಡೆದಿದ್ದಾರೆ ಎಂದರು. ಗೋಷ್ಠಿಯಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿ, ಕಾರ್ಯದರ್ಶಿ ಭೀಮಪ್ಪ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಮೋದ್, ಕಾರ್ಯದರ್ಶಿ ಆನಂದ, ನೌಕರರ ಸಂಘದ ಕಾರ್ಯದರ್ಶಿ ಪ್ರಕಾಶ್, ಇಸಿಓ ನಂಜರಾಜು, ಹರೀಶ್, ಶ್ರೀನಿವಾಸ ಸೇರಿದಂತೆ ಇನ್ನಿತರರಿದ್ದರು.

> “ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಹೆಚ್.ಡಿ.ಕೋಟೆ ತಾಲೂಕು ಕಳೆದ ಬಾರಿ ಜಿಲ್ಲೆಗೆ 9ನೇ ಸ್ಥಾನ ಪಡೆದಿತ್ತು. ಆದರೆ ಈ ಬಾರಿ ಶಾಸಕ ಅನಿಲ್ ಚಿಕ್ಕಮಾದು ಮಾರ್ಗದರ್ಶನದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳಾದ ಕಲಿಕಾ ಖಾತ್ರಿ ಪರೀಕ್ಷೆ, ಪೂರ್ವ ತಯಾರಿ ಪರೀಕ್ಷೆಗಳು, ವಿದ್ಯಾರ್ಥಿಗಳಿಗಾಗಿ ನಾನು ಓದುತ್ತಿದ್ದೇನೆ ಹಾಗೂ ವಿಶೇಷ ಸಭೆಗಳನ್ನು ನಡೆಸಿದರ ಫಲವಾಗಿ ನಮ್ಮ ತಾಲೂಕು ಮೊದಲ ಸ್ಥಾನಗಳಿಸಿದೆ. – ಸಿ.ಎನ್.ರಾಜು, ಬಿಇಓ.

ಗಗನ್‌ಗೆ 589 ಅಂಕ



ನಂಜನಗೂಡು, ಏ.24– ನಗರದ ನೀಲಕಂಠೇಶ್ವರ ಶಾಲೆ ವಿದ್ಯಾರ್ಥಿ ಗಗನ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 589 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. ಶೇ.94 ರಷ್ಟು ಅಂಕ ಪಡೆದು ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿರುವ ಈತ ಪತ್ರಕರ್ತ ಬಸವರಾಜು ಅವರ ಪುತ್ರ.

ಮೈಸೂರಲ್ಲಿ ವರನಟ ಡಾ.ರಾಜ್‌ಕುಮಾರ್ ಜಯಂತ್ಯೋತ್ಸವ

ಕನ್ನಡಕ್ಕೆ ಘನತೆ-ಹಿರಿಮೆ ತಂದುಕೊಟ್ಟ ಸಾಧಕರು: ಶಾಸಕ ಕೆ.ಹರೀಶ್‌ಗೌಡ



ಮೈಸೂರಿನಲ್ಲಿ ವರನಟ ಡಾ.ರಾಜ್‌ಕುಮಾರ್ ಅವರ ಜಯಂತ್ಯೋತ್ಸವವನ್ನು ಶುಕ್ರವಾರ ಆಚರಿಸಲಾಯಿತು.

ಮೈಸೂರು, ಏ.24(ಎಂಕೆ)– ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಿವಿಧ ಅಭಿಮಾನಿಗಳ ಸಂಘಟನೆಗಳ ವತಿಯಿಂದ ವರನಟ ಡಾ.ರಾಜ್‌ಕುಮಾರ್ ಜಯಂತ್ಯೋತ್ಸವವನ್ನು ಶುಕ್ರವಾರ ಆಚರಿಸಲಾಯಿತು.

ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿರುವ ಡಾ.ರಾಜ್‌ಕುಮಾರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಜೈಕಾರ ಕೂಗುತ್ತಾ ಸಿಹಿ ವಿತರಿಸಿದ ಡಾ.ರಾಜ್ ಅಭಿಮಾನಿಗಳು, ನೆಚ್ಚಿನ ನಟನ ಚಲನಚಿತ್ರಗಳ ಹಾಡುಗಳನ್ನು ಆಲಿಸಿ ಸಂಭ್ರಮಿಸಿದರು.

ಡಾ.ರಾಜ್‌ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಗೋಕಾಕ್ ಹೋರಾಟದಲ್ಲಿ ಭಾಗವಹಿಸಿ ಕನ್ನಡ ಭಾಷೆಗೆ ಗೌರವ ತಂದುಕೊಟ್ಟ ಮಹಾನ್ ಚೇತನ ಡಾ. ರಾಜಕುಮಾರ್. ಅವರು ಗೋಕಾಕ್ ಚಳವಳಿಯ ಮೂಲಕ ನಡೆಸಿದ ಹೋರಾಟವು ನಮ್ಮ ಮಾತೃ ಭಾಷೆಗೆ ಬಾರೀ ಗೌರವ ಮತ್ತು ಬೆಲೆಯನ್ನು ತಂದುಕೊಡಲು ಸಾಧ್ಯವಾಯಿತು.

ಕನ್ನಡ ನಾಡು–ನುಡಿ ಎಂದರೆ ಡಾ.ರಾಜ್ ಕುಮಾರ್ ಅವರಿಗೆ ಅತೀವ ಪ್ರೀತಿ. ಅವರು ನಟಿಸಿದ ಚಲನಚಿತ್ರದಲ್ಲಿ ಮಾತ್ರವಲ್ಲ ಗೋಕಾಕ್ ಹೋರಾಟದಲ್ಲೂ ಅವರಿಗೆ ಕನ್ನಡದ ಮೇಲಿನ ಪ್ರೀತಿ ಎಷ್ಟಿತ್ತೆಂಬುದನ್ನು ಕಾಣಬಹುದು. ಡಾ.ರಾಜ್ ಕುಮಾರ್ ಅವರಿಗೆ ಕನ್ನಡದ ಮೇಲಿದ್ದ ಅಭಿಮಾನ ಯುವ ಜನರಿಗೆ ಮಾದರಿಯಾಗಬೇಕು ಎಂದರು.

ಡಾ.ರಾಜ್ ಕುಮಾರ್ ಅವರು ನಟಿಸಿರುವ ಸಿನಿಮಾಗಳು ಮನರಂಜನೆಯ ಜೊತೆಗೆ ಒಂದು ನೀತಿ ಪಾಠವನ್ನು ತಿಳಿಸುತ್ತವೆ. ಅವರ ಸಿನಿಮಾಗಳ ನೀತಿ ಪಾಠದಿಂದ ಬಹಳಷ್ಟು ಜನರು ತಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಸಿನಿಮಾಗಳಲ್ಲಿದ್ದ ಸಂಭಾಷಣೆ ಮತ್ತು ಸಾಹಿತ್ಯದ ಸೊಗಡನ್ನು ಇಂದಿನ ಸಿನಿಮಾಗಳಲ್ಲಿ ಕಾಣುವುದು ಅಸಾಧ್ಯ ಎಂದು ನೆನೆದರು.

ಕನ್ನಡ ಚಿತ್ರರಂಗದಲ್ಲಿ 'ಆಡು ಮುಟ್ಟದ ಸೊಪ್ಪಿಲ್ಲ, ಡಾ.ರಾಜ್‌ಕುಮಾರ್ ಅವರು ನಿರ್ವಹಿಸದ ಪಾತ್ರಗಳಿಲ್ಲ' ಎನ್ನುವ ಮಾತಿದೆ. ನಟನೆಗೆ ಮಾತ್ರ ಸೀಮಿತವಾಗದೆ ಅವರ ಕಂಠಸಿರಿಯಿಂದ ಹಾಡುಗಳನ್ನು ಹಾಡಿ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅಂದಿನ ಕಾಲದಲ್ಲೇ ಅವರು ತಮ್ಮ ಸಿನಿಮಾಗಳಲ್ಲಿ ಆಂಗ್ಲ ಭಾಷೆಯ ಹಾಡುಗಳನ್ನು ಹಾಡುತ್ತಿದ್ದರು ಎಂದು ಸ್ಮರಿಸಿದರು.

ಪ್ರತಿಯೊಬ್ಬರಿಗೂ ದಾರಿದೀಪ: ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಡಾ.ರಾಜಕುಮಾರ್ ಅವರ ನಟನೆ ಮತ್ತು ಅವರ ವ್ಯಕ್ತಿತ್ವದಿಂದಾಗಿ ಜನರ ಮನಸ್ಸಿನಲ್ಲಿ ಇಂದಿಗೂ ಅಜರಾಮರರಾಗಿ ಉಳಿಯಲು ಸಾಧ್ಯವಾಗಿದೆ. ಅವರ ವ್ಯಕ್ತಿತ್ವ ಹಾಗೂ ಕನ್ನಡ ಭಾಷೆಯ ಮೇಲೆ ಅವರಿಗಿದ್ದ ಪ್ರೀತಿ ಪ್ರತಿಯೊಬ್ಬರಿಗೂ ದಾರಿದೀಪವಾಗಿದೆ. ಡಾ. ರಾಜಕುಮಾರ್ ಅವರ ಚಿತ್ರಗಳು ಅತ್ಯಂತ ಶುದ್ಧವಾಗಿದ್ದು, ಕುಟುಂಬದ ಪ್ರತಿಯೊಬ್ಬರು ಒಟ್ಟಿಗೆ ಕುಳಿತು ನೋಡಬಹುದಾದಂತಹ ಚಿತ್ರಗಳಾಗಿರುತ್ತಿದ್ದವು. ಚಿಕ್ಕವಯಸ್ಸಿನಲ್ಲಿ ಹಳ್ಳಿಗಳಲ್ಲಿ ಟೆಂಟ್ ಥಿಯೇಟರ್‌ಗಳಲ್ಲಿ ಸಿನಿಮಾ ನೋಡುತ್ತಿದ್ದೆ ಎಂದು ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು.

ಅಣ್ಣಾವ್ರು ಕನ್ನಡದ ಆಸ್ತಿ : ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಎಸ್.ಹೆಚ್.ನಿರ್ಮಲ ಮಾತನಾಡಿ, ಡಾ.ರಾಜ್ ಕುಮಾರ್ ಅವರು ಹಾಡಿರುವ ಹಾಡುಗಳು ಅವಿಸ್ಮರಣೀಯ. ಪದ್ಮಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದರೂ ಅವರು ಎಂದೂ ಅಹಂಕಾರ ತೋರದೆ ಅಭಿಮಾನಿಗಳನ್ನು 'ದೇವರು' ಎಂದು ಕರೆದರು. ಅವರ ಜೀವನ ಶೈಲಿ, ಶಿಸ್ತು, ಸಮಯಪಾಲನೆ, ಹಿರಿಯರಿಗೆ ಗೌರವ ನೀಡುತ್ತಿದ್ದದ್ದು, ಮಾತೃ ಭಾಷೆಯ ಮೇಲಿನ ಭಕ್ತಿ ಅಣ್ಣಾವ್ರು ನಮಗೆ ಬಿಟ್ಟುಹೋಗಿರುವ ಆಸ್ತಿ ಎಂದರು. ನಂತರ ಗಾಯಕ ಐ.ಡಿ.ಲೋಹಿತ್ ಮತ್ತು ತಂಡದಿಂದ ಡಾ.ರಾಜ್‌ಕುಮಾರ್ ಗೀತಗಾಯನ ಕಾರ್ಯಕ್ರಮ ನಡೆಯಿತು.

ಡಾ.ರಾಜ್‌ಕುಮಾರ್ ಕುಟುಂಬಸ್ಥರಾದ ಎಸ್.ಎ.ಶ್ರೀನಿವಾಸ್, ಅಖಿಲ ಕರ್ನಾಟಕ ಡಾ.ರಾಜ್ ಕುಮಾರ್ ಅಭಿಮಾನಿ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಾಮೇಗೌಡ, ಹಸಿರು ಸೇನೆ ಶಿವಶಂಕರ್, ನಿರ್ಮಾಪಕ ಗೋಲ್ಡನ್ ಸುರೇಶ್, ಮುಖಂಡ ಮೂರ್ತಿ ಲಿಂಗಯ್ಯ, ಮೈಸೂರು ಜಿಲ್ಲೆಯ ಡಾ.ರಾಜಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಗೋವಿಂದರಾಜು, ಗೌರವ ಸಲಹೆಗಾರರಾದ ಸಿದ್ದಪ್ಪ ಮತ್ತು ಸ್ವಾಮಿ, ಕಾರ್ಯದರ್ಶಿ ರಮೇಶ್, ಡಾ.ರಾಜ್ ಶಿವಸೈನ್ಯ ಅಭಿಮಾನಿಗಳ ಸಂಘದ ಅಧ್ಯಕ್ಷ ಬಿ.ಎನ್.ರವಿ, ಸದಸ್ಯರಾದ ಮಹೇಶ್, ದೊರೆ, ಮಂಜು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಧ್ಯಾನ್‌ಗೆ 583 ಅಂಕ



ಮೈಸೂರು, ಏ.24– ಮೈಸೂರಿನ ಎಸಿಇ ಪ್ರಿಯದರ್ಶಿನಿ ಶಾಲೆಯ ವಿದ್ಯಾರ್ಥಿ ಎಸ್.ಧ್ಯಾನ್, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.93.28ರಷ್ಟು ಅಂಕ ಪಡೆದಿದ್ದಾನೆ. ಕನ್ನಡದಲ್ಲಿ 112, ಇಂಗ್ಲೀಷ್ 91, ಹಿಂದಿ 98, ಗಣಿತ 85, ವಿಜ್ಞಾನ 97 ಮತ್ತು ಸಮಾಜ ವಿಜ್ಞಾನ 100 ಸೇರಿದಂತೆ ಒಟ್ಟು 625ಕ್ಕೆ 583 ಅಂಕ ಗಳಿಸಿದ್ದಾನೆ. ಈತ ಹೆಬ್ಬಾಳು ನಿವಾಸಿ ಎನ್.ಶ್ರೀನಿವಾಸ್ ಮತ್ತು ಎಸ್.ಬಿ.ಪ್ರೇಮಾ ದಂಪತಿ ಪುತ್ರ.

ದೇವಲಾಪುರ ಸರ್ಕಾರಿ ಪ್ರೌಢಶಾಲೆಗೆ ಶೇ. 98.6 ಫಲಿತಾಂಶ



ಮಹಾಲಕ್ಷ್ಮಿ



ನಂದಿನಿ



ವರ್ಷಿಣಿ ರವಿ



ಸ್ವರ್ಣ

ಮೈಸೂರು, ಏ. 24– ಈ ಬಾರಿಯ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ವರುಣಾ ಹೋಬಳಿಗೆ ಸೇರಿದ ದೇವಲಾಪುರ ಸರ್ಕಾರಿ ಪ್ರೌಢಶಾಲೆಗೆ ಶೇಕಡ 98.6 ಫಲಿತಾಂಶ ಲಭಿಸಿದೆ.

ಪರೀಕ್ಷೆ ಬರೆದ ಒಟ್ಟು 72 ವಿದ್ಯಾರ್ಥಿಗಳ ಪೈಕಿ 71 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 4 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 33 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 29 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ 15 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈ ಪೈಕಿ ಶಾಲೆಯ ಎಲ್ಲಾ 34 ಬಾಲಕಿಯರು ಪೂರ್ಣ ಪ್ರಮಾಣದಲ್ಲಿ ಉತ್ತೀರ್ಣರಾಗಿದ್ದು ಶೇಕಡ 100 ಸಾಧನೆ ತೋರಿದ್ದಾರೆ.

ವರ್ಷಿಣಿ ರವಿ 586 ಅಂಕಗಳನ್ನು ಪಡೆದು ಶಾಲೆಗೆ ಟಾಪರ್ ಎನಿಸಿಕೊಂಡಿದ್ದಾರೆ. ಮಹಾಲಕ್ಷ್ಮಿ 582, ಸ್ವರ್ಣ ಎಲ್ 559, ನಂದಿನಿ 547, ಬೇಬಿ 525, ರಕ್ಷಾ 519, ವೇದಶ್ರೀ 517, ನಿಶ್ಚಿತ 503 ಅಂಕಗಳನ್ನು ಪಡೆದಿದ್ದಾರೆ.

ಹುಟ್ಟುಹಬ್ಬ ಆಚರಣೆ



ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಪ್ರಕಾಶ್ ಅವರ ಹುಟ್ಟುಹಬ್ಬವನ್ನು ಎನ್.ಆರ್.ಮೊಹಲ್ಲಾ ಕುಮಾರ್ ನೇತೃತ್ವದಲ್ಲಿ ಆಚರಿಸಲಾಯಿತು. ಈ ವೇಳೆ ನಿಂಗಪ್ಪ, ಶಿವ ದರ್ಶನ್, ಯಶವಂತ್, ಆಯುಷ್ ಗೌಡ, ಕಾಮನಕೆರೆಹುಂಡಿ ಎಚ್.ಗಿರೀಶ್ ಗೌಡ ಹಾಗೂ ಇನ್ನಿತರರಿದ್ದರು.

ಕಲಾ ಪೋಷಕರಿಗೆ 'ಡಾ.ರಾಜ್ ಕಲಾ ಸೇವಾ ರತ್ನ' ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾಪೋಷಕರಿಗೆ 'ಡಾ.ರಾಜ್ ಕಲಾ ಸೇವಾ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮೈಸೂರು, ಏ.24(ಜಿಎ)–ಡಾ.ರಾಜ್ ಕುಮಾರ್ ಜಯಂತಿ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾಪೋಷಕರನ್ನು ಗುರುತಿಸಿ 'ಡಾ.ರಾಜ್ ಕಲಾ ಸೇವಾ ರತ್ನ' ಪ್ರಶಸ್ತಿ ನೀಡಿ ಅಭಿನಂದಿಲಾಯಿತು.

ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಡಾ.ರಾಜ್‌ಕುಮಾರ್ 98ನೇ ಜಯಂತಿ ಅಂಗವಾಗಿ ಏ.26 ರಂದು ಬೆಳಗ್ಗೆಯಿಂದ ಸಂಜೆವರೆಗೂ ಜಗನ್ಮೋಹನ ಅರಮನೆಯಲ್ಲಿ ಉಚಿತ ಕಣ್ಣಿನ ತಪಾಸಣೆ, ಹವ್ಯಾಸಿ ಗಾಯಕರಿಂದ ಗಾಯನ, ಅನ್ನಸಂತರ್ಪಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರ ಭಾಗವಾಗಿ ಇಂದು 'ಡಾ.ರಾಜ್ ಕಲಾ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ವೈ.ಡಿ.ರಾಜಣ್ಣ ಸಿ,ರಾಜು, ಎಂ.ಮಂಜುನಾಥ್, ಅಶ್ವಿನಿ ಶಾಸ್ತ್ರಿ, ಓಂಕಾರ್ ಆನಂದ್, ಕೃಷ್ಣ, ಶ್ರೀನಾಥ್, ಎಂ.ರಮೇಶ್, ಮಯೂರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಡಾ.ರಾಜ್ ಕುಮಾರ್ ಮ್ಯೂಸಿಕಲ್ ಗ್ರೂಪ್ ಸಂಸ್ಥಾಪಕ ಬಿ.ಎಸ್. ಜಯರಾಮು ರಾಜು, ಗಣೇಶ್‌ಭಟ್, ಸುರೇಶ್, ಸುಧೀಂದ್ರ, ಲತಾ ಬಾಲಕೃಷ್ಣ, ಅನಿತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಇಬಸ್ ತಂತ್ರಜ್ಞಾನ ಬಳಸಿ ಶ್ವಾಸಕೋಶ ಚಿಕಿತ್ಸೆ

ಇದು ಮೈಸೂರಲ್ಲಿ ಪ್ರಥಮ ಎಂದ ವೈದ್ಯರು



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ಆರ್.ಲಕ್ಷ್ಮಿ ನರಸಿಂಹನ್ ಮಾತನಾಡಿದರು.

ಮೈಸೂರು, ಏ.24(ಜಿಎ)–ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಎಂಡೋ ಬ್ರಾಂಕಿಯಲ್ ಅಲ್ಟ್ರಾಸೌಂಡ್ (ಇಬಸ್) ಎಂಬ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಶ್ವಾಸಕೋಶದ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ 54 ವರ್ಷದ ಮಹಿಳೆಗೆ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ. ಈಗ ಮಹಿಳೆ ಆರೋಗ್ಯವಾಗಿದ್ದಾರೆ. ಈ ರೀತಿಯ ಚಿಕಿತ್ಸೆ ಮೈಸೂರಿನಲ್ಲಿ ಪ್ರಥಮವಾಗಿದೆ ಎಂದು ಶ್ವಾಸಕೋಶ ವಿಭಾಗದ ಕನ್ಸಲ್ಟೆಂಟ್ ಡಾ.ಆರ್.ಲಕ್ಷ್ಮಿ ನರಸಿಂಹನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 54 ವರ್ಷದ ಗೃಹಿಣಿ ತಾಯಮ್ಮ ಅವರು ಕಳೆದ ಹಲವು ತಿಂಗಳುಗಳಿಂದ ಜ್ವರ ಮತ್ತು ನಿರಂತರ ಕೆಮ್ಮಿನಿಂದ ಬಳಲುತ್ತಿದ್ದರು. ಪರೀಕ್ಷೆ ಮಾಡಿದಾಗ ನಿಖರವಾದ ಮಾಹಿತಿ ತಿಳಿಯುತ್ತಿರಲಿಲ್ಲ. ಹಲವು ಆಸ್ಪತ್ರೆಗಳಿಗೆ ಹೋಗಿದ್ದರೂ ಕಾಯಿಲೆ ಏನೆಂದು ಪತ್ತೆಯಾಗದೆ ಕುಟುಂಬದವರು ಆತಂಕಕ್ಕೆ ಒಳಗಾಗಿದ್ದರು. ನಂತರ ತಮ್ಮ ಆಸ್ಪತ್ರೆಗೆ ಬಂದಾಗ, ಶ್ವಾಸಕೋಶದ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ ಇವರನ್ನು ಇಬಸ್ ತಂತ್ರಜ್ಞಾನದ ಮೂಲಕ ರೋಗ ಪತ್ತೆ ಹಚ್ಚಿ ಗುಣಮುಖರಾಗಿ ಮಾಡಲಾಗಿದೆ ಎಂದರು.

ಎದೆಯ ಭಾಗದಲ್ಲಿ ಹೃದಯ, ಶ್ವಾಸಕೋಶ ಮತ್ತು ಪ್ರಮುಖ ರಕ್ತನಾಳಗಳಿರುವ ಜಾಗದಲ್ಲಿ ಉಂಟಾಗುವ ಸಮಸ್ಯೆಗಳನ್ನು ಪತ್ತೆ ಹಚ್ಚುವುದು ಸವಾಲಿನ ಕೆಲಸವಾಗಿತ್ತು ಹಿಂದೆ ಇಂತಹ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆ ಅನಿವಾರ್ಯವಾಗಿತ್ತು ಆದರೆ ಇಬಸ್ ತಂತ್ರಜ್ಞಾನದಲ್ಲಿ ಶಸಚಿಕಿತ್ಸೆ ಇಲ್ಲದೆ, ಅಲ್ಟ್ರಾಸೌಂಡ್ ಸಹಾಯದಿಂದ ಶ್ವಾಸನಾಳದ ಒಳಗೆ ಹೋಗಿ, ನೈಜ ಸಮಯದಲ್ಲಿ ಗೆಡ್ಡೆ ಅಥವಾ ಸೋಂಕನ್ನು ವೀಕ್ಷಿಸಬಹುದು. ಅಲ್ಲದೆ, ಅತ್ಯಂತ ನಿಖರವಾಗಿ ಅಲ್ಲಿನ ಅಂಗಾಂಶದ ಮಾದರಿಯನ್ನ ಸಂಗ್ರಹಿಸಬಹುದು. ಇದರಿಂದ ರೋಗ ಪತ್ತೆ ಸುಲಭವಾಗುತ್ತದೆ ಎಂದು ವಿವರಿಸಿದರು.

ಗುಣಮುಖರಾಗಿರುವ ತಾಯಮ್ಮ ಅವರು ಮಾತನಾಡಿ, ಹಲವು ಆಸ್ಪತ್ರೆ ಗಳಿಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡರೂ ನಮಗೆ ಸರಿಯಾದ ಫಲಿತಾಂಶ ಸಿಕ್ಕಿರಲಿಲ್ಲ. ಪ್ರತಿ ಪರೀಕ್ಷೆಯೂ ನಮ್ಮ ಆತಂಕವನ್ನು ಹೆಚ್ಚಿಸುತ್ತಿತ್ತು ಕೊನೆಗೆ ಡಾ. ಲಕ್ಷ್ಮಿ ನರಸಿಂಹನ್ ಅವರನ್ನು ಭೇಟಿಯಾದೆವು. ಅವರು ಈ ಹೊಸ ತಂತ್ರಜ್ಞಾನದ ಬಗ್ಗೆ ನಮಗೆ ಧೈರ್ಯ ನೀಡಿದರು. ಇಬಸ್ ಪರೀಕ್ಷೆಯ ನಂತರ ನಮಗೆ ಕಾಯಿಲೆಯ ಸರಿಯಾದ ಮಾಹಿತಿ ತಿಳಿಯಿತು. ಈಗ ನಾನು ಗುಣಮುಖಳಾಗುತ್ತಿದ್ದೇನೆ ಮತ್ತು ಮುಂದಿನ ಚಿಕಿತ್ಸೆಯ ಬಗ್ಗೆ ನನಗೆ ಭರವಸೆ ಮೂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಮುಖ್ಯ ತಜ್ಞ ವೈದ್ಯ ಡಾ.ಉಪೇಂದ್ರ ಶೆಣೈ, ಶ್ವಾಸಕೋಶ ವಿಭಾಗದ ಅಸೋಸಿಯೇಟ್ ಕನ್ಸಲ್ಟೆಂಟ್ ಡಾ.ಕೆ.ಸ್ಫೂರ್ತಿ, ಆಸ್ಪತ್ರೆಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಉಪಸ್ಥಿತರಿದ್ದರು.

ಡಿ.ಕೆ ಶಿವಕುಮಾರ್ ಸಿಎಂ ಆಗಲು ಮೇ.10ಕ್ಕೆ ಮೂಹೂರ್ತ ಫಿಕ್ಸ್! ಕಾಂಗ್ರೆಸ್ ಸರ್ಕಾರ ಪತನ; ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ–ಸುರೇಶ್ ಗೌಡ



ತುಮಕೂರು: ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ಕರ್ನಾಟಕ ರಾಜಕೀಯದಲ್ಲಿ ಭಾರೀ ಬದಲಾವಣೆಗಳು ನಡೆಯಲಿವೆ. ಕಾಂಗ್ರೆಸ್ ಸರ್ಕಾರದ ಆಂತರಿಕ ಕಚ್ಚಾಟದಿಂದಾಗಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾದರೂ ಅಚ್ಚರಿಯಿಲ್ಲ ಎಂದು ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ ಬಿ ಸುರೇಶ್ ಗೌಡ ಹೇಳಿದ್ದಾರೆ.

ಕಾಂಗ್ರೆಸ್ ನಾಯಕರ ನಡುವಿನ ಶೀತಲ ಸಮರದ ಬಗ್ಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವಿನ ನಡೆಗಳು ಸರ್ಕಾರವನ್ನು ಪತನದ ಅಂಚಿಗೆ ತಳ್ಳುತ್ತಿವೆ ಎಂದು ಆರೋಪಿಸಿದರು.

ಸಿಎಂ ರೇಸ್‌ನಲ್ಲಿ ಕೈ ನಾಯಕರ ಮಧ್ಯೆ ಸ್ಪರ್ಧೆ ನಡೆಯುತ್ತಿದೆ. ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿ ಮತ್ತು ಎಂ.ಬಿ. ಪಾಟೀಲ್ ಅವರು ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ಮುಖ್ಯಮಂತ್ರಿಯಾಗಲು ತಯಾರಿ ನಡೆಸಿದ್ದಾರೆ. ಮೇ 10ರಂದು ಮುಹೂರ್ತ ಕೂಡ ನಿಗದಿಯಾಗಿದೆ ಎಂಬ ಸ್ಫೋಟಕ ಮಾಹಿತಿಯನ್ನು ಗೌಡರು ಹಂಚಿಕೊಂಡಿದ್ದಾರೆ.

ರಾಜ್ಯ ಸರ್ಕಾರದ ಆಡಳಿತ ವೈಖರಿಯಿಂದ ಜನರು ಬೇಸತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದ್ದು, ಕೇವಲ ಕುರ್ಚಿ ಉಳಿಸಿಕೊಳ್ಳುವ ಆಟ ನಡೆಯುತ್ತಿದೆ. ಕಾಂಗ್ರೆಸ್ ಒಳಜಗಳದಿಂದಾಗಿ ರಾಜ್ಯದ ಆಡಳಿತ ಯಂತ್ರ ಕುಸಿದಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರೋಟರಿ ವೆಸ್ಟ್ ಶಾಲೆಗೆ ಶೇ.100ರಷ್ಟು ಫಲಿತಾಂಶ



ಸಂಜನ



ಅನುಶ್ರೀ




ಪೃಥ್ವಿ



ರಕ್ಷಿತ



ಅಮೂಲ್ಯ



ಅಂಕುಶ್



ಹೃತ್ವಿಕ್



ತುಳಸಿ

ಮೈಸೂರು, ಏ.24– ನಗರದ ಸರಸ್ವತಿಪುರಂನ ರೋಟರಿ ವೆಸ್ಟ್ ಶಾಲೆಯು 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಸಾಧಿಸಿದೆ.


ಪರೀಕ್ಷೆಗೆ ಹಾಜರಾದ ಎಲ್ಲಾ 38 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಇವರಲ್ಲಿ 8 ಮಂದಿ ಅತ್ಯುನ್ನತ ಶ್ರೇಣಿ, 19 ಮಂದಿ ಪ್ರಥಮ ಶ್ರೇಣಿ, ಉಳಿದವರು ದ್ವಿತೀಯ ಶ್ರೇಣಿ ಪಡೆದಿದ್ದಾರೆ.

ಪಿ.ಸಂಜನ 616 ಅಂಕ, ಆರ್.ಅನುಶ್ರೀ 615 ಹಾಗೂ ಪೃಥ್ವಿ ಜೆ.ಸುಂದರ್610 ಅಂಕಗಳೊಂದಿಗೆ ಶಾಲೆಯ ಟಾಪರ್‌ಗಳಾಗಿದ್ದು, ಸಿ.ರಕ್ಷಿತ(576), ಎಸ್. ಅಮೂಲ್ಯ (549), ಹೆಚ್.ಸಿ.ಅಂಕುಶ್ (536), ಆರ್.ಹೃತ್ವಿಕ್(534), ವಿ.ಪಿ. ತುಳಸಿ(529) ಸೇರಿದಂತೆ ಹಲವು ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಗಳಿಸಿದ್ದಾರೆ.

ಸಂಜನಾ 4 ವಿಷಯಗಳಲ್ಲಿ, ಅನುಶ್ರೀ 3 ವಿಷಯಗಳಲ್ಲಿ ಹಾಗೂ ಪೃಥ್ವಿ ಜೆ.ಸುಂದರ್ ಗಣಿತದಲ್ಲಿ ಶೇ.100ರಷ್ಟು ಅಂಕ ಗಳಿಸಿದ್ದು, ಎಲ್ಲಾ ವಿದ್ಯಾರ್ಥಿಗಳನ್ನೂ ಶಾಲೆಯ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಶಿಕ್ಷಕ ವೃಂದ ಅಭಿನಂದಿಸಿದ್ದಾರೆ.

ಹೂಟಗಳ್ಳಿ ನಗರ ಸಭೆಯಲ್ಲಿ ತೆರಿಗೆದಾರರ ಬವಣೆ; ಬಿಸಿಲ ಬೇಗೆ ನಡುವೆ ಸರದಿ ಸಾಲಲ್ಲಿ ನಿಂತು ಹೈರಾಣ

ಹೇಳುವವರು-ಕೇಳುವವರಿಲ್ಲ; ಕನಿಷ್ಠ ಮೂಲ ಸೌಕರ್ಯವಿಲ್ಲ



ಹೂಟಗಳ್ಳಿ ನಗರ ಸಭೆ ಕಚೇರಿ ಮುಂದೆ ತೆರಿಗೆ ಪಾವತಿಸಲು ಸರದಿ ಸಾಲಿನಲ್ಲಿ ನಿಂತಿರುವ ತೆರಿಗೆದಾರರು.

ಮೈಸೂರು, ಏ.24(ಎಂಟಿವೈ)– ರಾಜ್ಯ ಸರ್ಕಾರದ ಶೇ.5 ತೆರಿಗೆ ವಿನಾಯಿತಿಯಡಿ ಸಾರ್ವಜನಿಕರು ತೆರಿಗೆ ಕಟ್ಟಲು ಮುಂದಾದರೂ ಅದಕ್ಕೆ ಸೂಕ್ತ ಮೂಲ ಸೌಕರ್ಯ ಒದಗಿಸದ ಹೂಟಗಳ್ಳಿ ನಗರ ಸಭೆ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಏ.1ರಿಂದ ಶೇ.5ರಷ್ಟು ರಿಯಾಯಿತಿ ಸೌಲಭ್ಯದೊಂದಿಗೆ ತೆರಿಗೆ ಸಂಗ್ರಹಿಸಲಾಗುತ್ತಿದೆ. ಮೈಸೂರಿನ ಹೂಟಗಳ್ಳಿ ನಗರ ಸಭೆಯಲ್ಲೂ ತೆರಿಗೆ ಸಂಗ್ರಹ ಅಭಿಯಾನ ಆರಂಭವಾಗಿದೆ. ಆದರೆ ತೆರಿಗೆ ಪಾವತಿಸಲು ಬರುವವರಿಗೆ ಅಗತ್ಯ ಮೂಲ ಸೌಲಭ್ಯ ಹಾಗೂ ಮಾರ್ಗದರ್ಶನ ನೀಡುವವರಿಲ್ಲದೆ ತೆರಿಗೆದಾರರು ಪರದಾಡುವಂತಾಗಿದೆ.

ಕನಿಷ್ಠ ಸೌಲಭ್ಯ ಒದಗಿಸಿಲ್ಲ: ಹೂಟಗಳ್ಳಿ ನಗರ ಸಭೆ ವ್ಯಾಪ್ತಿಯ ವಿವಿಧ ಬಡಾವಣೆಯಿಂದ ತೆರಿಗೆ ಕಟ್ಟಲು ಪ್ರತಿದಿನ ನೂರಾರು ಮಂದಿ ತೆರಿಗೆದಾರರು ಆಗಮಿಸುತ್ತಿದ್ದಾರೆ. ಆದರೆ, ಹೂಟಗಳ್ಳಿ ನಗರಸಭೆಯಲ್ಲಿ ತೆರಿಗೆದಾರರಿಗೆ ಮೂಲ ಸೌಲಭ್ಯ ಒದಗಿಸಿಲ್ಲ. ಬಿಸಿಲಿನ ಬೇಗೆ ಇದ್ದರೂ, ಪೆಂಡಾಲ್ ವ್ಯವಸ್ಥೆ ಮಾಡಿಲ್ಲ. ಇದರಿಂದ ತೆರಿಗೆದಾರರು ಕಟ್ಟಡದ ಮುಂಭಾಗ ಬಿಸಿಲಲ್ಲೇ ಸಾಲುಗಟ್ಟಿ ಗಂಟೆಗಟ್ಟಲೆ ನಿಲ್ಲಬೇಕಿದೆ. ಚೇರ್ ವ್ಯವಸ್ಥೆ ಮಾಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

25 ಕೋಟಿ ಸಂಗ್ರಹ ಗುರಿ, ಈಗಾಗಲೇ 2.46 ಕೋಟಿ ಸಂಗ್ರಹ

ಈ ವರ್ಷ 25 ಕೋಟಿ ರೂ. ತೆರಿಗೆ ಸಂಗ್ರಹದ ಗುರಿ ಹೊಂದಲಾಗಿದೆ. ರಿಯಾಯ್ತಿ ಸೌಲಭ್ಯದ ಪರಿಣಾಮ ಇದುವರೆಗೂ 2.46 ಕೋಟಿ ರೂ. ಸಂಗ್ರಹವಾಗಿದೆ. ಈ ಸೌಲಭ್ಯ ಪಡೆಯಲು ಸಾಕಷ್ಟು ಜನ ಮುಂದೆ ಬರುತ್ತಿದ್ದಾರೆ. ತೆರಿಗೆದಾರರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ತೆರಿಗೆದಾರರಿಗೆ ನೆರಳು, ಕುರ್ಚಿ ವ್ಯವಸ್ಥೆ ಮಾಡಲಾಗಿದೆ. ಹೆಚ್ಚುವರಿ ಕುರ್ಚಿ ವ್ಯವಸ್ಥೆ ಮಾಡಲಾಗುತ್ತದೆ.

– ಬಿ.ಚಂದ್ರಶೇಖರ್, ಪೌರಾಯುಕ್ತ, ಹೂಟಗಳ್ಳಿ ನಗರ ಸಭೆ

ಹಿರಿಯ ನಾಗರಿಕರೇ ಹೆಚ್ಚು: ತೆರಿಗೆ ಪಾವತಿಸಲು ವಿವಿಧ ಬಡಾವಣೆಗಳಿಂದ ಹಿರಿಯ ನಾಗರಿಕರೆ ಹೆಚ್ಚಿನ ಸಂಖ್ಯೆಯಲ್ಲಿ ಹೂಟಗಳ್ಳಿ ನಗರ ಸಭೆ ಕಚೇರಿಗೆ ಆಗಮಿಸುತ್ತಿರುವುದರಿಂದ ಸರದಿ ಸಾಲಿನಲ್ಲಿ ಹೆಚ್ಚು ಸಮಯ ನಿಲ್ಲಲು ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದ ಕಟ್ಟಡದ ಹೊರಗೆ ಪೆಂಡಾಲ್ ಹಾಕಿ ಸರದಿ ಸಾಲಿನಲ್ಲಿಯೇ ಕುಳಿತುಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಕಿಷ್ಕಿಂಧೆ ಸ್ಥಳದಲ್ಲಿ ಕೌಂಟರ್: ತೆರಿಗೆ ಪಾವತಿಗೆ ಒಂದು ಕೊಠಡಿಯಲ್ಲಿ ಮೂರು ಕೌಂಟರ್ ತೆರೆಯಲಾಗಿದೆ. ಇದರಿಂದ ತೆರಿಗೆದಾರರು ಒಂದು ಕೊಠಡಿಯಲ್ಲಿ ನಿಲ್ಲಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪೆಂಡಾಲ್ ಹಾಕಿ, ಕಟ್ಟಡದ ಹೊರಗೆ ಕೌಂಟರ್ ತೆರೆಯುವಂತೆ ಕೋರಿದ್ದಾರೆ.

ಮಧ್ಯವರ್ತಿಗಳ ಹಾವಳಿ: ಇಲ್ಲಿ ತೆರಿಗೆ ಪಾವತಿಸಲು ಬರುವ ಜನರಿಗೆ ಸಲಹೆ ನೀಡಲು ಯಾವ್ರದೇ ಸಿಬ್ಬಂದಿಗಳಿಲ್ಲ. ಇದರಿಂದ ಕಚೇರಿ ಬಳಿ ಬಂದು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನೇ ಬಂಡವಾಳವನ್ನಾಗಿಸಿಕೊಂಡ ಕೆಲವು ಮಧ್ಯವರ್ತಿಗಳು ತೆರಿಗೆದಾರರಿಂದ ಹಣ ಪೀಕಿ, ದಾಖಲೆ ಸಿದ್ಧಪಡಿಸಿಕೊಡುತ್ತಿದ್ದಾರೆ ಎಂದು ದೂರಿದ್ದಾರೆ.

ಕಂದಾಯ ಅಧಿಕಾರಿಗೆ ಸಂಗ್ರಹವಾದ ತೆರಿಗೆ ಬಗ್ಗೆ ಮಾಹಿತಿ ಇಲ್ಲ

ರಿಯಾಯ್ತಿ ಅಡಿ ಇದುವರೆಗೆ ಎಷ್ಟು ತೆರಿಗೆ ಸಂಗ್ರಹವಾಗಿದೆ ಎಂಬ ಮಾಹಿತಿ ಅಲ್ಲಿನ ಕಂದಾಯಾಧಿಕಾರಿಗೆ ಇಲ್ಲ. ತೆರಿಗೆ ಸಂಗ್ರಹದ ಕುರಿತು 'ಮೈಸೂರು ಮಿತ್ರ' ಮಾಹಿತಿ ಕೇಳಿದಾಗ ಕಂದಾಯಾಧಿಕಾರಿ ಎಸ್. ನಂಜುಂಡುಸ್ವಾಮಿ ಅವರು ನನ್ನ ಬಳಿ ಮಾಹಿತಿ ಇಲ್ಲ. ತಿಂಗಳ ಕೊನೆಗೆ ಹೇಳುತ್ತೇನೆ ಎಂದೇಳಿ ಕಂದಾಯ ವಿಭಾಗದ ಮತ್ತೊಬ್ಬರನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು.

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ಗ್ರಾವೆಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 5 ಗುಂಟೆ, 10 ಗುಂಟೆ, 20 ಗುಂಟೆ ಬೇಕಾದವರು ಸಂಪರ್ಕಿಸಿ
7259407518
8310220458

ಸೈಟು/ಮನೆ/ಮಾರಾಟ/ಬಾಡಿಗೆಗೆ
40x60 Site ಪರಶುರಾಮನಗರ, ದಟ್ಟಗಳ್ಳಿ 3ನೇ ಹಂತ, 20x30 3 BHK Duplex ಮನೆ, ಲಲಿತಾದ್ರಿನಗರ ಮಾರಾಟಕ್ಕೆ 40x60 2 BHK Indipendent Rent R K Nagar H Block Main Road, 50x60 N/F Corner Commercial Complex For Sale Srirampura Main Road, Broker Excuse
9448938989
7892035789

MUDA & RERA Approved Site's
Just ₹ 25 Lakh's (Registration Free)
Uttanahalli Ring road, Mysore
Call : 9945-0202-12

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, Mourya Residency, Harsha Road, Near Govardhan Hotel, Time 11 AM and Date : 27/4/2026. (Followed by Lunch)
9448376423
9886883858

ಹೆಸರು ಬದಲಾವಣೆ
ನಾನು ಸಾವಿತ್ರಮ್ಮ, ಮೈಸೂರು ಸಿಟಿ, ಗಾಯತ್ರಿಪುರಂ, ವಿಶ್ವಕರ್ಮ ಕಾಲೋನಿ, ಶಿಲ್ಪಿ ನರಸಿಂಹಚಾರ್ ಬ್ಲಾಕ್, ಮನೆ. ನಂ. 54/ಈ ಇಲ್ಲಿ ಇಲ್ಲಿ ವಾಸವಾಗಿದ್ದು, ನಾನು ನನ್ನ ಎಸ್‌ಬಿಐ ಬ್ಯಾಂಕ್ ಪುಸ್ತಕದಲ್ಲಿ ನನ್ನ ಹೆಸರು ಅಕ್ಕಸಾಲಿಗರ ಈಶ್ವರ ಸಾವಿತ್ರಿ ಎಂದು ನಮೂದಾಗಿರುತ್ತದೆ. ಆದರೆ ನನ್ನ ಹೆಸರನ್ನು ಅಕ್ಕಸಾಲಿಗರ ಈಶ್ವರ ಸಾವಿತ್ರಿ ಬದಲಾಗಿ ಸಾವಿತ್ರಮ್ಮ ಎಂದು ಬದಲಾಯಿಸಿಕೊಂಡಿರುತ್ತೇನೆಂದು ನೋಟರಿ ರಾಜೇಂದ್ರ ಕುಮಾರ್ ಕೆ.ಎಂ ಮೈಸೂರು, ರವರ ಮುಂದೆ ದಿನಾಂಕ 13–04–2026 ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಸಾವಿತ್ರಮ್ಮ

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ





ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

WANTED
Delivery Boys, Stewards, Captains. Salary + Incentives for Etihaad Hotel, Siddiqie Nagar, Mysore - 15
9591567960
8220996122
9740598899

ಸೈಟುಗಳು ಮಾರಾಟಕ್ಕಿವೆ
@ ಬೋಗಾದಿ ರಸ್ತೆ
Sizes : 30x40
Ready for Construction
Mob: 9740407921

SITE FOR SALE
30x40 West Facing good location at Prashanth Chaya Layout, PHES 1 DTCP approved ready to Registration document,
Near Lal Bahadur Shastri Nagar, Mysore.
MORE DETAILS CONTACT :
9845311775

PREMIUM RESIDENTIAL PLOTS FOR SALE!
Available Plot Sizes :
30×30 sq ft & 30×40 sq ft
Vijayanagara 4th Stage, Mysuru
8123382999

G9 projects — Designing your Dreams
Vee2 Developers
VAISHNAVI LAYOUT
RT NAGR ENTRANCE
30x40 | 30x50 | Odd Sites Available
₹ 4,999 per sqft
SHOURYA LAYOUT
₹ 5,335/- Only 20x30
Adjoining vijayanagar 4th stage
8088-707-707

Ready to Build Plots - Off Bogadi Road
Limited Sites ! 20x30 & 30x40 Available
Clear Titles, MUDA Approved
90% Bank loan Available. Fast Developing Area
Price: Rs. 3500/- Sqft
Call: 8970045999

DTCP Approved Sites @ Just ₹.1500/- per sq.ft Bogadi Road
CALL: 9845771177

ಸೈಟುಗಳು ಮಾರಾಟಕ್ಕಿವೆ
ಮೈಸೂರು–ಹುಣಸೂರು ರಸ್ತೆ ಮನುಗನಹಳ್ಳಿ ಚೆಕ್‌ಪೋಸ್ಟ್ ಹತ್ತಿರ ಕೇವಲ 15 ಲಕ್ಷಗಳಿಂದ
Call:7483338488

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಾಲೇಜಿಗೆ ನುರಿತ, ಎಲ್ಲಾ ದಾಖಲೆಗಳಿರುವ
ಡ್ರೈವರ್
ಬೇಕಾಗಿದ್ದಾರೆ.
ಸಂಪರ್ಕಿಸಿ:
98448 23202
97433 82693

FLATS FOR SALE/RENT
East Facing New 2 BHK
1100 sft., Flats
for Sale /Rent at Krishnamurthy Puram
For details contact:
75696 04150 / 90352 23781

NANDI ENCLAVE
SITES FOR SALE
30x40 30x50 40x60
@ Bilikere, Mysuru
Ready for Registration
9972085599/9964906588

BHAPA REALTY
Fully Developed Plots Ready for Registration @ Varuna T. Narasipura Road, Mysore. Contact:
9972566822

FOR SALE
Honda Civic
2019 manufacture, 2020 registered.
Driven: 66000 kms
Contact :
9845838877

NOT GETTING YOUR STAR OF MYSORE & ಮೈಸೂರು ಮಿತ್ರ
Call:
98452-96447
99003-82840

SITES FOR SALE
Ready to register residential sites measuring 30X40 and 40X60 is for sale near FAME MEDICAL College Hunsur road near Yelwala.
Price 1299 per sq feet .
Genuine Buyers Only Contact
9741093410 / 6364145148
Brokers Excuse please

SITES FOR SALE
40x60 W/F
LVR ENCLAVE
Near Srirampura Ring Road Adjacent to Preethi Layout
9900466811, 9980270076

PROPERTY FOR SALE
1. Commercial Property for Sale in Dattagalli
2. NIE College Road
3. Residential Property for Sale in Vijaynagar 2nd & 3rd stage
Book now save 20% Hurry up
Call: 9008111454

REQUIRED LAND IN MYSORE
Required 2 to 3 acres of land In Mysore for Warehouse Purpose Close to Highway
Contact:
636 6236 307
948 0834 448

Reputed Distributor Company in Hebbal Industrial Area
REQUIRED
1.Female Office Assistance - 2 No's
Any Degree1 year Experience (M S Excel, M S Word & Mail Coversation)
2.Marketing Executives - 2 No's
Male Candidates
Education- ITI/Dip in Mech
1 Year Experience
CALL: 7899947666

Exchange your old sofa set to brand new sofa set. Also repair done.
Mob: 9591012944

WE ARE HIRING
Role : Financial Management Executive
Vacancies: 20.
Qual: Any Degree or 12th plus
WALK IN-INTERVIEW :
APRIL 27, 28. (MONDAY, TUESDAY)
TIME: 10 AM - 4PM.Contact:
7204660789 / 6366851645
Email : info@auwexa.com

HOUSE FOR SALE
As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 32 Lakhs 20x40 36 Lakhs 30x40 58 Lakhs Near St. Joseph School 20x40 - 48 Lakhs 30x50 - 89.5 Lakhs	Near KSRTC Bus Depot. 20x30 24 Lakhs 20x40 24.6 Lakhs 30x40 29 Lakhs, Contact

8123387555 / 7259348777

IMMEDIATE REQUIREMENT
Hiring for A Reputed US Based Outsourcing Company (Non-Voice)
Position-Process Associate
Qualification
BSc, BCA, BCom, BBM, BBA, MCA, MBA, MSc, MCom (BE candidates can also apply)
KEY ATTRIBUTES :
- Proficiency in English Communication
- Must be a Computer Literate
- Good in Analytical skills (Non-Technical)
- Both Male & Female with Good Typing skills

Kindly attach your recent Passport size PHOTO to your Resume. Interested Candidates can APPLY IMMEDIATELY
Walk-In Interview: 24th Apr-16th May 2026
Walk-In Time: 10:00am to 5:00pm
For any queries, please contact
Mob: 8147424748
SOURCE HUB — One click convenience to outsourcing
Venue: Source Hub India Pvt Ltd #11, Second Floor, E & F Block, Above Royal Enfield Showroom Udayaravi Road, Kuvempunagar, Mysore - 570023.

JAYA CHATURVEDI MEMORIAL
ಶ್ರೀ Shree Vidya Academy
ಶ್ರೀ ವಿದ್ಯಾ ಅಕಾಡೆಮಿ
Shyadanahalli, Opp. Kusuma Chandrashekar Choultry, K.R.S. Road, Mysuru
Congratulations 100% SSLC Result (1st Batch - 2025-26)
Proud Moment for our School
Congratulations to our Students, Teachers & Parents



NIMISHA.S	KRUTHI.R	BABITHA GOWDA.R	VANDITH M GOWDA	KARAN.S.V
576/625 (92%)	554/625 (89%)	545/625 (87%)	476/625 (76%)	471/625 (75%)

Admission open - Pre Nursery to 10th standard
Mob: 89047 16005, 99451 00620

Sri Adichunchanagiri Shikshana Trust ®
BGS PU COLLEGE
Kuvempunagar, Mysuru
Hearty Congratulations to II PUC Toppers - 2026



596 Harshika A	594 RAMYASHREE B	592 VARSHINI T J	592 JANYATHA G MAHESH	591 VISMAYA K	591 SANJANA Y
591 SADANA SWAMY	590 SIDDHARTHA S RAJ	590 THUSHIKA MALIGE	590 NIHARIKA J	590 H S SRINANDAN	589 VIDYA KADAM
589 NISARGA M R	589 RAGHAV M M	589 HARSHITHA ASHOK	589 GOWRI KANTHARAJU	589 CHINMAYI H M	589 ASFIYA SAMREEN
589 SONIYA M	588 PRIYADARSHINI M	588 THANVI K	588 ANVITHA R BHAT	587 INCHARA M	587 KRISHA B
587 JANHAVI B	587 SUHAN	586 CHETHANYA N G	586 HARSITHA L	586 ANKITHA M	586 HARSHITHA SANGARAJU
585 SHREERAKSHA K S	585 SARIKA G	585 MEGHANA P	585 RACHANA PRASAD	585 HARSHITHA H	585 HAASINI V
584 SONASHREE S P	584 C V PRAJAN	584 KRUTHI Y R	584 VIKAS O P	583 CHANDANA R B	583 ABHINAV N
583 SUSHANTH KJ	583 KUSHI A	582 SINCHANA K M	582 CHAITHRA	582 KRUPA	582 VISHVAJITH S
582 MANASA P V	582 BHUVAN S ALADHI	582 LIKITHA G K	582 PUNYASHRI S	582 HARSHINI R	582 HEMISHA PRASAD G S
581 THANMAYEE M	581 MADHURA R	581 SHUBHI SHRIVASTAV	581 K MUKESH SUDARSON	581 ARPITHA	581 ANUPRIYA N
581 SONIA S	580 MONIKA R	580 DRUTHI S	580 M RITISHA		

100% RESULT
DISTINCTIONS - 584
CENTUM - 138

Hostel & Transportation facilities Available
Integrated Coaching for CET / JEE / NEET
FREE ADMISSION - ABOVE 96% in 10th Std.
Admissions purely based on Merit
6361581460 / 98453 76685 / 77603 89498 / 9964644060